TIGHT BINDING BOOK

UNIVERSAL LIBRARY
OU_198222
UNIVERSAL LIBRARY

ಕರ್ನಾಟಕ ಸತ್ಪುರುಷ ಮಂಡಲ, ಭಾಗ ೫.

# ಶ್ರೀ ಕೃಷ್ಣಾವಧೂತರ ಚರಿತ್ರವು

ರಾಮಚಂದ್ರ ತ್ರ್ಯಂಬಕ [illegible]

ಸಹಕಾರಿ ಸಂಪಾದಕ ಸ. ಚ.

ಆನಂದವನ.

ಪ್ರಕಾಶಕ—

ಯಲ್ಲೋ ಗುಡ್ಡೋ ಕುಲಕರ್ಣಿ,

ಸಂಪಾದಕ ಸ. ಚ.

ಆನಂದವನ.

1924

ಬೆಲೆ ೮ ಆಣೆ

ಆನಂದವನ-ಅಗಡಿಯು

ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ

ಭಿಕ್ಷಾಜಿಪಂತ ಪರಶುರಾಮಪಂತ ಕಾಳೆ,

ಇವರಿಂದ ಮುದ್ರಿಸಲ್ಪಟ್ಟಿತು.

# ಅರ್ಪಣಪತ್ರಿಕೆ.

ಈ ಸತ್ಪುರುಷರ ಚರಿತ್ರರೂಪೀ

ಪುಷ್ಪವು

ಶ್ರೀಮತ್ಪೂಜ್ಯ ಚಿದಂಬರದೀಕ್ಷಿತರು ಬಡ್ನಿ

ಈ ಮಹಾನುಭಾವರಿಗೆ

ಅವರಲ್ಲಿದ್ದ ಸದಾ ಶಾಂತವೃತ್ತಿ, ಸದ್ವಿದ್ಯಾಲಾಲಸೆ,

ನಿಸ್ಪೃಹತೆ, ಪರೋಪಕಾರಾದಿ ಸಜ್ಜನರಿಗೆ

ಉಚಿತವಾದ ಸದ್ಗುಣಗಳ ಅಭಿನಂದನಕ್ಕಾಗಿ

ಗ್ರಂಥಕರ್ತೃವಿನಿಂದ ಭಕ್ತಿಪುರಸ್ಸರವಾಗಿ

ಸಮರ್ಪಿಸಲ್ಪಟ್ಟಿದೆ.

ವಿಧೇಯ,

ಆರ್. ಟಿ. ಕರ್ಪೂರ.





## ಪ್ರಸ್ತಾವನೆ.

ಮಹಾಮಹಿಮರಾದ ಶ್ರೀ ಕೃಷ್ಣಾವಧೂತರ ಚರಿತ್ರವು ವಾಚಕರ ಕೈಸೇರಿದ್ದಕ್ಕಾಗಿ ತುಂಬಾಸಂತೋಷವಾಗುತ್ತದೆ. ನಮ್ಮ ವಾಚಕರಿಗೋಸ್ಕರ ಈ ಚರಿತ್ರವು ಬೈಲಿಗೆ ಬರಲಿಕ್ಕೆ ನಮ್ಮ ಪರಮಪೂಜ್ಯರಾದ ಬಡ್ಡಿಯ ಶ್ರೀ ಚಿದಂಬರದೀಕ್ಷಿತರವರೇ ಕಾರಣರಾದದ್ದರಿಂದ ಈ ಚರಿತ್ರದ ಎಲ್ಲ ಶ್ರೇಯಸ್ಸು ಅವರನ್ನೇ ಹೊಂದಿಕೊಳ್ಳುತ್ತಿದೆಯೆಂದು ಪ್ರಾಂಜಲ ಮನಸ್ಸಿನಿಂದ ಹೇಳಲಾಗುವದು. ಪ್ರಸ್ತುತ ಲೇಖಕನು ಶ್ರೀ ಕ್ಷೇತ್ರ ಆನಂದವನದ ಶ್ರೀ ಶೇಷಾಚಲೇಶ್ವರನಿಗೆ ಬೆಳ್ಳಿಯ ಮುಕುಟವನ್ನು ಮಾಡಿಸುವದಕ್ಕೋಸ್ಕರ ಬೇಡುವದಸ ಶ್ರೀ ಕ್ಷೇತ್ರಗುಳಕಹೊಸೂರಿಗೆ ಹೋದಾಗ ಶ್ರೀ ದೀಕ್ಷಿತರವರು ತಮ್ಮಲ್ಲಿದ್ದ ಶ್ರೀ ಕೃಷ್ಣಾವಧೂತರ ಚರಿತ್ರೆಯೊಂದನ್ನು ತೋರಿಸಿದರು. ಶ್ರೀ ದೀಕ್ಷಿತರು ತೋರಿಸಿದ ಆ ಚರಿತ್ರೆಯು ಮಹಾರಾಷ್ಟ್ರ ಭಾಷೆಯಲ್ಲಿ ಬರೆಯಲ್ಪಟ್ಟದ್ದಾಗಿತ್ತು. ಪರಮುಕ್ತನಾಗುವಾಗ ಶ್ರೀ ಕೃಷ್ಣಾವಧೂತರ ವಿಷಯದಲ್ಲಿ ನಮ್ಮ ದೀಕ್ಷಿತರವರ ಸ್ವಾನುಭವಗಳು ಬಹಳ. ಆದ್ದರಿಂದ ನದಾ

ಶಾಂತರೂ ವಿದ್ಯಾವಿಭೂಷಿತರೂ, ಸದ್ವಂಶಸಂಭೂತರೂ ಆದ ದೀಕ್ಷಿತರವರು ಪ್ರಸ್ತುತ ಲೇಖಕನಿಗೆ ಆ ದಿವ್ಯಚರಿತ್ರವನ್ನು ಕನ್ನಡಿಗರ ಕಲ್ಯಾಣಕ್ಕೋಸ್ಕರ ಪರಿವರ್ತಿಸಲಿಕ್ಕೆ ಆಜ್ಞಾಪಿಸಿದರು. ಮತ್ತು ತಮ್ಮಲ್ಲಿದ್ದ ಆ ಚರಿತ್ರವನ್ನು ಕೊಟ್ಟರು, ಆ ಮಹನೀಯರುಪ್ರಸಾದರೂಪದಿಂದ ಕೊಟ್ಟ ಆ ಪುಸ್ತಕವನ್ನು ಬಹು ಭಕ್ತಿಯಿಂದ ಪರಿಗ್ರಹಿಸಿ ಚರಿತ್ರಲೇಖನಕ್ಕೆ ಬೇರೆ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡು ಪ್ರಸ್ತುತದ ಲೇಖಕನು ವಾಚಕರ ಕೈಯಲ್ಲಿರುವ ಈ ಪುಸ್ತಕವನ್ನು ಸಿದ್ಧಪಡಿಸಿರುವನು.

ಮಹಾತ್ಮರ ಚರಿತ್ರವನ್ನು ಬರೆಯುವದಕ್ಕೆ ಶುದ್ಧವಾದ ಮನಸ್ಸುಬೇಕು; ಪವಿತ್ರಾಚರಣೆಗಳ ಅನುಭವವುಬೇಕು. ಈಶ್ವರೀ ಮಹಿಮೆಯು ಗುರುತು ಇರಬೇಕು; ಇವುಗಳಲ್ಲಾವುದೂ ಇರದ ಪ್ರಸ್ತುತ ಲೇಖಕನು ಈ ಮಹಾಮಹಿಮರ ಚರಿತ್ರಲೇಖನಕ್ಕೆ ಕೈಹಾಕಿದ್ದು ಸಾಹಸವೇ ಸರಿ! ಆದರೂ ಶ್ರೀ ಶೇಷಾಚಲ ಸದ್ಗುರುವಿನ ಪರಮ ಪವಿತ್ರಸ್ಥಾನದ ಬೆಂಬಲವಿದ್ದದ್ದರಿಂದ ಚರಿತ್ರವು ಆಗತಕ್ಕಷ್ಟು ರಸವತ್ತಾಗದಿದ್ದರೂ ತಕ್ಕಮಟ್ಟಿಗಾದರೂ ಭಕ್ತಿ ರಸಾವಿಷ್ಕರಣವನ್ನು ಮಾಡಿಕೊಂಡಿರುತ್ತದೆಂಬ ನಂಬಿಗೆಯಿರುವದು. ಕಥಾಕಾದಂಬರಿಗಳನ್ನು ಮನಸೋಕ್ತವಾಗಿ ಬರೆಯಬಹುದು. ಆದರೆ ಸಜ್ಜನರ ಹೃದಯವನ್ನು ತಿಳಿದು ಅವರ ಚರಿತ್ರಗಳನ್ನು ಬರೆಯುವದು ಕಠಿಣವು. ಯಾಕೆಂದರೆ ಇದಕ್ಕೆ ಅಡಿಗಡಿಗೆ ಸಜ್ಜನರ ಸಹವಾಸವೇ ಬೇಕು. ಸಜ್ಜನರ ಸಹವಾಸವಿಲ್ಲದೆ ಸಜ್ಜನರ ಹೃದಯವು ತಿಳಿಯುವದಿಲ್ಲ. ಇದನ್ನೆಲ್ಲ ಅರಿತ ನಮ್ಮ ಪ್ರಾಜ್ಞವಾಚಕರು ಸಾವಧಾನ ಚಿತ್ತದಿಂದ ಚರಿತ್ರವನ್ನು ಓದಿ ಲೇಖಕನ ದೋಷಗಳನ್ನು ಗಣನೆಗೆ ತಾರದೆ ಕೃತಾರ್ಥರಾಗಬೇಕೆಂದು ಪ್ರಾರ್ಥಿಸಲಾಗುವದು.

ಋಷಿಪ್ರಣೀತ ಸ್ತೋತ್ರಪಾಠಗಳನ್ನಾಗಲಿ, ಪುರಾಣ-ಪುಣ್ಯಕಥೆಗಳನ್ನಾಗಲಿ, ಸಜ್ಜನರ ಚರಿತ್ರಗಳನ್ನಾಗಲಿ, ಬೇರೆ ಪಾರಾಯಣಕ್ಕೆ ಯೋಗ್ಯವಾದ ಗ್ರಂಥಗಳನ್ನಾಗಲಿ ಶುಚಿರ್ಭೂತ ಸ್ಥಿತಿಯಲ್ಲಿ ಓದಬೇಕೆಂಬ ನಿರ್ಬಂಧವನ್ನು ನಮ್ಮ ವಾಚಕರು ಇಲ್ಲಿ ಸ್ಮರಣೆಗೆ ತಂದುಕೊಳ್ಳಬೇಕು. ಯಾಕೆಂದರೆ ಅಂತರ್ಬಾಹ್ಯಗಳಲ್ಲಿ

ಶುಚಿರ್ಭೂತತೆ ಅರ್ಥಾತ್ ಪವಿತ್ರತೆ ಇರದಿದ್ದರೆ ಆ ಗ್ರಂಥಗಳ ಪಠಣದಿಂದ ಏನೂ ಪ್ರಯೋಜನವಾಗುವದಿಲ್ಲ. ಈ ಎಲ್ಲ ಪವಿತ್ರ ಗ್ರಂಥಗಳು ಮನಸ್ಸಿನ ಪರಿಪೋಷಕ ಗಳಾದ್ದರಿಂದ ಇವನ್ನು ಶುದ್ಧ ಮನಸ್ಸಿನಿಂದಲೇ ಓದುವದು ಶ್ರೇಯಸ್ಕರವು. ಮನ ಸ್ಸಿನ ಸ್ಥಿರತೆಯೇ ಅರ್ಥಾತ್ ಸಮಾಧಾನವೇ ಸುಖದ ಮೂಲವಾದ್ದರಿಂದ ಸುಖ ಸಂಪಾದಿಸಬೇಕೆಂದು ಹವಣಿಸುವವರು ಮನಸ್ಸಿನ ಸ್ಥಿರತೆಯನ್ನು ಪಡೆಯಬೇಕು. ಕ್ಷಣಿಕಚಿತ್ತರಾದವರಿಗೆ ಅಂದರೆ ಅಸ್ಥಿರ ಮನಸ್ಸಿನವರಿಗೆ ಎಷ್ಟು ಐಶ್ವರ್ಯವಿ ದ್ದರೂ ಅದರಿಂದ ಅವರಿಗೆ ಸುಖವೆನಿಸುವದಿಲ್ಲ. ಅವರು ಸದಾ ತಳಮಳಿಸುತ್ತಲೇ ಇರುವರು. ಈ ತಳಮಳವೇ ದುಃಖವೆಂಬದು ಸರ್ವರಿಗೂ ವೇದ್ಯವಾದ ವಿಷ ಯವು. ಈ ತಳಮಳವನ್ನು ಹೋಗಲಾಡಿಸುವದೇ ನಿಜವಾದ ಮನಸ್ಸಿನ ಸ್ಥಿರತೆ; ಈ ಸ್ಥಿರತೆಯು, ಸಜ್ಜನರ ಚರಿತ್ರಶ್ರವಣ-ಪುಣ್ಯಕಥೆಗಳ ಅವಲೋಕನ ಇವುಗಳಿಂದ ಸಾಧ್ಯವಾಗಬಹುದಾದ ವಿಷಯವು; ಅಂತೇ ನಮ್ಮ ಚಂದ್ರಿಕೆಯ ವಾಚಕರಿಗೆ ಪ್ರತಿ ವರುಷ ಒಬ್ಬೊಬ್ಬ ಮಹನೀಯರ ಚರಿತ್ರವನ್ನು ಒದಗಿಸಿ ಕೊಡುವದನ್ನು ಯೋಜಿಸಿ ದ್ದಾಗಿದೆ. ಇರಲಿ. ಪ್ರಸ್ತುತ ಚರಿತ್ರವು ಬೈಲಿಗೆ ಬರಲು ಮೇಲೆ ಉಲ್ಲೇಖಿಸಿದಂತೆ ನಮ್ಮ ಪೂಜ್ಯ ದೀಕ್ಷಿತರವರೇ ಕಾರಣೀಭೂತರಾದ್ದರಿಂದ ಅವರ ಸನ್ನಿಧಿಯಲ್ಲಿ ಈ ಪೂಜ್ಯ ಗ್ರಂಥವನ್ನು ಸಮರ್ಪಿಸಿ ಈ ಚಿಕ್ಕ ಪ್ರಸ್ತಾವನೆಯನ್ನು ಮುಗಿಸಿ ಲೇಖ ಕನು ವಿರಮಿಸುವನು.

ಸಜ್ಜನವಿಧೇಯ.

ಆನಂದವನ
ತಾ|| ೨೫-೧-೨೪ }

ಆರ್. ಟಿ. ಕರ್ಪೂರ.
ಸಬ್ ಎಡಿಟರ ಸ. ಚ.

# ವಿಷಯಾನುಕ್ರಮಣಿಕೆ.


| ಪ್ರಕರಣ | ವಿಷಯ | ಪುಟ |
|---|---|---|
| ೧ | ಬಾಲ್ಯವೃತ್ತ. | ೧ |
| ೨ | ಸದ್ಗುರುಸೇವೆ. | ೯ |
| ೩ | ಕರವೀರಕ್ಷೇತ್ರಕ್ಕೆಪ್ರಯಾಣ. | ೧೬ |
| ೪ | ಸಂಸಾರಿಕರ ಸಂಗವು ವಿರಕ್ತರಿಗೆ ಮಾರಕವು. | ೨೧ |
| ೫ | ಹಲವು ಅಮಾನುಷ ಲೀಲೆಗಳು. | ೩೩ |
| ೬ | ಅವತಾರ ಮಾಹಾತ್ಮ್ಯ. | ೩೭ |
| ೭ | ಸಂಶಯಾತ್ಮಾ ವಿನಶ್ಯತಿ. | ೪೩ |
| ೮ | ಯೋಗಾಚಾರ್ಯ. | ೪೮ |
| ೯ | ಸಮಾಧೀನಸ್ಥಿತಿ. | ೫೨ |
| ೧೦ | ದಿನಚರ್ಯೆಯೂ ಗೋಮಾತೆಯ ಮಹತ್ವವೂ. | ೫೬ |
| ೧೧ | ಭಕ್ತಿಯ ರಹಸ್ಯ. | ೬೧ |
| ೧೨ | ಪ್ರಪಂಚ ಪಾರಮಾರ್ಥ. | ೬೫ |
| ೧೩ | ತಾರಾಬಾಯಿಯ ಪುಣ್ಯ. | ೬೮ |
| ೧೪ | ಸಮಾಧಿ. | ೭೩ |
| ೧೫ | ಉಪಸಂಹಾರ | ೭೭ |


*

# ಶ್ರೀ ಕೃಷ್ಣಾವಧೂತರ ಚರಿತ್ರೆ.

## ೧ನೆಯ ಪ್ರಕರಣ.

### ಬಾಲ್ಯವೃತ್ತ.

ವಿಜಯನಗರದ ಸಾಮ್ರಾಜ್ಯವು ಘನತೆಗೇರಿದ ಕಾಲದಲ್ಲಿ ಕರ್ನಾಟಕದ ಒಂದು ಭಾಗವೆನಿಸಿದ ಕರವೀರಪ್ರಾಂತದಲ್ಲಿ ಶಿರೋಳವೆಂಬ ಗ್ರಾಮವು ಸುಪ್ರಸಿದ್ಧವಾಗಿತ್ತು. ಈ ಗ್ರಾಮವು ಶ್ರೀ ದತ್ತಕ್ಷೇತ್ರಗಳಲ್ಲಿ ಒಂದಾದ ಶ್ರೀನರಸೋಬನವಾಡಿಯ ಪಂಚಕ್ರೋಶದಲ್ಲಿರುವದಲ್ಲದೆ ಶ್ರೀಗುರು ಚರಿತ್ರದಲ್ಲಿ ಈ ಗ್ರಾಮದಲ್ಲಿ ಶ್ರೀಗುರುವಿನ ಲೀಲೆಗಳು ಪ್ರಕಟವಾದ ಬಗ್ಗೆ ಉಲ್ಲೇಖವಿರುವದು. ಅಂದಬಳಿಕ ಅದರ ಪವಿತ್ರತೆಯನ್ನು ಇಲ್ಲಿ ವರ್ಣಿಸುವ ಕಾರಣವಿಲ್ಲ. ಇಂಥ ಪರಮಪಾತ್ರವಾದ ಹಾಗು ಕ್ಷೇತ್ರ ಸದೃಶವಾದ ಈ ಗ್ರಾಮದ ನೆರೆಯಲ್ಲಿ 'ನಾಂದಣೀ' ಎಂಬ ಸಣ್ಣ ಗ್ರಾಮವಿರುವದು. ಈ ಊರಲ್ಲಿ ಬಹುಕಾಲದಿಂದ ಹೆಸರುವಾಸಿಯಾದ ಜೋಯಿಸರದೊಂದು ಮನೆತನವಿರುವದು. ಈ ಮನೆತನದವರು ಋಗ್ವೇದೀ ಶಾಕಲಶಾಖೆಯ ಬ್ರಾಹ್ಮಣರಿದ್ದು, ಜ್ಯೋತಿಷವೃತ್ತಿಯು ಧರ್ಮಶಾಸ್ತ್ರದಲ್ಲಿ ನಿಂದ್ಯವೆನಿಸಿದ್ದರೂ ಅದರ ದೋಷವು ತಟ್ಟದಂತೆ ಪವಿತ್ರತೆಯನ್ನು ಕಾಯ್ದುಕೊಂಡಿದ್ದರು. ದುರಾನ್ನ-ದುರ್ದಾನಗಳನ್ನು ಇವರು ಸ್ವೀಕರಿಸುತ್ತಿದ್ದಿಲ್ಲ. ಒಂದು ವೇಳೆ ಅಂಥ ಪ್ರಸಂಗವೇ ಬಂದಲ್ಲಿ ಶಾಸ್ತ್ರಸಮ್ಮತವಾದ ಕೃಚ್ಛ್ರಕ್ರಿಯಾದಿ ಪ್ರಾಯಶ್ಚಿತ್ತಗಳನ್ನುಹೊಂದಿ ಪರಿಶುದ್ಧರಾಗುತ್ತಿದ್ದರು.

ಈ ಪವಿತ್ರವಂಶದಲ್ಲಿ ಉದಯಿಸಿದ ಆಪ್ಪಾಭಟ್ಟರೆಂಬೋರ್ವರು ಪರಮಭಾವಿಕರಾಗಿದ್ದರು. ಅವರ ಕರ್ಮನಿಷ್ಠೆಯು ಶ್ಲಾಘನೀಯವಾಗಿತ್ತು. ಪಾಪಭೀರುಗಳೂ ಸದ್ಧರ್ಮ-ಸದಾಚಾರಗಳ ಪ್ರಿಯರೂ ಆದ ಆ ಅಪ್ಪಾಜಿಭಟ್ಟರಿಗೆ ಅನ್ನಪೂರ್ಣಾಬಾಯಿಯು ಸಹಧರ್ಮಚಾರಿಣಿಯಾಗಿದ್ದಳು. ಈ ಸಾಧ್ವೀಮಣಿಯಾದರೂ ಅತ್ಯಂತ

ಪತಿಭಕ್ತಿಪರಾಯಣಳು. ಪತಿಸೇವೆಯ ಹೊರತು, ಅನ್ಯಸಂಗತಿಗಳನ್ನು ಆ ಸತೀಮಣಿಯು ಇಚ್ಛಿಸುತ್ತಿರಲಿಲ್ಲ. ಸದಾ ಪತಿಸೇವೆಯಿಂದ-ಪತಿಧ್ಯಾನದಿಂದ ಆಕೆಯ ಹೃದಯವು ಪೂತವಾಗಿತ್ತು. ಈ ದಂಪತಿಗಳನ್ನು ನೋಡಿದರೆ ಪೂರ್ವಕಾಲದ ಅತ್ರಿ-ಅನಸೂಯಾ ದಂಪತಿಗಳ ಸ್ಮರಣವು ತತ್ಕಾಲದಲ್ಲಿ ಆಗುವಂತಿತ್ತು. ಅಪ್ಪಾಭಟ್ಟರು ತಪಸ್ವಿಗಳು. ಅವರ ಧರ್ಮಪತ್ನಿಯಾದ ಅನ್ನಪೂರ್ಣಾಮಾತೆಯು ಸತೀಶಿರೋಮಣಿಯು. ಇಂದಬಳಿಕ ಆ ಪುಣ್ಯರಾಶಿಗಳ ಉದರದಲ್ಲಿ ನಮ್ಮ ಚರಿತ್ರನಾಯಕರಂಥ ಸಾಧುರತ್ನವು ಅವತರಿಸಿದ್ದು ಏನಾಶ್ಚರ್ಯವು? ಯಾರು ಸರ್ವದಾ ಧರ್ಮವೃತ್ತಿಯಿಂದ ಜೀವನ ಮಾಡುವರೋ, ಮತ್ತು ಯಾರು ಪರನಾರಿ-ಪರದ್ರವ್ಯಗಳಿಂದರೆ ಉಪಯೋಗವನ್ನು ಬಯಸುವರೋ, ಯಾರು ಭಗವಂತನಲ್ಲಿ ಅನನ್ಯಗತಿಕರಾಗಿ ನಡೆಯುವರೋ ಅಂಥವರು ಲೋಕಕಲ್ಯಾಣಕ್ಕೆ ಕಾರಣರೆನ್ನುವದರಲ್ಲಿ ಆಭ್ಯಂತರವೇನು? ಲೋಕಹಿತವರ್ಧಕ ಕಾರ್ಯಗಳಲ್ಲಿ ಸರ್ವದಾ ತಲ್ಲೀನವಾಗಿರುವದೇ ನಿಜವಾದ ಬ್ರಾಹ್ಮಣವೃತ್ತಿಯು; ಈ ವೃತ್ತಿಯುಳ್ಳ ಬ್ರಾಹ್ಮಣನು ಲೋಕವಂದ್ಯನೆಂದು ಹೇಳಬಹುದು. ಇಷ್ಟೇ ಅಲ್ಲ; ಆತನು ಭಗವಂತನಿಗೆ ಕೂಡಾ ಮಾನ್ಯನಾಗುತ್ತಾನೆ. ಅಂತೇ ಪೂರ್ವದಲ್ಲಿ ಭೃಗುಋಷಿಯು ತಾಡನ ಮಾಡಿದಾಗ ಪರಮಾತ್ಮನು ಆತನ ಚರಣಗಳನ್ನು ಪೂಜಿಸಿದನು. ಹೇಳತಕ್ಕ ಮುಖ್ಯಾಂಶವಿಷ್ಟೇ; ಯಾವಾತನು ವಿಷಯಜನ್ಯಸುಖವು ಮಿಥ್ಯವೆಂದು ಅದರ ಸಂಪಾದನೆಗೆ ಜಗತ್ತಿನಲ್ಲಿ ಜೀವನ ಕಲಹವನ್ನು ನಡಿಸದೆ ಭೂತದಯಾಪರನಾಗಿ ಪ್ರಾಣಿಗಳ ಕಲ್ಯಾಣವನ್ನು ಬಯಸುವನೋ ಅವನೇ ಲೋಕಮಾನ್ಯನು!

ಇಂಥ ಲೋಕಮಾನ್ಯರಲ್ಲಿ ಗಣಿಸಲ್ಪಡಲು ನಮ್ಮ ಅಪ್ಪಾಭಟ್ಟರು ಯೋಗ್ಯರಿದ್ದರು. ಅವರ ಪರಿಶುದ್ಧಹೃದಯವನ್ನು ನೋಡುವ ಇಚ್ಛೆಯು ಪರಮಾತ್ಮನಿಗೆ ಆಯಿತೋ ಏನೋ ಎನ್ನುವಂತೆ ಶಾಲಿವಾಹನ ಶಕದ ೧೭೫೭ರಲ್ಲಿ ಭಗವಂತನ ಅಂಶಸಂಭೂತರಾದ ನಮ್ಮ ಚರಿತ್ರನಾಯಕರು ಲೋಕನಿಮಿತ್ತನಾಗಿ ಅನ್ನಪೂರ್ಣಾಮಾತೆಯ ಉದರದಿಂದ ಅವತರಿಸಿದರು. ಅವರು ಅವತರಿಸಿದ ಸಮಯವು ಪ್ರಶಾಂತವಾಗಿತ್ತು. ಪಕ್ಷಿಮೊದಲು ಮಾಡಿಕೊಂಡು ಸಮಸ್ತ ಪ್ರಾಣಿಗಳು ಮನೋಲ್ಲಾಸದಿಂದ ಯುಕ್ತವಾಗಿದ್ದವು. ಅಪ್ಪಾಭಟ್ಟರು ತಮ್ಮ ಈ ಜೇಷ್ಠಪುತ್ರನ ಮುಖವನ್ನು ನೋಡಿ ಜಾತಕರ್ಮಾದಿಗಳನ್ನು ವಿಧಿಪೂರ್ವಕವಾಗಿ ನೆರವೇರಿಸಿದರು. ಭಟ್ಟರು ಮನೆತನದಿಂದ ಜೋಯಿಸರಾದ್ದರಿಂದ ಮಗನ ಜನ್ಮಕುಂಡಲಿಯನ್ನು ಸಾಧಿಲಿಕ್ಕೆ ಅವರಿಗೆ ತಡಹಿಡಿಯಲಿಲ್ಲ. ಅವರು ಸರಿಯಾಗಿ ಲಗ್ನಸಾಧಿಸಿ, ಮಗನು ಮಹಾಪುರು

ಷನಾಗುವನೆಂಬದನ್ನು ಕಂಡುಹಿಡಿದರು. ೧೨ನೆಯ ದಿನಕ್ಕೆ ಲೌಕಿಕನಾಮಕರಣವು ಬಹು ಸಂಭ್ರಮದಿಂದ ಮಾಡಲ್ಪಟ್ಟಿತು. ಸುಮಂಗಲೆಯರು ಆ ಶಿಶುವಿಗೆ ಕೃಷ್ಣನೆಂದು ಕರೆದರು.

ಗೋಕುಲದಲ್ಲಿ ಶ್ರೀಕೃಷ್ಣದೇವನು ಬೆಳೆದಂತೆಯೂ, ಉದಯಭಾನುವು ಗಗನಮಂಡಲದಲ್ಲಿ ಬೆಳೆಯುವಂತೆಯೂ ತೇಜಸ್ವಿಯಾದ ನಮ್ಮ ಕೃಷ್ಣಬಾಲಕನು ಅಪ್ಪಭಟ್ಟರ ಮನೆಯಲ್ಲಿ ಬೆಳೆಯುತ್ತ ನಡೆದನು. ಯಜ್ಞಯಾಗಾದಿಗಳನ್ನು ಮಾಡಿದರೂ ಪರಮಾತ್ಮನ ಸಗುಣರೂಪವನ್ನು ಬರಿಯ ಕಣ್ಣಿನಿಂದ ನೋಡುವದು ಪೂರ್ವದಲ್ಲಿ ದುಸ್ತರವಾಗಿತ್ತು. ವಸ್ತುಸ್ಥಿತಿಯು ಹೀಗಿದ್ದು, ಈಗ ಅಪ್ಪಾಭಟ್ಟರ ಮನೆಯಲ್ಲಿ ತ್ರೈಮೂರ್ತಿಸ್ವರೂಪನಾದ ಶ್ರೀದತ್ತನು ಬಾಲಕನಾಗಿ ಮಾತಾ-ಪಿತೃಗಳನ್ನು ಆನಂದಗೊಳಿಸತೊಡಗಿದನು. ದುರ್ಲಭವಾದ ಪರಮಾತ್ಮನು ಇಷ್ಟು ಸುಲಭನಾಗಲಿಕ್ಕೆ ಆತನು ಕಲಿಯುಗದಲ್ಲಿ ಪ್ರಾಣಿಗಳಿಗೋಸ್ಕರ ಇಟ್ಟ ಸೌಲಭ್ಯವೇ ಕಾರಣವೆಂದು ಹೇಳಲಾಗುವದು. ಪರಿಶುದ್ಧವಾದ ಭಕ್ತಿಮಾರ್ಗವು ಈ ಕಾಲದಲ್ಲಿ ಪರಮಾತ್ಮನ ಪ್ರಸನ್ನತೆಯನ್ನು ಪಡೆಯಲಿಕ್ಕೂ, ಆತನ ಸಗುಣರೂಪವನ್ನು ನೋಡಲಿಕ್ಕೂ ಸಾಧನೀಭೂತವಾಗಿದೆ. ಈ ಮಾರ್ಗಪ್ರವರ್ತಕನಿಗೆ ದ್ರವ್ಯ ಬೇಡ, ರಾಜಾಶ್ರಯ ಬೇಡ, ವೇದೋಪನಿಷತ್ತುಗಳ ಅರ್ಥಜ್ಞಾನಬೇಡ, ಶಾಸ್ತ್ರಪಾರಂಗತತೆಯು ಬೇಡ. ಬಹಳಹೇಳುವದೇನು? ಯಾವ ಸಹಾಯ ಸಂಪತ್ತೂ ಬೇಡ. ಪರಮಾತ್ಮನ ವಿಷಯವಾಗಿ ಅಖಂಡವಾದ ಪ್ರೇಮವೊಂದಿದ್ದರೆ ಸಾಕು. ಪರಮಾತ್ಮನ ದರುಶನವಾಗುವದು. ಈ ಪ್ರಕಾರದ ಭಕ್ತಿ-ಸಂಪತ್ತು ಇದ್ದದರಿಂದಲೇ ಅಪ್ಪಾಭಟ್ಟರು ಅವ್ಯಕ್ತ ಪೂರ್ಣಪರಬ್ರಹ್ಮನನ್ನು ಸಗುಣರೂಪದಿಂದ ಸ್ವಸದನಕ್ಕೆ ಬರಮಾಡಿಕೊಂಡು ಆತನ ಲಾಲನ-ಪೋಷಣಾದಿ ಸೇವೆಗಳಲ್ಲಿ ಧನ್ಯತೆಯನ್ನು ಪಡೆದರು.

ಅಪ್ಪಾಭಟ್ಟರಿಗೆ ಕೃಷ್ಣಬಾಲಕನ ತರುವಾಯ ಮೂವರು ಮಕ್ಕಳು ಹುಟ್ಟಿದರು. ಅವರಿಗೆ ಕ್ರಮವಾಗಿ ವಾಸುದೇವ, ಮಲ್ಹಾರಿ, ಯೋಗಾಯಿ ಎಂಬ ಹೆಸರುಗಳಿದ್ದವು. ಒಂದಕ್ಕೆ ನಿವೃತ್ತಿ, ಜ್ಞಾನದೇವ, ಸೋಪಾನ, ಮುಕ್ತಾಬಾಯಿ ಎಂಬ ನಾಲ್ಕು ಜನ ಸಂತ[illegible]ಯು ಅವತರಿಸಿದ್ದು ಪ್ರಸಿದ್ಧವಿರುವದು. ಈಗ ನಮ್ಮ ಅಪ್ಪಾಭಟ್ಟರಿಗೆ ಹುಟ್ಟಿದ ಈ ನಾಲ್ವರನ್ನು ನೋಡಿದರೆ, ಆ ನಿವೃತ್ತಿ-ಜ್ಞಾನದೇವರೇ ಮೊದಲಾದವರು ಪುನರಾವತಾರವನ್ನು ತಳೆದಂತೆ ಭಾಸವಾಗುವದು. ಇರಲಿ; ಕೃಷ್ಣಬಾಲಕನು ಸ್ವಲ್ಪದೊಡ್ಡವನಾಗಲು ತಾಯಿ-ತಂದೆಗಳು ಅವನಿಗೆ ಆಸ್ಥೆಯಿಂದ ಮಾತು ಕಲಿಸಹೋದರು. ಆದರೆ ಪೂರ್ಣ ಪರಬ್ರಹ್ಮನಾದ ಆತನು

ಮೌನವನ್ನು ಧರಿಸಿದನು. ಈ ಅಂತರಂಗದ ಕಾರಣವನ್ನು ಅರಿಯದೆ, ಮಾತಾಪಿತೃಗಳೂ ನೆರೆಹೊರೆಯವರೂ ಆತನಿಗೆ ಮೂಕನೆಂದು ಅನ್ನಹತ್ತಿದರು. ಹೀಗೆ ಕೆಲವು ದಿವಸಗಳು ಕ್ರಮಿಸಲು ಕೃಷ್ಣಬಾಲಕನು ಮೌನವನ್ನು ತ್ಯಜಿಸಿ ಮಿತವಾಗಿ ಮಾತನಾಡಲಾರಂಭಿಸಿದನು. ಆಗ ಆತನ ತಾಯಿ-ತಂದೆಗಳಿಗಾದ ಆನಂದವನ್ನು ಬಣ್ಣಿಸಲಾಸಲ್ಲ' ಸಾಂಸಾರಿಕರಿಗೆ ವಿಷಯಾನಂದವು ಪರಮಪ್ರಿಯವೆನಿಸುವದು. ಅಪ್ಪಾಭಟ್ಟರು ತಪೋನಿಷ್ಠರಾಗಿದ್ದರೂ ಸಾಂಸಾರಿಕ ಧರ್ಮಾನುಸರಿಸಿ ಹರ್ಷ-ಶೋಕಗಳ ಎಳೆತದಿಂದ ಮುಕ್ತರಾಗಿದ್ದಿಲ್ಲ, ಮಗನ ಜಾತಕದಿಂದ ಆತನು ಮಹಾಪುರುಷನಾಗುವನೆಂದು ಸಂಭ್ರಮಪಡುತ್ತಿದ್ದರೂ ಅವನು ದೊಡ್ಡವನಾಗುತ್ತ ನಡೆದ ಹಾಗೆ ಅವರ ಆ ಸಂಭ್ರಮವು ಕಡಿಮೆಯಾಗುತ್ತ ಬಂದಿತು. ಯಾಕೆಂದರೆ ಮಗನು ಬಹು ಚತುರನೂ ವಿದ್ಯಾವಿನಯ ಸಂಪನ್ನನೂ ಆಗುವನೆಂದು ಅವರು ತಿಳಿದಿದ್ದರು. ಆದರೆ ಕೃಷ್ಣಬಾಲಕನ ಸ್ವಭಾವವು ಇದಕ್ಕೆ ವಿರುದ್ಧವಾಯಿತು. ಅವನು ಮಂದಿಯೊಡನೆ ಹೆಚ್ಚು ಮಾತನಾಡದಾದನು. ಯಾವಾಗಲೂ ಧ್ಯಾನಸ್ಥನಾಗಿ ಕುಳಿತುಕೊಳ್ಳುತ್ತಿದ್ದನು. ಇವರು ನಮ್ಮ ಅಪ್ತರು; ಇವರು ಹೊರಗಿನವರು ಎಂಬ ತಾರತಮ್ಯವು ಅವನಲ್ಲಿ ಇಲ್ಲದಾಯಿತು. ಯಾರಾದರೂ ಏನಾದರೂ ಕೇಳಿದರೆ ಅವರ ಮುಖವನ್ನು ಮಿಕಿ ಮಿಕಿ ನೋಡಿ ನಗುವನು. ಯಾವದಕ್ಕೂ ಸಮಸಂಜಸ ಉತ್ತರ ಕೊಡುತ್ತಿದ್ದಿಲ್ಲ. ಇದರಿಂದ ನೆರೆಹೊರೆಯವರು ."ಇದೇನು ಖೋಡಿ ಹುಡುಗ! ಮಾತಿಲ್ಲ-ಕಥೆಯಿಲ್ಲ ಹಗಲೆಲ್ಲ ಕಣ್ಣು ಮುಚ್ಚಿಕೊಂಡು ದೆವ್ವಬಡಿದವರ ಹಾಗೆ ಕುಳಿತುಬಿಡುತ್ತದೆ. ಇದೇನು ಮುಂದೆ ನಾಲ್ಕು ಮಂದಿಯೊಳಗೆ ಕೂಡಿ ಸಂಸಾರವ ಮಾಡಿ ಹೆಸರು ಪಡೆಯಲಿಕ್ಕೊಳ್ಳುವದು? ಹುಚ್ಚನು, ಇವನು ನಿಶ್ಚಯವಾಗಿ ಹುಚ್ಚನು; ಅಪ್ಪಾಭಟ್ಟರ ಹೊಟ್ಟೆಯಲ್ಲಿ ಇದೇನು ಹುಟ್ಟಿತು" ಎಂದು ಆಡಿಕೊಳ್ಳಲಾರಂಭಿಸಿದರು. ಹೆಣ್ಣುಮಕ್ಕಳಿಗೆ ಅಭಿಮಾನ ಬಹಳ; ಅನ್ನಪೂರ್ಣಾಬಾಯಿಯು ಮಗನ ನಿಂದೆಯನ್ನು ಕೇಳಿ ದಿನಾಲು ಅಳುವಳು, ಭೂಮಿಗೆ ಭಾರಭೂತವಾದ ಇಂಥ ಈ ಮಗುವು ಯಾಕೆ ಹುಟ್ಟಿದ್ದಿತು ಎಂದು ಅವಳು ಹಳಹಳಿಸುವಳು. ದೇವರಿಗೆ ಬೇಡಿಕೊಳ್ಳಹೋಗಿ ಯಾವ ಪರಮಾತ್ಮನನ್ನು ಕುರಿತು ತಾನು ಬೇಡಿಕೊಳ್ಳುವಳೋ ಆ ಪರಮಾತ್ಮನೇ ತನ್ನ ಪುಣ್ಯಪರಿಪಾಕಾತ್ ಮಗನಾಗಿ ಜನಿಸಿ ಈ ರೀತಿ ಅಲೌಕಿಕ ನಟನೆಯನ್ನು ಮಾಡುವನೆಂದು ಆಕೆಗೆ ತಿಳಿಯದೆ ಹೋಯಿತು. ಅಪ್ಪಾಭಟ್ಟರಂತೂ ಯಾವುದನ್ನೂ ತಿಳಿಯದ ತಮ್ಮ ಕರ್ಮಾನುಷ್ಠಾನದಲ್ಲಿ ಕಾಲಕಳೆಯಲಾರಂಭಿಸಿದರು.

ಕೃಷ್ಣಬಾಲಕನು ದೊಡ್ಡವನಾದರೂ ಶಾಲೆಗೆ ಹೋಗಲಿಲ್ಲ. ಆ ಕಾಲಕ್ಕೆ

ರೂಢವಾಗಿದ್ದ ಪಂತೋಜೀ ಶಿಕ್ಷಣವನ್ನು ಅವನು ಪ್ರೀತಿಸದಾದನು. ಯಾರಾದರೂ ಭಿಕ್ಷುಕರು ಬಾಗಿಲಕ್ಕೆ ಬಂದರೆ ಮುಂದೊರೆದು ಹೋಗಿ ಅವರಿಗೆ ಭಿಕ್ಷೆ ನೀಡುವನು; ಮತ್ತು ಅವರನ್ನು ಕಂಡು ಮನದಲ್ಲಿ ಚಡಪಡಿಸುವನು. ಬಡಬಗ್ಗರು ವಸ್ತ್ರಗಳಿಲ್ಲದೆ ತಿರುಗುತ್ತಿದ್ದರೆ ತನ್ನ ಮೈಮೇಲಿನ ವಸ್ತ್ರವನ್ನು ಅವರಿಗೆ ಕೊಟ್ಟು ತಾನು ಬರಿಮೈಯಿಂದ ಆಡ್ಡಾಡುವನು. ಅಪ್ಪಾಭಟ್ಟರು ಮಗನ ಈ ವರ್ತನದ ವಿಷಯವಾಗಿ ಹಲವು ಸಾರೆ ಸಿಟ್ಟುಮಾಡಿದರು; ಬಡಿಗಳಿಂದ ಶಿಕ್ಷಿಸಿದರು. ತಂದೆಯು ಏನು ಮಾಡಿದರೂ ಆತನು ಒಂದುತುಟಿ ಎರಡು ಮಾಡದೆ ಹಾಸ್ಯ ಮುಖದಿಂದಲೇ ಇರುತ್ತಿದನು. ತನ್ನ ಕಾಯಿಕವನ್ನೇನೂ ಅವನು ಬಡಲಿಲ್ಲ. ಚಿಕ್ಕಂದಿನಲ್ಲಿಯೇ ಈ ರೀತಿಯಾಗಿ ಭೂತದಯೆಯು ಅವನಲ್ಲಿ ವ್ಯಕ್ತವಾಗಹತ್ತಿತು. ಇಂಥ ನಿರ್ವ್ಯಾಜ ಭೂತದಯೆಯು ಮಹಾತ್ಮರ ಲಕ್ಷಣವೆಂಬದನ್ನು ಅವರು ಅರಿಯದೆ ಹೋದರು. ಉತ್ತಮವಾದ ರತ್ನದ ಪರೀಕ್ಷೆಯನ್ನು ತಜ್ಞನೇ ತಿಳಿಯಬಲ್ಲನು; ಅನ್ಯರಿಗೆ ಅದು ಸಾಮಾನ್ಯವಾದ ಕಾಜಿನ ಮಣಿಯೇ ಸರಿ! ಅದರಂತೆ ನಮ್ಮ ಕೃಷ್ಣಬಾಲಕನು ಅಜ್ಞ ಜನರಿಗೆ ಹುಚ್ಚನೂ ಮೂರ್ಖನೂ ಆಗಿ ತೋರಿದನು. ಅವನು ಮಂದಿಗೆ ವಸ್ತ್ರಕೊಡುವದೂ ಅನ್ನಕೊಡುವದೂ ಅವಿವೇಕತನದ ಕೆಲಸಗಳಾದವು. ಜ್ಞಾನಿಗಳಿಗೆ ವಿವೇಕವೆಂದು ತೋರಿದ್ದು ಅಜ್ಞಾನಿಗಳಾದ ನಮಗೆ ಅವಿವೇಕವೆನಿಸುವದು. ಅದರಂತೆ ಅಜ್ಞಾನಿಗಳಿಗೆ ವಿವೇಕವೆಂದು ತೋರಿದ್ದು, ಜ್ಞಾನಿಗಳಿಗೆ ಅವಿವೇಕವೆನಿಸುವದು. ಇದು ಜ್ಞಾನದೆಸೆಗೂ ಅಜ್ಞಾನದೆಸೆಗೂ ಇರುವ ವೈಗುಣ್ಯವನ್ನು ವ್ಯಕ್ತಗೊಳಿಸುತ್ತದೆ. ಇರಲಿ.

ಕೃಷ್ಣಬಾಲಕನ ಈ ಕೃತಿಗಳು ಹ್ಯಾಗೆ ಹ್ಯಾಗೆ ಹೆಚ್ಚುತ್ತ ನಡೆದವೋ ಹಾಗೆ ಹಾಗೆ ಆತನು ಲೋಕದವರ ದೃಷ್ಟಿಯಿಂದ ಅಪಹಾಸ್ಯಕ್ಕೊಳಗಾಗತೊಡಗಿದನು. ಆದರೆ ಈ ಅಪಹಾಸ್ಯದ ವ್ಯಸನವು ಕೃಷ್ಣಬಾಲಕನಿಗೆ ಕನಸು-ಮನಸುಗಳಲ್ಲಿ ಕೂಡಾ ಇರಲಿಲ್ಲ. ಅವನ ತಾಯಿ-ತಂದೆಗಳು ಮಾತ್ರ ಈ ಕಾಷ್ಠವ್ಯಸನವನ್ನು ಹಚ್ಚಿಕೊಂಡು ಕೊರಗಹತ್ತಿದ್ದರು. ಕೃಷ್ಣಕುಮಾರನನ್ನು ಜನರು ಹುಚ್ಚನೆಂದು ಕರೆಯುತ್ತಿದ್ದರು. ಓಣಿಯಲ್ಲಿ ತುಂಟಹುಡುಗರು ಹುಚ್ಚಾ ಹುಚ್ಚಾ ಎಂದು ಅವನನ್ನು ಬೆನ್ನಟ್ಟುತ್ತಿದ್ದರೂ ಈಶ್ವರೀ ಮಾಯೆಯಿಂದ ಅವನನ್ನು ಮರೆಯುವಂತೆ ಇದ್ದಿಲ್ಲ. ಕೃಷ್ಣಕುಮಾರನು ತಮ್ಮ ಮನೆಗೆ ಬರದಿದ್ದರೆ ಅಂದು ಜನರಿಗೆ ಚಡಪಡಿಕೆಯಾಗುತ್ತಿತ್ತು. ಅವನ ದೈವೀ ತೇಜಸ್ಸಿನಿಂದೊಪ್ಪುವ ಮುಖಕಮಲವನ್ನು ನೋಡುವ ಕುತೂಹಲವು ಎಲ್ಲರಿಗೂ ಆಗುತ್ತಿತ್ತು; ಆದರೆ ಅವರು ಆ ಕುತೂಹಲವನ್ನು ಸದ್ಭಾವನೆಯಲ್ಲಿ ವಿನಿಯೋಗಿಸಿಕೊಂ

ಡಿದ್ದರೆ ಅವರ ಸಮಾನ ಧನ್ಯರು ಯಾರೂ ಇಲ್ಲವೆಂದು ಹೇಳಬಹುದಾಗಿತ್ತು.

ಈ ಮೇರೆಗೆ ಜನರು ವಿನೋದಾರ್ಥವಾಗಿ ಕೃಷ್ಣಬಾಲಕನನ್ನು ಕರೆಕರೆದು ಅವನಿಗೆ ತಿನ್ನಲಿಕ್ಕೆ ಏನಾದರೂ ಕೊಡುತ್ತಿದ್ದರು. ಮಂದಿ ಏನು ಕೊಟ್ಟರೂ ಆ ಬಾಲಕನು ಅದನ್ನು ತಿನ್ನುತ್ತಿದ್ದಿಲ್ಲ. ನಿರಿಚ್ಛನಾದ ಆತನಿಗೆ ತಿನಸು-ಉಣಿಸುಗಳ ಆಸೆಯೆಲ್ಲಿಂದ ಬರಬೇಕು? ಅವರು ಕೊಟ್ಟ ಪದಾರ್ಥವನ್ನು ಅವನು ಭೂಮಿಯಲ್ಲಿ ಹೂಳಿಬಿಡುತ್ತಿದ್ದನು. ಹುರಿದ ಕಡಲೆ-ಅರಳು ಮೊದಲಾದವುಗಳನ್ನು ಕೊಟ್ಟರೆ, ಅವನು ಅವನ್ನು ತೆಗೆದುಕೊಂಡು ಓಡಿಹೋಗಿ ತನ್ನ ಇಚ್ಛೆಗೆ ಬಂದವರ ಹೊಲದಲ್ಲಿ ಬಿತ್ತಿ ಬರುತ್ತಿದ್ದನು. ಜನರು ಅವನ ಈ ಹುಚ್ಚುತನಕ್ಕೆ ನಗುವರು. ಆದರೆ ಈಶ್ವರೀಸಾಮರ್ಥ್ಯವು ಜನರನ್ನು ದಂಗುಬಡಿಸದೆ ಹ್ಯಾಗೆ ಬಿಟ್ಟೀತು? ಕೃಷ್ಣಬಾಲಕನು ಯಾವ ಹೊಲದಲ್ಲಿ ಆ ಹುರಿದ ಧಾನ್ಯಗಳನ್ನು ಬಿತ್ತಿಬರುತ್ತಿದ್ದನೋ ಆ ಹೊಲದಲ್ಲಿ ಆ ವರುಷ ಸರ್ವೋತ್ಕೃಷ್ಟವಾದ ಬೆಳೆ ಬರುತ್ತಿತ್ತು. ಮೊದಲು ಸೆರೆ ಕಾಳು ಸಿಗದ ಹೊಲದಲ್ಲಿ ಈ ಬಾಲಕನ ಬಿತ್ತಿಗೆಯ ಪ್ರಭಾವದಿಂದ ಖಂಡಗಗಟ್ಟಲೆ ಧಾನ್ಯಗಳು ಬೆಳೆಯುತ್ತಿದ್ದವು. ಜನರಿಗೆ ಅರಿದೆನಿಸಹತ್ತಿತು. ಆದರೂ ಈಶ್ವರೀ ಮಾಯೆಯು ಬಲಿಷ್ಠವಿರುವದರಿಂದ ಜನರಿಗೆ ಬಾಲಕನ ಐಶ್ವರತೇಜವು ಗೋಚರಿಸದೆ ಹೋಯಿತು. ಒಮ್ಮೊಮ್ಮೆ ಆತನು ಬಿತ್ತಿದ ಹುರಿದ ಕಾಳಗಳೇ ನಾಟಿ ಸಸಿಯಾಗಿ ಫಲಗಳನ್ನು ಕೊಡುತ್ತಿದ್ದವು. ಇಷ್ಟು ಅಘಟಿತ ಘಟನೆಗಳು ನಡೆಯುತ್ತಿದ್ದರೂ ನಾಂದಣೀಗ್ರಾಮಸ್ಥರ ಪಾಲಿಗೆ ಕೃಷ್ಣಬಾಲಕನು ಮಾತಿಗೆ ಬಾರದವನಾದನು.

ಮರ್ಕಟದ ಕೊರಳಲ್ಲಿ ರತ್ನಹಾರವನ್ನು ಹಾಕಿದರೆ, ಅದು ಹ್ಯಾಗೆ ಅದರ ಬೆಲೆಯನ್ನು ತಿಳಿಯುವದಿಲ್ಲವೋ, ಮತ್ತು ವಿವಿಧ ಪಕ್ವಾನ್ನಗಳನ್ನು ಹೊಟ್ಟೆಯಲ್ಲಿ ತುಂಬಿಕೊಂಡ ಗಡಿಗೆಯು ಹ್ಯಾಗೆ ಪಕ್ವಾನ್ನದ ರುಚಿಯನ್ನು ಕಂಡು ಹಿಡಿಯಲಾರದೋ ಹಾಗೆ ನಾಂದಣೀನಿವಾಸಿಗಳು ಆ ಬಾಲಕನನ್ನು ತಿಳಿಯದೆ ಇದ್ದದ್ದು, ಅಸ್ವಾಭಾವಿಕವಲ್ಲವು; ಹೀಗೆ ನಾಂದಣೀ ಜನರಿಗೆ ಮೂರ್ಖಸದೃಶನಾಗಿ ತೋರುವ ಆ ಪೂರ್ಣಪರಬ್ರಹ್ಮನು ಕಾಲಕಳೆಯುತ್ತಿರಲು, ಏಳು ವರುಷಗಳು ಸಂದಿಹೋದವು. ಈ ಅವಧಿಯಲ್ಲಿ ಅವನ ಕಡುತರವಾದ ವೈರಾಗ್ಯವು ಪ್ರಕಾಶಕ್ಕೆ ಬಂದಿತು. ಎತ್ತು ಏರಿಗೆ ಎಳೆದರೆ ಕೋಣವು ಕೆರೆಗೆಳೆಯಿತೆಂಬ ಗಾದೆಯಂತೆ ನಮ್ಮ ಚರಿತ್ರನಾಯಕನು ವೈರಾಗ್ಯದ ದಾರಿಯನ್ನು ಹಿಡಿದರೆ ಅವನ ಆಪ್ತೇಷ್ಟರು ಅವನಿಗೆ ಲೌಕಿಕಜ್ಞಾನ ಮಾಡಿಕೊಡಲು ಹವಣಿಸುವರು. ಅವನು ಆದರ ಕಡೆಗೆ ಲಕ್ಷ್ಯಕೊಡದಿರಲು, ಚನ್ನಾಗಿ ತಾಡನ ಮಾಡುವರು. ಹೀಗೆ ದಿನಾಲು ಪೆಟ್ಟುಗಳನ್ನು ತಿಂದು ಕೃಷ್ಣಬಾಲಕನ

ಶರೀರವು ಹಣ್ಣುಹಣ್ಣಾಯಿತು. ಆದರೂ ಆ ಬಾಲಕನ ಆನಂದವೃತ್ತಿಯು ಲವ ಮಾತ್ರವಾದರೂ ಕುಂದಲಿಲ್ಲ. ಬಂಗಾರವನ್ನು ಎಷ್ಟು ಸಾರೆ ಬೆಂಕಿಯಲ್ಲಿ ಹಾಕಿ, ಸುತ್ತಿಗೆಯಿಂದ ಬಡಿದರೂ ಅದು ಹ್ಯಾಗೆ ತನ್ನ ಸುಗುಣವನ್ನು ಬಿಡದೆ ಅತ್ಯಧಿಕ ವಾಗಿ ಕಾಂತಿಮಯವಾಗುವದೋ ಹಾಗೆ, ಕೃಷ್ಣಬಾಲಕನು ಸುವರ್ಣದೋಪಾದಿ ಯಲ್ಲಿ ಹೆಚ್ಚು ಹೆಚ್ಚು ತೇಜೋವಂತನಾಗತೊಡಗಿದನು. ಎಷ್ಟು ಪ್ರಯತ್ನಪಟ್ಟರೂ ಅವನಿಗೆ ಪ್ರವೃತ್ತಿಮಾರ್ಗವು ಮನಸ್ಸಿಗೆ ನಡುವದಿಲ್ಲೆಂದು ಕಂಡುಬರಲು, ಅವನ ಶರೀರಸಂಬಂಧಿಕರು ಅವನ ಉಸಾಬರಿಯನ್ನು ಬಿಟ್ಟುಬಿಟ್ಟರು. ಕೃಷ್ಣಬಾಲಕನು ತನ್ನ ಸ್ಥಿತಪ್ರಜ್ಞಾಸ್ಥಿತಿಯಲ್ಲಿ ಇರುವ ಹಾಗೆ ಇದ್ದುಬಿಟ್ಟನು.

ಹೀಗಿರಲು, ಕೃಷ್ಣಬಾಲಕನು ಮನದಲ್ಲಿ ಆಲೋಚಿಸಿದ್ದೇನಂದರೆ,—ಈ ದೇಹ ವು ಹುಟ್ಟಿ ಬಂದು ಬಹಳ ದಿವಸಗಳಾದವು. ಇದರಿಂದ ಆಗತಕ್ಕ ಕಾರ್ಯಗಳುಬಹ ಳವಾಗಿವೆ. ಮನುಷ್ಯ ಜನ್ಮಕ್ಕೆ ಬಂದ ಬಳಿಕ ಯಾವನು ಸಮರ್ಥನಾದ ಸದ್ಗುರುವಿಗೆ ಶರಣು ಹೋಗುವದಿಲ್ಲವೋ ಅವನ ಮನುಷ್ಯ ಜನ್ಮವು ನಿರರ್ಥಕವೇ ಸರಿ. ಯಾ ಕೆಂದರೆ ಸದ್ಗುರು ಕೃಪೆಯಿಲ್ಲದೆ ಜ್ಞಾನೋದಯವಾಗಲಾರದು. ವಿಷಯಗಳ ಸಂ ಗವು ಸುಂಕರೋಗದಂತೆ ಹಾನಿಕಾರಕವಿದ್ದದರಿಂದ ಅದನ್ನು ಪರಿತ್ಯಜಿಸಿ ಸ್ಥಿರವಾದ ಅಲಿಪ್ತ ಸ್ಥಿತಿಯನ್ನು ಹೊಂದಬೇಕಾದರೆ ಜ್ಞಾನಸದಾಶ್ರವಾದ ಸದ್ಗುರುವಿನ ಚರಣ ಸೇವೆಯ ಹೊರತು ನಮ್ಮಂಥ ಮನುಷ್ಯರಿಗೆ ಗತ್ಯಂತರವೇ ಇಲ್ಲ. ಆದ್ದರಿಂದಲೇ ಮುಮುಕ್ಷುಗಳಾದ ಮಹನೀಯರು "ಧ್ಯಾನಮೂಲಂ ಗುರೋರ್ಮೂರ್ತಿಃ। ಪೂಜಾಮೂಲಂ ಗುರೋಃಪದಮ್॥ ಮಂತ್ರಮೂಲಂ ಗುರೋರ್ವಾಕ್ಯಂ। ಮೋಕ್ಷಮೂಲಂ ಗುರೋಃಕೃಪಾ॥" ಎಂಬದಾಗಿ ಸದ್ಗುರುವಿನ ಉಪಾಸನೆಯ ವರ್ಣನವನ್ನು ಮಾಡಿರುವರು. ಆದ್ದರಿಂದ ನಾನಾದರೂ ಶೀಘ್ರವಾಗಿ ಗುರು ಚರಣಗಳನ್ನು ಆಶ್ರಯಿಸಬೇಕು."

ಈ ರೀತಿಯಾಗಿ ಕೃಷ್ಣಬಾಲಕನು ಮನದಲ್ಲಿಯೇ ಯೋಚಿಸಿ ಮನೆಯಲ್ಲಿ ಯಾರಿಗೂ ತಿಳಿಸದೆ ತಮ್ಮ ಮನೆತನದ ಕುಲಸ್ವಾಮಿಯಾದ ಖಂಡೋಬನ ಉಪಾಸ ನೆಯನ್ನು ಮಾಡಬೇಕೆಂದು ಮಂಗಸೂಳಿ ಎಂಬ ಗ್ರಾಮಕ್ಕೆ ಹೊರಟು ಹೋದನು. ಅಲ್ಲಿ ಆತನು ಏಕನಿಷ್ಠೆಯಿಂದ ಖಂಡೋಬನ ಆರಾಧನೆಯನ್ನು ಮಾಡುತ್ತಿರಲು, ಇತ್ತ ಮನೆಯಲ್ಲಿ ತಾಯಿ-ತಂದೆಗಳು ಅಕಸ್ಮಾತ್ತಾಗಿ ಮಗನು ಇಲ್ಲದಂತಾದ್ದರಿಂದ ಗಾಬರಿಯಾದರು. ದಡ್ಡನಾಗಲಿ, ಮೂರ್ಖನಾಗಲಿ ಹೊಟ್ಟೆಯಲ್ಲಿ ಹುಟ್ಟಿದ ಮಗನು ತಮ್ಮ ಕಣ್ಣೆದುರಿಗೇ ಇರಬೇಕೆಂದು ತಾಯಿ-ತಂದೆಗಳು ಬಯಸುವದು

ಸ್ವಾಭಾವಿಕವು; ಅದರಂತೆ ಅಪ್ಪಾಭಟ್ಟರೂ ಅನ್ನಪೂರ್ಣಾ ಯಾತ್ರೆಯೂ ಇಚ್ಛಿಸುತ್ತಿದ್ದರು. ಆದರೆ ಅಕಸ್ಮಾತ್ತಾಗಿ ಉಂಟಾದ ಈ ಪುತ್ರವಿಯೋಗದಿಂದ ಅವರು ತಳಮಳಗೊಂಡು ಸುತ್ತಲೂ ಜನರನ್ನು ಕಳಿಸಿ ಶೋಧಕ್ಕೆ ಉಪಕ್ರಮಿಸಿದರು. ಆಗ ಅವರಿಗೆ ಮಂಗಸೂಳಿಯಲ್ಲಿದ್ದ ಸುದ್ದಿಯು ಹತ್ತಿತು. ಕೂಡಲೆ ಅವರು ಅಲ್ಲಿಗೆ ಹೋಗಲು, ಯಾವ ಮಾಯೆಯಿಂದಲೋ ಅವರನ್ನು ತಪ್ಪಿಸಿ, ಕೃಷ್ಣಬಾಲಕನು ನಾಂದಣೀ ಗ್ರಾಮಕ್ಕೆ ಬಂದು ಎಂದಿನಂತೆ ಧ್ಯಾನತತ್ಪರನಾಗಿ ಇರತೊಡಗಿದನು. ಅವನ ಮಾತಾಪಿತೃಗಳು ಮಂಗಸೂಳಿಯಲ್ಲಿ ಮಗನನ್ನು ಕಾಣದೆ ಸಪ್ಪಮೋರೆ ಮಾಡಿಕೊಂಡು ಮನೆಗೆ ಬರಲು ಮನೆಯಲ್ಲಿದ್ದ ಮಗನನ್ನು ನೋಡಿ ತುಂಬಾ ಸಂತೋಷಪಟ್ಟರು.

ಮಂಗಸೂಳಿಗೆ ಹೋಗಿಬಂದ ಬಳಿಕ ಕೃಷ್ಣಬಾಲಕನು ಗುರುಸೇವೆಯ ವಿಷಯವಾಗಿ ಹೆಚ್ಚು ಉತ್ಸುಕನಾದನು. ಅವನ ಹೃದಯದಲ್ಲಿ ತಳಮಳವುಂಟಾಯಿತು. ಧ್ರುವನು ಭಗವತ್ಪ್ರಾಪ್ತಿಯ ವಿಷಯದಲ್ಲಿ ಆತುರಪಟ್ಟಂತೆಯೂ ರಾಜಾರಾಮ ಮಹಾರಾಜರು ಗುರುದರ್ಶನಕ್ಕೆ ಉತ್ಸುಕರಾದಂತೆಯೂ ಕೃಷ್ಣಬಾಲಕನು ಗುರುದರ್ಶನವನ್ನು ಎದುರುನೋಡ ಹತ್ತಿದನು. ಆತನು ದತ್ತಾಂಶನಾಗಿದ್ದರೂ ಸಾಮಾನ್ಯ ಮನುಷ್ಯರಂತೆ ಹೀಗೆ ಗುರುದರ್ಶನಕ್ಕೆ ತಳಮಳಗೊಂಡದ್ದನ್ನು ನೋಡಿ ವಾಚಕರು ಸಂಶಯಗೊಳ್ಳಬಹುದು. ಸರ್ವಜ್ಞಾನಿಯಾದ ಆತನು ಸಮಸ್ತರಿಗೂ ಗುರುವಾಗಿರಲು ತನಗೆ ಗುರುವನ್ನು ಮಾಡಿಕೊಳ್ಳುವ ಅವಶ್ಯಕತೆಯಿದ್ದಿಲ್ಲವೆಂದೂ, ಹಾಗೆ ಅವಶ್ಯ ತೋರಿದ ಪಕ್ಷದಲ್ಲಿ ತನ್ನ ಗುರುವು ಎಲ್ಲಿರುವನೆಂಬದನ್ನು ಜ್ಞಾನದೃಷ್ಟಿಯಿಂದ ತಿಳಿಯಬಹುದಾಗಿತ್ತೆಂದೂ ಹಲವರು ಆಕ್ಷೇಪಿಸಬಹುದು. ಅವರ ಈ ಆಕ್ಷೇಪಣೆಗಳಿಗೆ ಸಮಾಧಾನವೇನಂದರೆ,—ಅವತಾರಿಕರಾದ ಮಹಾತ್ಮರಲ್ಲಿ ಜನ್ಮಸಿದ್ಧವಾದ ಗುರುತ್ವವಿದ್ದರೂ ಅವರು ಲೌಕಿಕಾರ್ಥವಾಗಿ ಗುರುವನ್ನು ಮಾಡಿಕೊಂಡು ಲೋಕದಲ್ಲಿ "ನಗುರೋರಧಿಕಂ" ಎಂಬ ವಾಕ್ಯವನ್ನು ಸತ್ಯವನ್ನಾಗಿಮಾಡಬೇಕಾಗುತ್ತದೆ. ಮುಖ್ಯವಾಗಿ ಸಾಮಾನ್ಯಮನುಷ್ಯರಿಗೆ ದಾರಿಯನ್ನು ತೋರಿಸುವದೇ ಅವತಾರಿಕರಾದ ಸಜ್ಜನರ ಕೆಲಸವಾದ್ದರಿಂದ ಅವರು ಸಾಮಾನ್ಯರಿಗೆ ಶಕ್ಯವಾಗುವ ದಾರಿಯಿಂದಲೇ ಮಾರ್ಗಕ್ರಮಣ ಮಾಡುವರು; ಅದರಂತೆ ಪ್ರಸ್ತುತದ ನಮ್ಮ ಕೃಷ್ಣಕುಮಾರರೂ ತಮ್ಮ ಬಾಲ್ಯದಲ್ಲಿ ಗುರುದರ್ಶನೋತ್ಸುಕರಾಗಿ ಜನ್ಮವೆತ್ತಿದ ಪ್ರತಿಯೊಬ್ಬನೂ ಸದ್ಗುರುಸೇವೆಮಾಡುವದವಶ್ಯವೆಂಬದನ್ನು ತೋರಿಸಿಕೊಟ್ಟರು.

## ಎರಡನೇ ಪ್ರಕರಣ.

## ಸದ್ಗುರು ಸೇವೆ.

ಕೃಷ್ಣಬಾಲಕನು ಬಾಲ್ಯದಲ್ಲಿಯೇ ಸದ್ಗುರು ದರ್ಶನೋಪದೇಶಪ್ರಸಾದದ್ದನ್ನು ನಮ್ಮ ವಾಚಕರು ಹಿಂದಿನ ಪ್ರಕರಣದಲ್ಲಿಯೇ ಓದಿತಿಳಿದಿರುವರು. ಜನ್ಮತಃ ವಿರಕ್ತಸ್ವಭಾವದ ಆ ಕುವರನಿಗೆ ಪ್ರಾಪಂಚಿಕರ ಸಂಗವು ಸಾಕೆನಿಸಿತು. ಮಾತಾಪಿತೃಗಳ ಶುಷ್ಕ ಶೋಕವು ಬೇಸರಕೊಟ್ಟಿತು ಆಗ ಆತನು ಮನದಲ್ಲಿ ವಿಚಾರಿಸತೊಡಗಿದನೇನಂದರೆ-''ನರಜನ್ಮವು ಉತ್ತಮವಾದದ್ದೆಂದು ಸರ್ವರೂ ಕೊಂಡಾಡುವರು, ಆದರೆ ಯಾತರಸಲುವಾಗಿ? ಸಂಪೂರ್ಣ ಅವಯವಗಳು ಇದಕ್ಕೆ ಇರುವದರಿಂದಲೂ, ಬುದ್ಧಿಶಕ್ತಿಯಿರುವದರಿಂದಲೂ ಇದು ಅಪಾರವಾಗಿ ವಿಷಯಸೌಖ್ಯವನ್ನು ಹೊಂದಲಿಕ್ಕೆ ಶಕ್ತವಾಗಿದೆಯೆಂದು ಇದನ್ನು ಶ್ರೇಷ್ಠವಾಗಿದೆಯೆಂದು ಕರೆಯುವದೇ? ಛೀ, ಹೀಗೆ ತಿಳಿಯುವವರನ್ನು ಮೂರ್ಖರೆಂದು ಭಾವಿಸಬೇಕು. ಇಂಥವರಿಗೆ ದೊರೆತ ನರಜನ್ಮವು ನಿರರ್ಥಕವಾಯಿತೆಂದು ತಿಳಿಯಬೇಕು. ಕಂಟಕಯುಕ್ತವಾದ ವೃಕ್ಷಕ್ಕೆ ಬಹು ಮೂಲ್ಯವಾದ ಪೀತಾಂಬರವನ್ನು ಹೊಚ್ಚಿದರೆ, ಆ ಪೀತಾಂಬರವು ಛಿನ್ನವಿಚ್ಛಿನ್ನವಾಗಿ ಹ್ಯಾಗೆ ಉಪಯೋಗಕ್ಕೆ ಬಾರದೆ ಹೋಗುವದೋ ಹಾಗೆ ವಿಷಯಸುಖ ಬಯಸುವವರಿಗೆ ಪ್ರಾಪ್ತವಾದ ನರದೇಹದ ಅವಸ್ಥೆಯಾಗುವದೆಂದು ತಿಳಿಯಬೇಕು. ಸದ್ಗುರುಸೇವೆಯಿಂದ ಭವಸಾಗರವನ್ನು ದಾಟಲಿಕ್ಕೆ ಈ ನರದೇಹವು ಉತ್ತಮವಾದ ನೌಕೆಯಂತಿರುವದರಿಂದ ಈ ನರದೇಹವು ಶ್ರೇಷ್ಠವೆಂದು ಹೇಳಿರುವರು. ಇನ್ನುಳಿದ ಜನ್ಮಗಳಲ್ಲಿ ಜೀವನು ಸದ್ಗುರುಕೃಪೆಯನ್ನು ಪಡೆಯಲಿಕ್ಕೆ ಶಕ್ತನಾಗಲಾರನಾದ್ದರಿಂದ ಇದಕ್ಕಾಗಿಯೇ ನರಜನ್ಮವು ಜೀವನಿಗೆ ಅತ್ಯಂತ ಪ್ರಿಯವೆನಿಸುವದು. ತಾಪಸರಲ್ಲಿ ಶಿವನು ಶ್ರೇಷ್ಠನಿರುವಂತೆಯೂ, ತರುಗಳಲ್ಲಿ ಕಲ್ಪತರುವು ಶ್ರೇಷ್ಠವಿರುವಂತೆಯೂ, ಸರ್ವಜನ್ಮಗಳಲ್ಲಿ ನರಜನ್ಮವು ಶ್ರೇಷ್ಠತಮವಿರುವದು. ಇಂಥ ಶ್ರೇಷ್ಠಪ್ರತಿಯ ಜನ್ಮವು ನಿಸ್ಸಾರ ತುಚ್ಛವಾದ ವಿಷಯಸುಖವನ್ನು ಬಯಸಿ ತತ್ಸಿದ್ಧ್ಯರ್ಥವಾಗಿಯೇ ತೊಳಲಾಡುವವನ ಜನ್ಮಕ್ಕೆ ಧಿಕ್ಕಾ

ರವು! ಯಾಕೆಂದರೆ; ನರಜನ್ಮದ ಮುಖ್ಯವೈಭವ-ಸಂಪತ್ತುಗಳೆಂದರೆ, ಸದ್ಗುರುಸೇವೆಯೇ ಆಗಿರುವದು. ದೇಹವು ಉದುರಿಹೋಗುವದು ವೈಭವವು ನಾಶವಾಗುವದು. ಆದರೆ ಪದರಿನಲ್ಲಿ ಬದ್ಧ ಸದ್ಗುರುಸೇವೆಯು ಮಾತ್ರ ಕಾಲತ್ರಯದಲ್ಲಿಯೂ ನಾಶವಾಗಲಾರದು ಈ ಸೇವೆಯೇ ಮನುಷ್ಯನಿಗೆ ಶಾಶ್ವತಸುಖಫಲದಾಯಕವು.''

ಈ ಮೇರೆಗೆ ಕೃಷ್ಣಕುವರನು ಮನದಲ್ಲಿ ಯೋಚಿಸಿ, ತಾನು ಯಾವ ಸದ್ಗುರುವಿಗೆ ಶರಣು ಹೋಗಬೇಕೆಂಬದನ್ನು ನಿರ್ಣಯಿಸಿಕೊಂಡನು. ಆ ಕಾಲಕ್ಕೆ ಮಿರಜಿಯಲ್ಲಿ ಅಣ್ಣಾಬುವಾ ಎಂಬವರೊಬ್ಬ ಸಜ್ಜನಶ್ರೇಷ್ಠರು ಇರುತ್ತಿದ್ದರು. ಅವರು ಸುಪ್ರಸಿದ್ಧ ಶ್ರೀ ಅಕ್ಕಲಕೋಟೇ ಸ್ವಾಮಿಗಳವರ ಪರಮ ಶಿಷ್ಯರು. ಶ್ರೀ ಸ್ವಾಮಿಗಳ ಸೇವೆಯಿಂದ ಬುವಾನವರು ಧನ್ಯರಾಗಿದ್ದರು. ಅವರ ದ್ವೈತವು ನಾಶವಾಗಿತ್ತು ಗುರುಕೃಪೆಯಿಂದ ಜ್ಞಾನಭಾಸ್ಕರನು ಉದಯಿಸಿದ್ದರಿಂದ ಬುವಾನವರು ಬ್ರಹ್ಮಾನಂದದಲ್ಲಿ ಶೇಷಾಯುಷ್ಯವನ್ನು ಕಳೆಯುತ್ತಿದ್ದರು. ಶ್ರೀಮಚ್ಛಂಕರಭಗವತ್ಪಾದರವರು ಸದ್ಗುರುವಿನ ಗೌರವವನ್ನು ವರ್ಣಿಸುವಾಗ ''ಸದ್ಗುರುವಿಗೆ ಯಾವ ಉಪಮೆಯನ್ನೂ ಕೊಡಲಿಕ್ಕೆ ಬರುವದಾಗಿಲ್ಲ. ಯಾಕೆಂದರೆ ಅವರ ಶಕ್ತಿಯೇ ಅಷ್ಟು ಆಶ್ಚರ್ಯಕರವಾಗಿರುತ್ತದೆ. ಲೋಕದಲ್ಲಿ ಪರಿಸಮಣಿಯು ಕಬ್ಬಿಣವನ್ನು ಬಂಗಾರವನ್ನಾಗಿ ಮಾಡುತ್ತದೆಂಬದೇನೋ ನಿಜ; ಆದರೆ ಪರಿಸಗಲ್ಲಿನ ಸ್ಪರ್ಶವನ್ನು ಹೊಂದಿ, ಆದ ಸುವರ್ಣವು ತನ್ನಂತೆ ಬೇರೆ ಕಬ್ಬಿಣವನ್ನು ಸುವರ್ಣವನ್ನಾಗಿ ಮಾಡಲಾರದು. ಅಂದರೆ ಅದಕ್ಕೆ ಪರಿಸಗಲ್ಲಿನ ಗುಣಸಮರ್ಥ್ಯವು ಬರಲಾರದು. ಇದರಿಂದ ಪರಿಸಗಲ್ಲಿಗೆ ಕಬ್ಬಿಣವನ್ನು ತನ್ನಂತೆ ಮಾಡಿಕೊಳ್ಳುವಷ್ಟು ಶಕ್ತಿಯಿಲ್ಲವೆಂದು ಹೇಳಬೇಕಾಗುತ್ತದೆ; ಆದರೆ ಸದ್ಗುರುವು ಹಾಗಲ್ಲ; ತನ್ನ ಬಳಿಗೆ ಶರಣುಬಂದ ಕಬ್ಬಿಣದಂತೆ ಇದ್ದ ಅಂದರೆ ತಾಮಸಿಯಾದವನನ್ನು ಸಹ ತನ್ನಂತೆ ಸತ್ವಪ್ರಧಾನನನ್ನಾಗ ಮಾಡುವನು. ಆದ್ದರಿಂದ ಸದ್ಗುರುವಿಗೆ ಸರಿಯಾದ ವಸ್ತುವೇ ಇಲ್ಲ'' ವೆಂದು ಅಂದಂತೆ ಬುವಾನವರು ಸದ್ಗುರು ಅಕ್ಕಲಕೋಟೇ ಸ್ವಾಮಿಗಳವರ ಅನುಗ್ರಹದಿಂದ ಪೂರ್ಣ ಬ್ರಹ್ಮತ್ವವನ್ನು ಪಡೆದು ಅಜ್ಞಪ್ರಾಣಿಗಳನ್ನು ಉದ್ಧರಿಸಲಿಕ್ಕೆ ಸಮರ್ಥರಾಗಿದ್ದರು. ಪ್ರಸ್ತುತದ ನಮ್ಮ ಚರಿತ್ರನಾಯಕರು ಇಂಥ ಸದ್ಗುರುವನ್ನು ಆರಿಸಿ ಶರಣು ಹೋದದ್ದರಲ್ಲಿ ಆಶ್ಚರ್ಯವೇನು?

ಬ್ರಹ್ಮಜ್ಞಾನಿಗಳಾದ ಅಣ್ಣಾಬುವಾನವರು ತಮ್ಮ ಬಳಿಗೆ ಬಂದ ಈ ಛಾತ್ರ ಶಿಷ್ಯನನ್ನು ನೋಡಿ ತುಂಬಾ ಸಂತೋಷಪಟ್ಟರು. ಕೃಷ್ಣಬಾಲಕನು ತಾನು ಪರಬ್ರಹ್ಮನಾಗಿದ್ದರೂ ಮನುಷ್ಯವೇಷವ ತಾಳಿದ್ದರಿಂದ ಲೋಕಕ್ಕೆ ಮಾರ್ಗತೋರಿ

ಸುವದಕ್ಕಾಗಿ ನಿಷ್ಠೆಯಿಂದ ಗುರುಸೇವೆಯನ್ನು ಮಾಡತೊಡಗಿದನು. ಬೆಳಿಗ್ಗೆ ನಾಲ್ಕು ಗಂಟೆಗೆದ್ದು, ಪ್ರಾತರ್ವಿಧಿಗಳನ್ನು ತೀರಿಸಿ, ಗುರುಗೃಹದ ಹಾಗು ಅಂಗಳದ ಕಸ ಗೂಡಿಸಿ, ಸಮ್ಮಾರ್ಜನವಿಧಿಯನ್ನು ನೆರವೇರಿಸುತ್ತಿದ್ದನು. ಬಳಿಕ ಗುರುಗಳು ಏಳಲು ಅವರ ಮುಖ ಪ್ರಕ್ಷಾಲನಾದಿ ಪ್ರಾತರ್ವಿಧಿಗಳಿಗೆ ಅನುಕೂಲ ಮಾಡಿ ಕೊಡುತ್ತಿದ್ದನು. ಸರ್ವದಾ ಗುರುಸನ್ನಿಧಿಯಲ್ಲಿಯೇ ಇದ್ದುಕೊಂಡು ಗುರುಗಳ ಅಪ್ಪಣೆಯಾಗುವದೊಂದೇ ತಡ, ಕೂಡಲೆ ಕಾರ್ಯವ ಮಾಡುವದರಲ್ಲಿ ತತ್ಪರ ನಾಗುತ್ತಿದ್ದನು. ಹೀಗೆ ಗುರುಸೇವೆಯು ನಡೆವಾಗ ಆತನ ಹಸಿವು-ನೀರಡಿಕೆಗಳ ಪರಿವೆಯು ತಪ್ಪಿತು. ವಿಶ್ರಾಂತಿ-ನಿದ್ರೆ ಮೊದಲಾದವುಗಳು ಮರೆತು ಹೋದವು. ಸರ್ವದಾ ಗುರುಚಾಕರಿಯಲ್ಲಿಯೇ ಆತನ ಮನಸ್ಸು ತಲ್ಲೀನತೆಯನ್ನು ಪಡೆದದ್ದರಿಂದ ಶರೀರಸೌಖ್ಯದ ಕಡೆಗೆ ಆತನ ಲಕ್ಷ್ಯವು ಹೋಗದ ಇದ್ದದ್ದು ಸ್ವಾಭಾವಿಕವಾಯಿತು. ಯಾಗು ಭವಸಾಗರವನ್ನು ದಾಟುವದಕ್ಕೆ ಶರೀರವನ್ನು ಸಾಧನವನ್ನಾಗಮಾಡಿ ಕೊಳ್ಳುವರೋ ಆ ಮಹಾತ್ಮರು ಹೀಗೆ ನಡೆಯುವದು ಸಹಜವೆಂದೇ ಹೇಳಲಾಗುವದು. ಯಾಕೆಂದರೆ ಉದ್ದೇಶವನ್ನು ಕೊನೆಗಾಣಿಸುವದಕ್ಕೆ ಯಾರಾದರೂ ಪ್ರಯತ್ನ ಪಡುವರೇ ಹೊರತು, ಸಾಧನವಾದ ಪದಾರ್ಥವನ್ನೇ ಜತನ ಮಾಡುತ್ತ ಮೂಲ ಉದ್ದೇಶವನ್ನು ಮರೆತು ಬಿಡಲಾಗದು. ವ್ಯವಹಾರದೊಳಗೆ ನಾವು ಈ ನಿಯಮವನ್ನು ಕಾಯ್ದುಕೊಳ್ಳುತ್ತಿದ್ದರೂ ಮೂಲವನ್ನು ಶೋಧಿಸಿ ನೋಡಿದರೆ, ನಾವು ಉದ್ದೇಶವನ್ನು ಮರೆತು ನಡೆಯುತ್ತೇವೆಂದು ಕಷ್ಟದಿಂದ ಹೇಳಬೇಕಾಗುತ್ತದೆ. ಮನುಷ್ಯದೇಹದ ಕೊನೆಯ ಉದ್ದೇಶವು ಮೋಕ್ಷವನ್ನು ಸಾಧಿಸುವದಿದ್ದು, ಅದರ ಕಡೆಗೆ ನಾವು ಎಷ್ಟು ದುರ್ಲಕ್ಷ್ಯ ಮಾಡಿರುವೆವೆಂಬುದನ್ನೂ, ದೇಹವನ್ನು ಸಂರಕ್ಷಿಸಿ ಕೊಳ್ಳುವದರಲ್ಲಿ ಎಷ್ಟು ಆಸಕ್ತರಾಗಿರುವೆವೆಂಬುದನ್ನೂ ಬಿಚ್ಚಿ ಒರೆಯಲವಶ್ಯವಿಲ್ಲ. ಯಾಕೆಂದರೆ ಇದು ಪ್ರತಿಯೊಬ್ಬರ ಅನುಭವದ ಮಾತಾಗಿರುವದು.

ಪ್ರಸ್ತುತದ ಚರಿತ್ರನಾಯಕರು ನಮ್ಮಂತೆ ಮಂದಮತಿಗಳಿದ್ದಿಲ್ಲ. ಮನುಷ್ಯ ದೇಹದ ಉದ್ದೇಶವೇನಿರುವದೆಂಬುದನ್ನು ಪುನಃ ಜನರ ಸ್ಮೃತಿಪಟಲದ ಮೇಲೆ ತಂದು ಕೊಡುವದಕ್ಕಾಗಿ ಅವರು ನಿಸ್ಸೀಮವಾಗಿ ಗುರುಸೇವೆಯಲ್ಲಿ ನಿರತರಾದರು. ಈ ಮೇರೆಗೆ ಅವರು ಗುರುಗೃಹದಲ್ಲಿ ಸುಖವಾಗಿ ವಾಸವಾಗಿರಲು ಅವರ ತಾಯಿತಂದೆಗಳು ಮಗನಿಗೆ ಬುದ್ಧಿವಾದವನ್ನು ಹೇಳಬೇಕೆಂದು ಮಿರಜೆಗೆ ಹೋದರು. ಮಗನು ಹೀಗೆ ವಿರಕ್ತನಾಗಿರುವದು ಅವರಿಗೆ ಸರಿದೋರಲಿಲ್ಲ. ಆದ್ದರಿಂದ ಅವರು ಕೃಷ್ಣ ಕುವರನನ್ನು ಹತ್ತರ ಕುಳ್ಳಿರಿಸಿಕೊಂಡು ಬೋಧವ ಮಾಡತೊಡಗಿದರು. ತಮ್ಮಾ,

ಹೀಗೆ ಉಡಾಳನಾಗಿ ತಿರುಗಬಾರದು. ಪರೋಪಕಾರ ಮಾಡಲಿಕ್ಕೆ ಗೃಹಸ್ಥಾಶ್ರಮವು ತುಂಬಾ ಅನುಕೂಲವುಳ್ಳದ್ದಾಗಿರುವದು. ಆದ್ದರಿಂದ ನೀನು ಲಗ್ನಮಾಡಿಕೊಂಡು ಗೃಹಸ್ಥಧರ್ಮವನ್ನು ಸ್ವೀಕರಿಸು. ಸ್ತ್ರೀಪರಿಗ್ರಹವು ಕೆಟ್ಟೆಂದು ತಿಳಿಯಬೇಡ. ಕುಲಸತಿಯರು ಸ್ವಪುರುಷನಿಗೆ ಇಹದಲ್ಲಿಯೂ, ಪರದಲ್ಲಿಯೂ ಸೌಖ್ಯವನ್ನು ಕೊಡುವರು. ತಮ್ಮಾ, ನೀನೇ ಹೇಳು. ಸ್ತ್ರೀಯರಿಲ್ಲದಿದ್ದರೆ ಪುರುಷನಿಂದ ಯಾವ ಕಾರ್ಯವು ಆಗುವಹಾಗಿದೆ? ಸ್ತ್ರೀಯಿಲ್ಲದ ಪುರುಷನಿಗೆ ಯಜ್ಞಯಾಗಾದಿಗಳನ್ನು ಮಾಡಲಿಕ್ಕೆ ಅಧಿಕಾರವಿದೆಯೇ? ಅತಿಥಿಯು ಹಸಿದು ಬಾಯಾರಿ ಬಂದರೆ, ಅವನಿಗೊಂದು ಪಂಚಪಾತ್ರೆ ಉದುಕ ಕೊಡಲಿಕ್ಕೆ ಬರಬಹುದೆ? ಹೆಂಗಸರೆಂದರೆ ಗೃಹದೇವತೆಗಳು. ಅವರ ಸುಗುಣಗಳಿಂದ ಪುರುಷನ ಕೀರ್ತಿಯು ಬೆಳೆಯುವದು. ಆದ್ದರಿಂದಲೇ ಗೃಹಸ್ಥಾಶ್ರಮವು ಧನ್ಯವಾದದ್ದೆಂದು ಋಷಿಗಳು ಕೊಂಡಾಡಿರುವರು. ನೀನು ಇಂಥ ಸರಳ ಮಾರ್ಗವನ್ನು ಬಿಟ್ಟು, ಬಹು ತೊಡಕಿನ ವೇದಾಂತ ಮಾರ್ಗವನ್ನು ಹಿಡಿದು ಹಿಂದುಮುಂದಿನ ವಿಚಾರವಿಲ್ಲದೆ ನಡೆಯುಹತ್ತಿದೆಯಲ್ಲ? ಹುಡುಗತನವಿರುವದರಿಂದ ವೇದಾಂತಮಾರ್ಗದಲ್ಲಿ ಬರುವ ಸಂಕಟಗಳು ನಿನಗೆ ತಿಳಿಯಲಾರವು. ಎಷ್ಟೋ ಜನರು ವೇದಾಂತದಭ್ರಾಂತಿಗೆ ಬಿದ್ದು, ಪ್ರಾಯಬಂದಕೂಡಲೆ ವಿಷಯಗಳ ಜಾಲದಲ್ಲಿ ಸಿಕ್ಕು ಲೋಕದವರ ಅಪಹಾಸ್ಯಕ್ಕೆ ಕಾರಣರಾಗಿರುತ್ತಾರೆ. "ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿಕರ್ಷತಿ" ಎಂದು ಹೇಳಿರುವದರಿಂದ ಇಂದ್ರಿಯಗಳನ್ನು ಜಯಿಸುವದು ಎಂಥೆಂಥವರಿಗೂ ದುಷ್ಕರವಾಗಿರುತ್ತದೆ. ನೀನಂತೂ ಚಿಕ್ಕವನು, ಪ್ರಪಂಚದ ಅನುಭವವು ನಿನಗಿನ್ನೂ ಬಂದಿರುವದಿಲ್ಲ. ಮುಂದೆ ವಿಷಯಗಳ ಕಡೆಗೆ ಮನಸ್ಸು ಎಳೆಯುಹತ್ತಿದಾಗ ನಿನಗೆ ಪಶ್ಚಾತ್ತಾಪವಾದೀತು. ಹಿಂದುಗಡೆ ಪಶ್ಚಾತ್ತಾಪವಾಗಿ ಪ್ರಯೋಜನವೇನು? ಹೀಗೆ ಪಶ್ಚಾತ್ತಾಪವಾಗಿ ಜನರು ನೀತಿಭ್ರಷ್ಟರಾಗಬಾರದೆಂತಲೇ ನಮ್ಮ ಋಷಿಗಳು ಚತುರಾಶ್ರಮಗಳನ್ನು ಕಲ್ಪಿಸಿರುವರು. ಈ ಆಶ್ರಮಗಳು ಮನುಷ್ಯನನ್ನು ಮೋಕ್ಷಪದಕ್ಕೆ ಸುಲಭವಾಗಿ ಒಯ್ಯುವ ಸೋಪಾನಗಳಾಗಿವೆ ಮೊದಲನೇ ಮೆಟ್ಟು ಬ್ರಹ್ಮಚರ್ಯವು, ಎರಡನೆಯದು ಗೃಹಸ್ಥಾಶ್ರಮವು; ಮೂರನೆಯದು ವಾನಪ್ರಸ್ಥವು; ನಾಲ್ಕನೆಯದು ಸಂನ್ಯಾಸವು. ಹೀಗೆ ಆಶ್ರಮಗಳ ಕ್ರಮವಿರುವದು. ಈ ಕ್ರಮತಪ್ಪಿ ಅಕ್ರಮವಾಗಿ ನಡೆದರೆ ನಡೆಯುವವನಿಗೆ ಭಯಂಕರ ಗಂಡಾಂತರವು ಉಂಟಾಗದೆ ಇರದು! ತಮ್ಮಾ, ನನ್ನ ಮಾತನ್ನು ಲಕ್ಷಗೊಟ್ಟು ಕೇಳು. ನಿನ್ನ ಹಿತಕ್ಕಾಗಿಯೇ ನಾನು ಅಲ್ಲಿಂದ ಇಲ್ಲಿಗೆ ಕಾಲು ಕಿತ್ತುಕೊಂಡು ಬಂದಿರುತ್ತೇನೆ. ಎಷ್ಟೋ ಜನರು ನಿನ್ನ ಹಾಗೆ ಚಿಕ್ಕತನದಲ್ಲಿ ಹೀಗೆ ಚಂದಿ

ತನ ಹಿಡಿದು ಮುಂದೆ ನಿರೂಪಸಾತಿತ್ಯವನ್ನು ಹೊಂದಿ ಜನರಿಂದ ಛೀ ಅನ್ನಿಸಿಕೊಂಡಿರುತ್ತಾನೆ. ಅಂಥ ಪ್ರಸಂಗವು ನಿನಗೂ ಒದಬಾರದೆಂದು ನಾನು ಹಗಪಡಿಸುತ್ತೇನೆ ಆದ್ದರಿಂದ ನಾನು ಹೇಳುವ ಹಿತದ ಹಾದಿಯನ್ನು ಅನುಸರಿಸಿ ಮನುಷ್ಯ ಜನ್ಮದ ಸಾರ್ಥಕತೆಯನ್ನು ಮಾಡಿಕೋ; ನನ್ನ ಈ ಮಾತುಗಳನ್ನು ವ್ಯರ್ಥವಾಗಗೊಡಬೇಡ!

ಈ ಪ್ರಕಾರವಾಗಿ ತಂದೆಯು ಅರ್ಥಗರ್ಭಿತವಾಗಿ ಬೋಧಿಸಲು, ಕೃಷ್ಣಕುವರನು ನಕ್ಕು ನುಡಿದನೇನಂದರೆ:—"ತಂದೆಯವರೇ, ನಿಮ್ಮ ಮಾತು ಕೇಳಿ ನನಗೆ ಸಂತೋಷವಾಗುತ್ತದೆ. ನೀವು ಹೇಳುವ ಮಾತು ಸತ್ಯವಿದ್ದರೂ ನನಗೆ ಮಾತ್ರ ಗೃಹಸ್ಥಾಶ್ರಮಿಯಾಗುವ ಇಚ್ಛೆಯಿಲ್ಲ. ಮೊದಮೊದಲು ಅಧ್ಯಾತ್ಮ ಪರಾಯಣರಂತೆ ನಟಿಸಿ ಕೊನೆಗೆ ವಿಷಯಲಂಪಟರಾಗುವ ಜನರು ದೊರೆಯುವಂತೆ ಕಡೆತನಕ ವಿಷಯಗಳ ಗಾಳಿ ಒಡಿಸಿಕೊಳ್ಳದ ಮಹಾತ್ಮರೂ ಸಿಗುವರು. ವಿಷಯಗಳ ಎಳತಕ್ಕೆ ಸಿಗುವದು ಬಿಡುವದು ಮನಸ್ಸಿನ ನಿಶ್ಚಯವನ್ನವಲಂಬಿಸಿರುತ್ತದೆ. ದೃಢ ಮನಸ್ಸಿನ ಪುರುಷರಿಗೆ ಯಾವ ವಿಷಯಗಳೂ ಮೋಹವನ್ನುಂಟುಮಾಡಲಾರವು; ಕಣ್ಣಿಗೆ ಕಾಣಿಸುವದೆಲ್ಲ ಮಾಯೆಯ ಆಡಂಬರವಿದ್ದು ಅದು ನಶ್ವರವೆಂದು ಯಾರಿಗೆ ನಿಶ್ಚಯವಾಗಿದೆಯೋ ಅವರಿಗೆ ಮಿಥ್ಯವಾಗಿರುವ ವಿಷಯಗಳ ಅಭಿಲಾಷೆಯು ಹ್ಯಾಗೆ ಆಗುವದು? ಮೃಗಜಲವು ನಿಜವಾದ ಜಲವಿರದೆ ಜಲದ ಆಭಾಸವಿರುವದೆಂದು ತಿಳಿದ ಮನುಷ್ಯನು ಎಷ್ಟು ನೀರಡಿಸಿದ್ದರೂ ಆ ಮೃಗಜಲಕ್ಕೆ ನೀರೆಂದು ಧಾವಿಸಬಹುದೇ? ನಿಜವಾದ ನೀರು ಎಲ್ಲಿರುವದೋ ಅದನ್ನು ಶೋಧಿಸಿ ಹೊಟ್ಟೆತುಂಬ ಜಲಪಾನ ಮಾಡಿ ಸುಖಹೊಂದುವನು. ಆದರೆ ಮೃಗಜಲದ ಸ್ವರೂಪವನ್ನು ತಿಳಿಯದ ಮೃಗಗಳು ಮಾತ್ರ ಭ್ರಾಂತಿಯಿಂದ ಮೃಗಜಲದ ಬೆನ್ನಹತ್ತಿ ಅಳತೆಗೆಟ್ಟು ಕಷ್ಟಬಟ್ಟು ವ್ಯರ್ಥವಾಗಿ ಸತ್ತುಹೋಗುವವು. ಇದನ್ನು ನಾವು ಕಣ್ಣಾರೆ ಕಾಣುತ್ತೇವಷ್ಟೇ, ಇದರಂತೆ ಜ್ಞಾನಿಗಳಾದವರು ಸೌಖ್ಯಕ್ಕೋಸ್ಕರ ವಿಷಯಗಳ ಬೆನ್ನ ಹತ್ತಲಾರರು. ಅವರು ನಿಜವಾದ ಸೌಖ್ಯವಾವುದೆಂಬುದನ್ನೇ ಕಂಡುಹಿಡಿದಿರುವದರಿಂದ ಅವರಿಗೆ ವಿಷಯಗಳಿಂದ ಸೌಖ್ಯಸಿಗುತ್ತದೆಂಬ ಭ್ರಾಂತಿಯೆಂದಿಗೂ ಉಂಟಾಗಲಾರದು. ಆದರೆ ಮಾಯಾ ಸ್ವರೂಪವನ್ನರಿಯದ ಅಜ್ಞರು ಮೃಗಜಲಕ್ಕೆ ಧಾವಿಸುವ ಮೃಗಗಳೋಪಾದಿಯಲ್ಲಿ ವಿಷಯಗಳ ಕಡೆಗೆ ಧಾವಿಸುವರು. ತಂದೆಯವರೇ, ನಾನು ಇದುವರೆಗೂ ತಮ್ಮ ಮುಂದೆ ಒಂದು ಚಕಾರ ಶಬ್ದವನ್ನುಚ್ಚರಿಸಿದ್ದಿಲ್ಲ. ಈ ದಿನ ಈ ರೀತಿ ಬಹಳ ಮಾತಾಡಿದ್ದಕ್ಕೆ ಕ್ಷಮಿಸಿರಿ; ಎಷ್ಟಾದರೂ ನಾನು ತಮ್ಮ ಬಾಲಕನು; ತಮ್ಮ ಚರಣಗಳ ಆಶೀರ್ವಾದವು ಇದ್ದರೆ ಸಾಕು."

ಈ ಮೇರೆಗೆ ಕೃಷ್ಣಕುವರನು ಮಾತನಾಡಿ ಎಮ್ಮನಾಗಲು ಜೋಯಿಸರು ಬೆರಗಾದರು. ಇದುವರೆಗೂ ತಮ್ಮ ಮಗನು ಮೂರ್ಖನೆಂದು ಅವರು ತಿಳಿದಿದ್ದು, ಈಗ ಆತನ ಅಸ್ಖಲಿತ ಹಾಗು ತತ್ವನಿರೂಪಣದ ಸಂಭಾಷಣ ಕೇಳಿ ಅವರಲ್ಲಿ ಮಗನ ವಿಷಯವಾಗಿ ಒಂದು ಒಗೆಯ ಸದ್ಭಾವನೆಯುಂಟಾಯಿತು. ಮಗನು ಮೂರ್ಖನಿರದೆ ಜನ್ಮತಃ ಬ್ರಹ್ಮವೇತ್ತನಿರುವನೆಂದು ತಿಳಿದರು; ಒಳಿಕ ಅವರು ಮನದಲ್ಲಿ ಯೋಚಿಸಿದ್ದೇನಂದರೆ—"ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಈ ರತ್ನವು ಅಸಾಮಾನ್ಯವಾಗಿರುವದು. ವೇದವ್ಯಾಸ ಮಹರ್ಷಿಗಳು ಗೃಹಸ್ಥಾಶ್ರಮಿಯಾಗೆಂದು ಎಷ್ಟು ಬೋಧಿಸಿದರೂ ಶುಕರು ಅದನ್ನು ಕಿವಿಯಮೇಲೆ ಹಾಕಿಕೊಳ್ಳಲಿಲ್ಲೆಂಬ ಕಥೆಯನ್ನು ನಾನು ಭಾಗವತದಲ್ಲಿ ಕೇಳಿದ್ದೇನೆ. ಅದರಂತೆ ಈಗ ನನ್ನ ಮಗನೂ ಬ್ರಹ್ಮಜ್ಞರಾದ ಶುಕರಂತೆ ಖಂಡಿತವಾದಿಯಿರುವನು. ಇವನಿಗೆ ನಾನು ಎಷ್ಟು ಬೋಧಿಸಿದರೂ ಡಬ್ಬುಗೊಡದ ಮೇಲೆ ನೀರು ಹಣಿಸಿದಂತೆ ವೃಥಾ ಆಯಾಸಕ್ಕೆ ಕಾರಣವೇ ಸರಿ! ನಿಜವಾದ ಮಹಾತ್ಮನಾಗಿದ್ದರೆ ಲೋಕೋದ್ಧಾರಕನಾಗುವನು. ಕಚ್ಚಾ ಮನುಷ್ಯನಾಗಿದ್ದರೆ ಲೋಕದವರ ನಿಂದೆಗೆ ಗುರಿಯಾಗುವನು. ನಾವು ಬಂದಹಾದಿಗೆ ಸುಂಕವಿಲ್ಲೆಂಬಂತೆ ತಿರುಗಿ ಊರಿಗೆ ಹೋಗುವದು ಲೇಸಾಗಿ ಕಾಣುತ್ತದೆ"

ಹೀಗೆ ಯೋಚಿಸಿ, ಜೋಯಿಸರು ಅಣ್ಣಾಬುವಾನವರಿಗೆ ಭೆಟ್ಟಿಯಾಗಿ ಮಗನ ವಿಷಯವನ್ನು ಅವರಿಗೆ ತಿಳಿಸಿ, ಸ್ವಗ್ರಾಮಕ್ಕೆ ತೆರಳಿದರು. ಇತ್ತ ಕೃಷ್ಣಕುವರನು ಗುರುಸನ್ನಿಧಿಗೆ ಹೋಗಲು, ಬುವಾನವರು ಮುಗುಳುನಗೆಯಿಂದ "ಅಪ್ಪಾ ಮಗೂ ನಿಮ್ಮ ತಂದೆಯವರು ಕರೆಯ ಬಂದಿರಲು ನೀನು ಊರಿಗೆ ಹೋಗುವದಕ್ಕೆ ಯಾಕೆ ಔದಾಸೀನತೆಯನ್ನು ತೋರಿಸಿದೆ? ನೀನು ಹ್ಯಾಗೂ ಬ್ರಹ್ಮಜ್ಞಾನೀ ಇರುವಿಯಷ್ಟೇ; ನಿನಗೆ ಮಿರಜೆಯೂ ಅಷ್ಟೇ; ನಾಂದಣಿಯೂ ಅಷ್ಟೇ. ಹೀಗಿದ್ದು ನೀನು ಹೀಗೇಕೆ ಮಾಡಿದೆ? ಎಂದು ನುಡಿಯಲು, ಕೃಷ್ಣಕುವರನು ಹಾಸ್ಯಭಾವದಿಂದ ಗುರುಮುಖವನ್ನು ನೋಡಿದನು. ಆಗ ಆ ಉಭಯರೂ ಪರಸ್ಪರರನ್ನು ದೃಢವಾಗಿ ಆಲಿಂಗಿಸಿದರು. ಅವರ ಆ ಆಲಿಂಗವು ಆ ಗುರುಶಿಷ್ಯರ ಅವಿಭಕ್ತ ಸ್ಥಿತಿಯನ್ನು ವಿಶದವಾಗಿ ವ್ಯಕ್ತಗೊಳಿಸಿತು. ನಿಜವಾದ ಬ್ರಹ್ಮಾನಂದ ಮಗ್ನರಾದವರ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ಆ ಕಾಲದಲ್ಲಿ ಯಾರಾದರೂ ನೋಡಬಯಸುತ್ತಿದ್ದರೆ, ಆ ಗುರುಶಿಷ್ಯರ ಆಗಿನ ಪ್ರಸಂಗವನ್ನು ನೋಡಬಹುದಾಗಿತ್ತೆಂದು ನಿರ್ವಿವಾದವಾಗಿ ಹೇಳಬಹುದು. ಮುಖ್ಯವಾಗಿ ಹೇಳತಕ್ಕ ತಾತ್ಪರ್ಯವಿಷ್ಟೇ; ಆ ಗುರುಶಿಷ್ಯರು ದೇಹಮಾತ್ರದಿಂದ ಭಿನ್ನಭಿನ್ನರಾಗಿ ತೋರಿದರೇ ಹೊರತು ನಿಜವಾಗಿ ಅವರು ಏಕರೂಪವಾಗಿ

ಹೋದರು. ಆಲಿಂಗನ ಸಂಭ್ರಮವು ಮುಗಿಯಲು ಬುವಾನವರು ನುಡಿದರೇ ನಂದರೆ:—ಶಿಷ್ಯೋತ್ತಮಾ, ನೀನು ನಿಮಿತ್ತ ಮಾತ್ರಕ್ಕೆ ಶಿಷ್ಯನು, ನಾನು ನಿಮಿತ್ತ ಮಾತ್ರಕ್ಕೆ ಗುರುವು. ಇಬ್ಬರಿಗೂ ದೇಹೋಪಾಧಿಯ ಮೂಲಕವಾಗಿಯೇ ಶಿಷ್ಯತ್ವ-ಗುರುತ್ವದ ತಾರತಮ್ಯವೇ ಹೊರತು ಅನ್ಯಕಾರಣವಿಲ್ಲ; ನೀನು ಯಾರಿರುವೆಯೆಂಬುದನ್ನು ನಾನು ತಿಳಿದಿರುವೆನು. ಶ್ರೀ ಸದ್ಗುರು ಮಹಾರಾಜರವರ (ಅಕ್ಕಲಕೋಟೇ ಸ್ವಾಮಿಗಳವರ) ಅನುಗ್ರಹಮಾತ್ರದಿಂದ ನಿನ್ನ ಚರಣಗಳಲ್ಲಿ ಐಕ್ಯವನ್ನು ಪಡೆಯುತ್ತೇನೆ ಇನ್ನು ನೀನು ಲೋಕಕ್ಕೆ ಮಾರ್ಗದರ್ಶಕವಾದ ಈ ಗುರುಸೇವೆಯ ಅಂಗವನ್ನು ಮುಗಿಸಿಕೊಂಡು ನಿನ್ನ ಅವತಾರ ಕಾರ್ಯಗಳನ್ನು ಯಥೇಷ್ಟವಾಗಿ ಪ್ರಕಟಗೊಳಿಸು. ಮಾತ್ರ ಬಹು ಎಚ್ಚರಿಕೆ! ಕಲಿಯುಗದ ಜನರು ವಿಷಯಲಂಪಟಿಗಳು, ಕಾಮನಾಪರರಾಗಿ ದಿನಾಲು ನಿನ್ನ ಬಳಿಗೆ ಬರುವರು. ಭಾವಿಕರೂ, ಅಭಾವಿಕರೂ ಹಿಂಡುಗಟ್ಟಿ ನಿನ್ನನ್ನು ಹಿಂಬಾಲಿಸುವರು. ಭಾವಿಕರನ್ನೂ, ಅಭಾವಿಕರನ್ನೂ ವಿಂಗಡಿಸುವ ಸಾರಣಿಗೆಯೊಂದನ್ನು ಹತ್ತಿರ ಇಟ್ಟುಕೊಂಡಿರು, ಇಷ್ಟೇ ನನ್ನ ಪ್ರಾರ್ಥನೆಯು.

ಈ ಪ್ರಕಾರವಾಗಿ ಅಣ್ಣಾಬುವಾನವರು ತಮ್ಮ ಈ ಶಿಷ್ಯೋತ್ತಮರಿಗೋಸ್ಕರ ನಾಲ್ಕು ಬೋಧಪರ ಮಾತುಗಳನ್ನು ಹೇಳಿ, ತತ್‌ಕ್ಷಣದಲ್ಲಿ ಸ್ನಾನ ಮಾಡಿ ಪ್ರಾಯೋಪವೇಶನಕ್ಕೆ ಪ್ರಾರಂಭಿಸಿದರು. ಒಳಿಕ್ಕ ತಪವೇನ! ಕೇವು ನಿಮಿಷಗಳು ಕ್ರಮಿಸುತ್ತಿರಲು ಗುರುಗಳು ಜಡದೇಹವನ್ನು ತ್ಯಾಗಮಾಡಿ, ಬ್ರಹ್ಮೈಕ್ಯವನ್ನು ಹೊಂದಿದರು. ಮುಂದಿನ ವ್ಯವಸ್ಥೆಯು ವಿಧಿವತ್ ಜರುಗಿತು. ಗುರುಗಳ ನಿಧನದ ನಂತರ ನಮ್ಮ ಚರಿತ್ರನಾಯಕರು ಮಿರಜೆಯನ್ನು ತ್ಯಜಿಸಿ ಕರವೀರ ಕ್ಷೇತ್ರವನ್ನು ಕುರಿತು ಪ್ರಯಾಣ ಬೆಳೆಸಲು ಯೋಜಿಸಿದರು. ಜನ್ಮತಃ ಪೂಜ್ಯರಾದ ಅವರು ಗುರುಸೇವೆಯಿಂದ ವಿಶೇಷ ಕಾಂತಿಮಯರೂ, ಪೂಜ್ಯರೂ ಆಗಿ ಕರವೀರ ಕ್ಷೇತ್ರದಲ್ಲಿ ನೆಲೆಸಿಗೈದ ಲೀಲೆಗಳು ಲೋಕಪಾವನಕ್ಕೆ ಕಾರಣಗಳಾಗಿರುವವು. ಇಂಥ ಪಾವನತರ ಕಥೆಗಳನ್ನು ಮುಂದಿನ ಪ್ರಕರಣದಿಂದ ಹೇಳಲುಪಕ್ರಮಿಸುವೆವು. ಪ್ರಿಯ ವಾಚಕರೇ, ಸಾವಧಾನರಾಗಿರಿ.

# ೩ನೆಯ ಪ್ರಕರಣ.

## ಕರವೀರ ಕ್ಷೇತ್ರಕ್ಕೆ ಪ್ರಯಾಣ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಗುರುಗಳ ನಿರ್ಯಾಣವಾಗಲು ನಮ್ಮ ಚರಿತ್ರನಾಯಕರು ಮಿರಜೆಯನ್ನು ತ್ಯಜಿಸುವ ವಿಚಾರದಲ್ಲಿ ಮಗ್ನರಾದರಷ್ಟೇ; ಹೀಗಿರುತ್ತಿರಲು ಕರವೀರಕ್ಷೇತ್ರದಲ್ಲಿ ಸುಪ್ರಸಿದ್ಧ ಕಲಾವಂತಿಣಿಯೆನಿಸಿದ ತಾರಾಬಾಯಿ ಎಂಬೊಬ್ಬ ಸ್ತ್ರೀಯು ಒಂದು ವಿಶಿಷ್ಟಪದ್ಧತಿಯ ನಿಯಮವನ್ನು ಪಾಲಿಸುತ್ತ ಎಲ್ಲರ ಪ್ರೇಮಾದರಗಳಿಗೆ ಪಾತ್ರಳಾಗಿದ್ದಳು. ಮನುಷ್ಯನಲ್ಲಿ ಯಾವನಾದರೊಂದು ಕ್ರಿಯೆಯು ಇರಬೇಕಾಗುತ್ತದೆ, ಕ್ರಿಯಾಪರಿಪಾಲನ ಮಾಡದ ಮನುಷ್ಯನು ಎಂಥವನಿದ್ದರೂ ಮಾತಿಗೆ ಬಾರದವನಾಗುವನು. ನಿಷ್ಠಾವಂತಿಕೆಗೇ ಕ್ರಿಯೆಯೆಂಬ ಸಂಜ್ಞೆಯು. ಒಮ್ಮೆ ಒಂದು ಸಂಗತಿಯ ವಿಷಯವಾಗಿ ನಿಯಮವನ್ನು ಹಿಡಿದರೆ, ಕಡೆತನಕ ಅದನ್ನು ಪಾಲಿಸುವದೇ ಕ್ರಿಯಾಪಾಲನವೆನಿಸುವದು. ಇಂಥ ಕ್ರಿಯಾಪರಿಪಾಲನ ಮಾಡತಕ್ಕವರು ಮನುಷ್ಯರಲ್ಲಿ ಇಷ್ಟೇ ಅಲ್ಲ; ದೇವರ ದರ್ಬಾರದಲ್ಲಿಯೂ ಮರ್ಯಾದೆಯನ್ನು ಹೊಂದುವರು. ಮೇಲೆ ಹೇಳಿದ ಕಲಾವಂತಿಣಿಯು ಇಂಥ ಕ್ರಿಯಾವಂತರಲ್ಲಿ ಪರಿಗಣಿಸಲ್ಪಡುತ್ತಿದ್ದಳು. ಪೌರಾಣಿಕ ಕಾಲದಲ್ಲಿ ಮಹಾನಂದೆ ಮೊದಲಾದ ವೇಶ್ಯಾಂಗನೆಯರು ಪತಿವ್ರತಾಧರ್ಮವನ್ನು ಹ್ಯಾಗೆ ಪಾಲಿಸಿ ಈಶ್ವರಕೃಪೆಗೆ ಪಾತ್ರರಾದರೋ ಹಾಗೆ ಈ ತಾರಾಬಾಯಿಯೂ ಜಾತಿಯಿಂದ ವೇಶ್ಯಳಾಗಿದ್ದರೂ ಕ್ರಿಯಾವಂತಿಕೆಯಿಂದ ಧರ್ಮಿಷ್ಠಳೆನಿಸುತ್ತಿದ್ದಳು. ಅವಳು ದ್ರವ್ಯದ ಆಶೆಗೆ ಬಿದ್ದು, ಉಳಿದ ವೇಶ್ಯೆಯರಂತೆ ಪರಪುರುಷರಲ್ಲಿ ರಮಿಸುತ್ತಿದ್ದಿಲ್ಲ. ತನ್ನ ಮನೆಗೆ ಬರತಕ್ಕ ಪುರುಷನೊಡನೆ ಒಂದು ವಿಶಿಷ್ಟಕರಾರು ಮಾಡಿಕೊಂಡು ಆ ಕರಾರಿನಂತೆ ವರ್ತಿಸುತ್ತಿದ್ದಳು. ಆ ಅವಧಿಯಲ್ಲಿ ಎಷ್ಟು ದ್ರವ್ಯಪ್ರಾಪ್ತವಾಗುವ ಹಾಗೆ ಇದ್ದರೂ ಆಕೆಯು ಸ್ವೀಕೃತಪುರುಷನನ್ನು ಬಿಟ್ಟು ಪರಪುರುಷನನ್ನು ಪ್ರೀತಿಸುತ್ತಿದ್ದಿಲ್ಲ. ಈ ನಿಯಮವನ್ನು ಅವಳು ತಪ್ಪದೆ ಪಾಲಿಸುತ್ತಿದ್ದದರಿಂದ ಅವಳನ್ನು ಬಹು ಜನರು ಪ್ರಶಂಸಿಸುತ್ತಿದ್ದರು.

ಈ ರೀತಿಯಾಗಿ ತಾರಾಬಾಯಿಯು ಪುಣ್ಯವಿಶೇಷದಿಂದ ಸುಖಿಯಾಗಿದ್ದರೂ ಪೂರ್ವಜನ್ಮದ ಪಾಪಶೇಷದಿಂದ ಅವಳಿಗೊಂದು ವ್ಯಾಧಿಯು ಉತ್ಪನ್ನವಾಯಿತು. ಅಸಹ್ಯವಾದ ಹೊಟ್ಟೆಶೂಲಿಯು ಅವಳನ್ನು ಪೀಡಿಸತೊಡಗಿತು. ಆಕೆಯು ಆ ವ್ಯಾಧಿಯಿಂದ ಹಣ್ಣಾದಳು. ಅವಳ ಮಧುರವಾದ ಗಾನಾಲಾಪವೂ ಚಿತ್ತರಂಜಕ ನರ್ತನಗಳೂ ಎತ್ತೋ ಮಾಯವಾದವು. ಅವಳ ಮಧುರ ಕಂಠಕ್ಕೆ ಮರುಳಾದ ಯುವಕರು ಅವಳ ಈ ಅಸಹ್ಯ ವೇದನೆಗೆ ಮರಮರನೆ ಮರುಗಿದರು, ಆದರೆ ಮಾಡುತ್ತಾರೇನು? ಪಾಪಪಂಕದಲ್ಲಿ ಹೊರಳಾಡುವ ಆ ಯುವಕರು ಆ ವೇಶ್ಯೆಯು ಬಾಧೆಯನ್ನು ಬಿಡಿಸಬಲ್ಲರೇ? ಅವರು ತಮ್ಮ ಸುಖವು ತಪ್ಪಿತೆಂದು ಚಡಪಡಿಸುತ್ತಿದ್ದರೇ ಹೊರತು ವೇಶ್ಯೆಯ ದುಃಖ ಭೋಗಕ್ಕೆ ಮರುಗುತ್ತಿದ್ದಿಲ್ಲ. ಲೋಕದಲ್ಲಿ ವಿಷಯಲಂಪಟಿಗಳಾದವರ ಸ್ಥಿತಿಯೇ ಇಷ್ಟರ ಮಟ್ಟಿಗಿರುತ್ತದೆ. ಇರಲಿ.

ಬರಬರುತ್ತ ತಾರಾಬಾಯಿಯ ವ್ಯಾಧಿಯು ಹೆಚ್ಚಿತು. ಅವಳು ತನ್ನ ರೋಗ ನಿವಾರಣಾರ್ಥವಾಗಿ ವಿಶ್ವಪ್ರಯತ್ನ ಮಾಡಿದಳು ನಾಮಾಂಕಿತ ವೈದ್ಯರಾದರು; ಮಾಂತ್ರಿಕರಾದರು; ಪಿಶಾಚ್ಚವಿಮೋಚಕರಾದರು. ಯಾರು ಏನು ಪ್ರಯತ್ನ ಮಾಡಿದರೂ ಅವಳ ವ್ಯಾಧಿಗೆ ಉಪಶಮನವಿಲ್ಲದಾಯಿತು ಕೊನೆಗೆ ಅವಳು ಮನದಲ್ಲಿ ಯೋಚಿಸಿದ್ದೇನಂದರೆ:—"ಲೋಕದಲ್ಲಿ ಅತ್ರೀಕುವರನಾದ ದತ್ತಮಹಾರಾಜನು ಸಮರ್ಥನಾಗಿರುವನು. ಆತನಿಗೆ ಶರಣುಹೋದ ಹೊರತು ಈ ನನ್ನ ವ್ಯಾಧಿಯು ಕಡಿಮೆಯಾಗಲಾರದು."

ಈ ಮೇರೆಗೆ ಅವಳು ಯೋಚಿಸಿ ಶ್ರೀದತ್ತ ಕ್ಷೇತ್ರವಾದ ನರಸೋಬನವಾಡಿಗೆ ಹೋದಳು ಆಕೆಯು ಅಲ್ಲಿ ಪರಮ ಪವಿತ್ರವಾದ ಕೃಷ್ಣೆಯಲ್ಲಿ ಸ್ನಾನ ಮಾಡಿ ಶ್ರೀ ದತ್ತಾತ್ರೇಯನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಹಾಕಿದಳು. ಪ್ರತಿನಿತ್ಯ ಅವಳು ಇದೇ ಕ್ರಮದಿಂದ ಶ್ರೀ ದತ್ತ ಸೇವೆಯನ್ನು ಮಾಡುತ್ತಿರಲು ಒಂದು ತಿಂಗಳು ಕ್ರಮಿಸಿತು. ಆಗ ಆಕೆಯ ಸದ್ಭಾವನೆಗೆ ಮೆಚ್ಚಿದ ಶ್ರೀದತ್ತನು ಒಂದು ದಿನ ಆಕೆಯ ಸ್ವಪ್ನದಲ್ಲಿ ಬಂದು:—"ನಿನ್ನ ಸೇವೆಯನ್ನು ಮುಗಿಸಿಕೊಂಡು ನಿನ್ನ ಗ್ರಾಮಕ್ಕೆ ಹೋಗು, ನೀನಿದ್ದಲ್ಲಿಗೇ ಒಬ್ಬ ಸತ್ಪುರುಷನು ಬರುವನು. ನಾನೇ ಆತನೆಂದು ಭಾವಿಸಿ ವಿಶ್ವಾಸದಿಂದ ಸೇವೆ ಮಾಡಿದರೆ, ಆರೋಗ್ಯವನ್ನು ಪಡೆಯುವಿ" ಎಂದು ಹೇಳಿ ಅದೃಶ್ಯನಾದನು. ತಾರಾಬಾಯಿಗೆ ಸ್ವಪ್ನದ ಸಂಗತಿಯು ಚನ್ನಾಗಿ ಸ್ಮರಣೆಯಲ್ಲುಳಿಯಿತು ಮರುದಿನ ಬೆಳಗಾಯಿತು. ಅವಳು ಎದ್ದು ಮುಖಪ್ರಕ್ಷಾಲನ ಮಾಡಿಕೊಂಡು ಸ್ವಪ್ನದ ಸಂಗತಿಯನ್ನು ಸ್ಮರಿಸಿ ಸಂತೋಷಪಟ್ಟಳು.

ಬಳಿಕ ಅವಳು ಹೊಳೆಯಲ್ಲಿ ಸ್ನಾನಮಾಡಿ ಅಂದಿನ ಸೇವೆಯನ್ನು ಮುಗಿಸಿಕೊಂಡು ಸ್ವಗ್ರಾಮಕ್ಕೆ ಪ್ರಯಾಣ ಬೆಳಿಸಿದಳು.

ಈ ಮಾತಿಗೆ ಒಂದು ತಿಂಗಳು ಗತಿಸಿತು ದೃಷ್ಟಾಂತದಂತೆ ಸತ್ಪುರುಷನು ಬರಲಿಲ್ಲ. ತಾರಾಬಾಯಿಗೆ ಯೋಚನೆಯಾಯಿತು. ನನ್ನಂಥ ಪಾಪಿಷ್ಠಳ ಮನೆಗೆ ಸತ್ಪುರುಷರು ಬರಬಹುದೇ? ಎಂದು ಅವಳು ಯೋಚಿಸಿದಳು ಕಡೆಗೆ ಅವಳು ಬೆಸತ್ತು ಮತ್ತೆ ವಾಡಿಗೆ ಹೋದಳು. ಅಲ್ಲಿ ಮೊದಲಿನಂತೆ ಸೇವೆ ಮಾಡಹತ್ತಿದಳು. ಪುನಃ ಅವಳಿಗೆ ಮೊದಲಿನಂತೆ ದೃಷ್ಟಾಂತವಾಯಿತು. ಆಗಲವಳು ಭಗವದ್ವಚನದಲ್ಲಿ ವಿಶ್ವಾಸಪಟ್ಟು ಪುನಃ ಮನೆಗೆ ಬಂದಳು, ಮತ್ತೂ ಒಂದು ತಿಂಗಳು ಕ್ರಮಿಸಿತು. ಸತ್ಪುರುಷರಾರೂ ದಯಮಾಡಿಸಲಿಲ್ಲ. ಈಗ ಮಾತ್ರ ತಾರಾಬಾಯಿಯು ಪೂರ್ಣ ನಿರಾಶಳಾದಳು. ಆಕೆಯು ಭಗವದ್ವಚನವು ಸುಳ್ಳೆಂದು ನಿಶ್ಚಯಿಸಿದಳು. ಈ ಸಾರೆ ಏನೇ ಆಗಲೊಲ್ಲದೇಕೆ, ಪ್ರಾಣಹೋದರೂ ಶ್ರೀದತ್ತ ಸನ್ನಿಧಿಯಲ್ಲಿಯೇ ಹೋಗ ಲೊಲ್ಲದೇಕೆ, ಶ್ರೀಯಸ್ಥಾನ ಬಿಟ್ಟು ಬರಲಿಕ್ಕಿಲ್ಲವೆಂದು ನಿರ್ಧಾರಮಾಡಿ ಹೊರ ಟಳು. ಆಕೆಯು ಊರಬಾಟಿ ಒಂದೆರಡು ಮೈಲುಗಳನ್ನು ಕ್ರಮಿಸಿರಲು, ಎದುರಿಗೆ ಒಂದು ವ್ಯಕ್ತಿಯು ಒಂದು ಆಕೆಯನ್ನು ತರುಬಿ ನುಡಿದದ್ದೇನಂದರೆ:—"ನಿನಗೆ ಎರಡು ಸಾರೆ ದೃಷ್ಟಾಂತವಾದರೂ ವಿಶ್ವಾಸ ಹುಟ್ಟಲಿಲ್ಲವೇ? ನೀನು ಹೇಳಿ ಕೇಳಿ ವಾರಾಂಗನೆಯು. ನಿಶ್ಚಯ ಬುದ್ಧಿಯು ನಿನ್ನಲ್ಲಿ ಎಲ್ಲಿಂದ ಬರಬೇಕು? ಈ ಸಾರೆ ವಾಡಿಗೆ ಹೋದೆಯೆಂದರೆ, ಚನ್ನಾಗಿ ಪೆಟ್ಟು ತಿಂದುಮಾತ್ರ ಬರುವಿ."

ಈ ಮೇರೆಗೆ ಆ ಆಗಂತುಕ ವ್ಯಕ್ತಿಯು ನುಡಿಯಲು, ತಾರಾಬಾಯಿಯು ಬೆಟ್ಟಿ ಬಿದ್ದಳು. "ಅಪ್ಪಯ್ಯಾ, ನಾನು ಈ ಸಂಗತಿಯನ್ನು ಇದುವರೆಗೂ ಯಾರ ಮುಂದೆಯೂ ಹೇಳಿರಲಿದ್ದರೆ ಈತನಿಗೆ ಹ್ಯಾಗೆ ತಿಳಿದಿರಬಹುದು! ನೋಡಲಿಕ್ಕೆ ಈತನು ಹುಚ್ಚನ ಹಾಗೆ ಕಾಣುತ್ತಾನೆ" ಎಂದು ಯೋಚಿಸಿ ಕ್ಷಣದಲ್ಲಿ—ಹಾ! ತಿಳಿ ಯಿತು, ಈತನೇ ಆ ಸತ್ಪುರುಷನಾಗಿರಬಹುದೇನು? ಹಾಗಿಲ್ಲದಿದ್ದರೆ ಗುಪ್ತಸಂಗತಿ ಗಳನ್ನು ಹೇಳುವದು ಅನ್ಯರಿಗೆ ಸಾಧ್ಯವೇ? ಛೆ, ಇವರು ನಿಜವಾಗಿಯೂ ಶ್ರೀದತ್ತ ಮಹಾರಾಜನು ಹೇಳಿದ ಸತ್ಪುರುಷರು; ಇವರೇ ನನ್ನ ಉದ್ಧಾರಕರ್ತರು, ಎಂದು ಮನದಲ್ಲಿ ಗಟ್ಟಿಯಾಗಿ ನಂಬಿಕೊಂಡು ತತ್‌ಕ್ಷಣದಲ್ಲಿ ಅವರ ಚರಣಗಳನ್ನು ಗಟ್ಟಿ ಯಾಗಿ ಹಿಡಕೊಂಡಳು. ಆಗ ಆ ವ್ಯಕ್ತಿಯು ಚರಣಗಳನ್ನು ಕೊಸರಿಕೊಳ್ಳುತ್ತಿ ರಲು, ತಾರಾಬಾಯಿಯು ದೈನ್ಯ ಮುಖದಿಂದ "ಮಹಾಸ್ವಾಮಿ, ತಾವೇ ನನ್ನ ಭಾಗದ ಗೈವತವು; ಶ್ರೀದತ್ತ ಮಹಾರಾಜರ ವಚನವು ಇಂದು ಸತ್ಯವಾಯಿತು.

ನನ್ನ ಮನೆಗೆ ದಯಮಾಡಿಸಿ ಪಾಪಿಷ್ಠೆಯಾದ ನನ್ನಿಂದ ಸೇವೆಯನ್ನು ಹೊಂದಿ ನನ್ನನ್ನು ಕೃತಾರ್ಥಳನ್ನಾಗ ಮಾಡಬೇಕು. ನಾನು ಜನ್ಮತಃ ನೀಚಕುಲದಲ್ಲಿ ಹುಟ್ಟಿದವಳು; ಮೇಲಾಗಿ ಇಂದಿನವರೆಗೂ ದುಷ್ಟ ವ್ಯವಹಾರಗಳಲ್ಲಿಯೇ ಕಾಲ ಕಳೆದವಳು. ಅಂದಬಳಿಕ ನನ್ನ ಸಮಾನ ಚಾಂಡಾಲರು ಭೂತಲದಲ್ಲಿ ಯಾರೂ ದೊರೆಯಲಿಕ್ಕಿಲ್ಲ; ಆದರೆ ಸಜ್ಜನರ ಕೀರ್ತಿಯು ಲೋಕದಲ್ಲಿ ಹಬ್ಬಬೇಕಾದರೆ ನನ್ನಂಥ ಪಾಪಿಗಳನ್ನು ಉದ್ಧರಿಸಲೇ ಬೇಕಲ್ಲವೇ? ಯಾಕಂದರೆ ಲೋಕದಲ್ಲಿ ಸದ್ವಸ್ತುಗಳ ಪ್ರಭಾವವೇ ಹಾಗಿರುತ್ತದೆ ಉತ್ತಮವಾದ ರತ್ನವನ್ನು ತೆರೆದಿಟ್ಟರೆ ಅದು ಆ ಪ್ರದೇಶದಲ್ಲಿಯ ಕತ್ತಲೆಯನ್ನೆಲ್ಲ ನುಂಗಿ ಪ್ರಕಾಶವನ್ನುಂಟು ಮಾಡುತ್ತದೆ. ಸುವಾಸನೆಯುಳ್ಳ ಕಸ್ತೂರಿಯನ್ನು ತೆರೆದಿಟ್ಟ ಪ್ರದೇಶವೆಲ್ಲ ಅದರ ಪರಿಮಳದಿಂದ ವ್ಯಾಪಿಸಿ ಬಿಡುತ್ತದೆ. ಪರಿಸ ಮಣಿಯು ಕಬ್ಬಿಣವನ್ನು ಸ್ಪರ್ಶಿಸಿದರೆ ಕಬ್ಬಿಣವು ಸುವರ್ಣವಾಗುತ್ತದೆ. ಅದರಂತೆ ಪುಣ್ಯರಾಶಿಗಳಾದ ಸಜ್ಜನರ ಸಂಗದಿಂದ ಪಾಪಿಗಳ ಪಾಪವು ಸಮೂಲವಾಗಿ ನಾಶವಾಗುತ್ತದೆ. ಇದು ಸಜ್ಜನರ ಕರ್ತವ್ಯವೇ ಆಗಿರುತ್ತದೆ. ನಾನಂತೂ ಪಾಪಿಷ್ಠೆಯು, ಶ್ರೀದತ್ತನ ಆಜ್ಞೆಯ ಮೇರೆಗೆ ನಿಮ್ಮ ಚರಣಗಳನ್ನು ಗಟ್ಟಿಯಾಗಿ ಹಿಡಿದಿರುತ್ತೇನೆ.'' ಎಂದು ನುಡಿದಳು. ಆಕೆಯ ಈ ರಹಸ್ಯಮಯ ಮಾತುಗಳನ್ನು ಕೇಳಿ ಆ ವ್ಯಕ್ತಿಗೆ ದಯೆಯುತ್ಪನ್ನವಾಯಿತು. ಕೂಡಲೆ ಆ ವ್ಯಕ್ತಿಯು ಹಾಸ್ಯಮುಖದಿಂದ ''ತಾಯಿ, ಅಂಜಬೇಡ'' ಎಂದು ನುಡಿದು ಆಕೆಗೆ ಅಭಯವನ್ನು ಕೊಟ್ಟಿತು.

ಪ್ರಿಯವಾಚಕರೇ, ಹೀಗೆ ತಾರಾಬಾಯಿಗೆ ದಾರಿಯಲ್ಲಿ ಭೆಟ್ಟಿಯಾಗಿ ಅಭಯವನ್ನು ಕೊಟ್ಟ ವ್ಯಕ್ತಿಯಾರೆಂಬದು ನಿಮ್ಮ ಕಲ್ಪನೆಯಲ್ಲಿ ಬಂದಿರಬಹುದು. ನಮ್ಮ ಕೃಷ್ಣಾವಧೂತರು ಗುರುಗಳ ನಿಧನದ ನಂತರ ಕರವೀರಕ್ಷೇತ್ರಕ್ಕೆ ಹೋಗುವ ಮನಸ್ಸು ಮಾಡಿದ ಸಂಗತಿಯನ್ನು ನೀವು ಓದಿ ತಿಳಿದಿರುವಿರಷ್ಟೇ, ಅದರಂತೆ ಅವರು ಮುಂದೆ ಸ್ವಲ್ಪ ದಿವಸಗಳಲ್ಲಿ ಕರವೀರ ಕ್ಷೇತ್ರಕ್ಕೆ ಬಂದು ಬಿಟ್ಟರು, ಆದರೆ ಆ ವಿಶಾಲವಾದ ನಗರಿಯಲ್ಲಿ, ಅದರಲ್ಲೂ ವಿಷಯಸುಖಲೋಲುಪವಾದ ಗ್ರಾಮದಲ್ಲಿ ಇವರನ್ನು ಕೇಳುವವರಾರು? ದಿನಾಲು ನೂರಾರು ಜನ ಹುಚ್ಚರು ಬರುವರು, ನೂರಾರುಜನ ಹುಚ್ಚರು ಹೋಗುವರು, ಎಂದು ತಿಳಿದು, ಅವರ ಕಡೆಗೆ ಯಾರೂ ಲಕ್ಷ್ಯಕೊಡಲಿಲ್ಲ. ಹೀಗಿರಲು, ಮೇಲೆ ಹೇಳಿದಂತೆ ಶ್ರೀದತ್ತನ ಆಜ್ಞೆಯ ಮೇರೆಗೆ ತಾರಾಬಾಯಿಯು ಕೃಷ್ಣಾವಧೂತರನ್ನು ಸತ್ಪುರುಷರೆಂದು ಕಂಡುಹಿಡಿಯಲು, ಆ ಸಂಗತಿಯನ್ನು ತಿಳಿದು ಸರ್ವರಿಗೂ ಆನಂದವಾಯಿತು. ತಾರಾಬಾ

ಯಿಯು ಅವಧೂತರ ವಿಷಯವಾಗಿ ತನಗೆ ಬಂದ ಅನುಭವವನ್ನು ಸಮಸ್ತರ ಮುಂದೂ ಹೇಳಿದಳು. ಬಳಿಕ ಕೇಳುವದೇನು? ತಾರಾಬಾಯಿಯ ಮನೆಯ ಮುಂದೆ ಜನರ ಸಮ್ಮರ್ದವು ಹೆಚ್ಚತೊಡಗಿತು. ವಾರಾಂಗನೆಯ ಮನೆಗೆ ಯಾರೋ ಸಾಧುಗಳು ಬಂದಿರುವರೆಂಬ ವಾರ್ತೆಯು ಆ ಊರತುಂಬೆಲ್ಲ ಪಸರಿಸಿತು. ದುರ್ಜನರ ನಿಂದೆಗೆ ಆರಂಭವಾಯಿತು:-"ಕಲಿಯುಗದ ಸಾಧುಗಳು ಇಂಥವರೇ ಸರಿ! ಎಲ್ಲಿಯಾದರೂ ವಾರಾಂಗನೆಯರನ್ನೋ, ಶ್ರೀಮಂತ ವಿಧವೆಯರನ್ನೋ ಅಥವಾ ಭೋಳೇ ಜನರನ್ನೋ ಆಶ್ರಯಿಸಿ ತಮ್ಮ ಬೇಳೆಬೇಯಿಸಿಕೊಳ್ಳುವದು ಅವರ ಕೆಲಸವು! ಇವರಿಗೆ ಸಾಧುಗಳೆಂದು ಯಾರು ಅನ್ನುವರು? ಮೂರ್ಖರೂ ವ್ಯವಹಾರಶೂನ್ಯರೂ ಆದವರು ಮಾತ್ರ ಉದ್ಯೋಗವಿಲ್ಲದೆ ಇಂಥವರನ್ನು ಸಾಧುಗಳು-ಸಾಧುಗಳು ಎಂದು ಕೊಂಡಾಡುವರು. ಇವರಿಂದಲೇ ಆ ಸಾಧುಗಳ ಪ್ರಸ್ಥವು ಬೆಳೆಯುವದು. ಏನು ಸಾಧುಗಳೋ ನಮ್ಮಪ್ಪಾ! ಲೋಕದಲ್ಲಿ ಇವರ ಪುಂಡಾಟಿಕೆ ಹೆಚ್ಚಾಯಿತು." ಎಂದು ಮನಸೋಕ್ತವಾಗಿ ನಿಂದಾರೂಪದ ಹರಟೆಯನ್ನು ಕೊಚ್ಚುತ್ತ ಬಾಯಿಸುಖವನ್ನು ಹೊಂದಹತ್ತಿದರು. ಪಾಪ! ಆ ನಿಂದಕರು ನಮ್ಮ ಕೃಷ್ಣಾವಧೂತರ ಘನತರವಾದ ಯೋಗ್ಯತೆಯನ್ನೇನು ಬಲ್ಲರು? ಲೋಕದಲ್ಲಿ ಸಾಧುಗಳ ವೇಷದಿಂದ ಅನಂತ ಜನರು ತಿರುಗುವವರಾದ್ದರಿಂದ ಅವರ ಮಾಲಿಕೆಯಲ್ಲಿಯೇ ಇವರನ್ನು ಸೇರಿಸಿಬಿಟ್ಟಿದ್ದರು. ಹೊಂಬಣ್ಣತ್ತಾಳಿಯು ನೋಡಲಿಕ್ಕೆ ಬಂಗಾರದಂತೆ ಕಂಡರೂ ಅದು ಬಂಗಾರವಾಗಬಹುದೇ? ಅದರಂತೆ ಕಾರ್ಯಸಾಧನಕ್ಕಾಗಿಯೋ ಅಥವಾ ಹೊಟ್ಟೆ ಪಾಡಿಗಾಗಿಯೋ ತಿರುಗುವ ಸಾಧುವೇಷಧಾರಿಗಳು ನಿಜವಾದ ಸಾಧುಗಳು ಹ್ಯಾಗೆ ಆದಾರು? ನಿಜವಾದ ಬಂಗಾರವನ್ನು ಪರೀಕ್ಷೆಯಿಂದಲೇ ತಿಳಿಯುವಂತೆ ನಿಜವಾದ ಸಾಧುಗಳನ್ನು ಪರೀಕ್ಷೆಯಿಂದಲೇ ತಿಳಿಯಬೇಕೆಂಬುದನ್ನು ಆ ನಿಂದಕರು ಅರಿತವರಾಗಿದ್ದರೂ ಪರೀಕ್ಷಾಶಕ್ತಿಯಿಲ್ಲದೆ ಎಲ್ಲರನ್ನೂ ತಮ್ಮ ನಿಂದಾರೂಪವಾದ ಚಕ್ರದಲ್ಲಿ ತಿರುಗಿಸಿ ಬಿಡುತ್ತಿದ್ದರು ಇರಲಿ.

ತಾರಾಬಾಯಿಯು ಅತ್ಯಂತ ನಿಷ್ಠೆಯಿಂದ ಅವಧೂತರಸೇವೆಯನ್ನು ಮಾಡಹತ್ತಿದಳು. ಅವಳ ಸ್ವಾಮಿಭಕ್ತಿಯು ಹೇಳಹೆಸರಿಲ್ಲದೆ ಹೋಯಿತು. ಇದಲ್ಲದೆ ಭಾವಿಕರಾದ ಎಷ್ಟೋ ಜನರು ಶರಣುಬಂದರು. ಅವರವರ ಕಾಮನೆಗಳೂ ಪೂರ್ಣವಾದವು. ಸಜ್ಜನರು ತಮ್ಮ ಪ್ರಭಾವವನ್ನು ಒಮ್ಮೆ ಲೋಕಕ್ಕೆ ತೋರಿಸಿ ಬಿಡುವರು. ಆ ಪ್ರಭಾವದಿಂದ ಗುರುತು ಹಿಡಿದು ಯಾರಾದರೂ ಉದ್ಧೃತರಾಗತಕ್ಕವರು ಆಗಲೆಂಬದೇ ಆ ಪ್ರಭಾವಪ್ರಕಾಶನದ ಉದ್ದೇಶವಿರುತ್ತದೆ. ಅದರಂತೆ ಕೃಷ್ಣಾವಧೂತರೂ

ತಾರಾಬಾಯಿಯು ತಮ್ಮನ್ನು ಗುರುತಿಸಿದ ಬಳಿಕ ತಮ್ಮ ಪ್ರಭಾವವನ್ನು ಬೈಲಿಗಿಟ್ಟರು. ಅಲ್ಲಿಯುವರೆಗೆ ಅವರು ಆ ಕರವೀರ ಕ್ಷೇತ್ರದಲ್ಲಿದ್ದರೂ ಒಬ್ಬರಿಗೂ ತಮ್ಮ ಸುಳಿವು ಹತ್ತಗೊಟ್ಟಿದ್ದಿಲ್ಲ. ಭಕ್ತರು ಬಂದ ಹೊರತು, ಸಜ್ಜನರು ಬೈಲಿಗೆ ಬರುವದಿಲ್ಲೆಂಬುದು ಇವರ ಕೃತಿಯಿಂದ ವ್ಯಕ್ತವಾಗುತ್ತದೆ. ಈ ಮೇರೆಗೆ ನಮ್ಮ ಕೃಷ್ಣಾವಧೂತರವರು ಕರವೀರಕ್ಷೇತ್ರಕ್ಕೆ ಪ್ರಯಾಣ ಮಾಡಿ ಸದ್ಭಕ್ತಳಾದ ತಾರಾಬಾಯಿಯು ಮನೆಯಲ್ಲಿ ಆತಿಥ್ಯವನ್ನು ಕೈಕೊಳ್ಳುತ್ತ ತಮ್ಮ ಐಶ್ವರ ತೇಜಸ್ಸಿನಲ್ಲಿ ವಾಸಮಾಡಿದರು.

## ೮ನೆಯ ಪ್ರಕರಣ.

### ಸಂಸಾರಿಕರ ಸಂಗವು ವಿರಕ್ತರಿಗೆ ಮಾರಕವು.

ಕೆಲಕಾಲವು ಕ್ರಮಿಸುತ್ತಿರಲು ತಾರಾಬಾಯಿಗೆ ಒಂದು ಬಗೆಯಿಂದ ಅಹಂಭಾವವುತ್ಪನ್ನವಾಯಿತು ಅವಳು ತನ್ನಲ್ಲಿ “ತನ್ನ ಸಮಾನ ಪುಣ್ಯವತಿಯರು ಯಾರಿರುವರು? ಪರಬ್ರಹ್ಮಸ್ವರೂಪರಾದ ಅವಧೂತರು ನನ್ನಿಂದ ಸೇವೆಯನ್ನು ಪರಿಗ್ರಹಿಸುತ್ತ ನನ್ನ ಮನೆಯಲ್ಲಿ ವಾಸವಾಗಿರುವರು. ನಾನೇ ಧನ್ಯಳು” ಎಂದು ತಿಳಿದುಕೊಂಡಳು. ಅವಳ ಈ ತಿಳುವಳಿಕೆಯು ತಪ್ಪಿನದಲ್ಲವಾಗಿದ್ದರೂ ಅದರಿಂದುಂಟಾದ ಅಹಂಭಾವವು ಬೇರೆ ಭಕ್ತರಿಗೆ ಹಿಂಸೆಕೊಡಲಾರಂಭಿತು. ಆಗ ಅವಧೂತರು ಕೆಲವು ದಿವಸಗಳವರೆಗೆ ತಾರಾಬಾಯಿಯ ಮನೆಯನ್ನು ತ್ಯಜಿಸಬೇಕೆಂದು ಯೋಚಿಸಿದರು. ಆಗ ಅನಾಯಾಸವಾಗಿ ಮಾಘಮಾಸವಿದ್ದುದರಿಂದ ಕರವೀರದ ಬಳಿಯಲ್ಲಿರುವ ಪ್ರಯಾಗವೆಂಬಲ್ಲಿಗೆ ಪರಿವಾರವನ್ನು ಹೊರಡಿಸಿಕೊಂಡು ನಡೆದರು. ತಾರಾಬಾಯಿಯು ಬಳ್ಳೇ ಉತ್ಸವದಿಂದ ಅವಧೂತರೊಡನೆ ಪ್ರಯಾಗವನ್ನು ಮುಟ್ಟಿ ಬ್ರಾಹ್ಮಣ ಸಂತರ್ಪಣೆಯ ಕಾರ್ಯವನ್ನಾರಂಭಿಸಿದಳು. ಪಾಕಶಾಸ್ತ್ರಪ್ರವೀಣರಾದವರು ಹಾ ಹಾ ಅನ್ನುವಷ್ಟರಲ್ಲಿ ಷಡ್ರಸಾನ್ನವನ್ನು ಸಿದ್ಧಪಡಿಸಿದರು ಎಲೆಗಳನ್ನು ಹಾಕಿದರು. ಬ್ರಾಹ್ಮಣರು ವೇದಘೋಷ ಮಾಡುತ್ತ ಕೃಷ್ಣಾರ್ಪಣವೆಂದು ಉಡುಕಬಿಡುವ ದಾರಿಯನ್ನು ನಿರೀಕ್ಷಿಸುತ್ತಿದ್ದರು. ಅಷ್ಟರಲ್ಲಿ ಕೃಷ್ಣಾವಧೂತರು ಇಬ್ಬರು ಶಿಷ್ಯರೊಡನೆ ಇಲ್ಲದಂತಾದರು. ಇಷ್ಟೊತ್ತಿನವರೆಗೆ ಇಲ್ಲಿಯೇ ಓಡಾಡುತ್ತಿದ್ದು ಈಗೆಲ್ಲಿ ಹೋದರೆಂದು ಜನರು ಅತ್ತಿತ್ತ ಹುಡುಕಹತ್ತಿದರು; ಆದರೆ ಅವರು ಅಲ್ಲಿದ್ದರಷ್ಟೇ ಸಿಗುವದು? ಭಕ್ತಮಂಡಲಿಯು ಹುಡುಕಿ ಬೇಸತ್ತಿತು. ಜನರೆರೂ ಇದೇನು ಚಮ

ತ್ಕಾರವೆಂದು ಎಸ್ಮಿತರಾದರು. ಅಹಂಭಾವದಿಂದ ಬ್ರಾಹ್ಮಣ ಸಂತರ್ಪಣೆಯನ್ನು ನಡೆಸಿದ್ದ ತಾರಾಬಾಯಿಯ ಸೊಂಡಿಯು ಇಳಿಗಿತು. ಅವಳು ಗುರುಗಳನ್ನು ದೈನ್ಯ ಭಾವದಿಂದ ಸ್ಮರಿಸತೊಡಗಿದಳು. ಒಂದು ತಾಸಾಯಿತು, ಎರಡು ತಾಸಾಯಿತು, ಅವಧೂತರ ಸುದ್ದಿಯೇ ಇಲ್ಲ. ಗುರುಗಳು ಎಲ್ಲಿ ಮಾಯವಾದರೆಂಬ ಅಸಮಾಧಾನ ದಿಂದ ಕೆಲವರು ಭೋಜನ ಮಾಡದೆ ಕರಪೇರಕ್ಕೆ ಹೋದರು; ಕೆಲವರು ಹೊಟ್ಟೆಯ ಕಾಟವನ್ನು ತಾಳಲಾರದೆ ಸುಖವಾಗಿ ಭೋಜನಮಾಡಿದರು. ತಾರಾಬಾಯಿಯು ಗುರುಗಳ ದರುಶನವಾಗುವ ವರೆಗೆ ಊಟ ಮಾಡಲಿಕ್ಕಿಲ್ಲವೆಂದು ಸಂಕಲ್ಪ ಮಾಡಿ ದಳು. ಆ ದಿನ ಸಂಜೆಯವರೆಗೆ ದಾರೀ ನೋಡಿ ಎಲ್ಲರೂ ತಮ್ಮ ತಮ್ಮ ಗ್ರಾಮ ಗಳಿಗೆ ಹೊರಟು ಹೋದರು. ತಾರಾಬಾಯಿಯು ಗುರುಗಳು ತನ್ನ ಕೈಯಲ್ಲಿರುವ ರೆಂಬ ದುರಭಿಮಾನವನ್ನು ಬಿಟ್ಟು ಉದಾಸೀನ್ಯದಿಂದ ಮನೆಗೆ ಬಂದಳು.

ಹೀಗೆ ಪ್ರಯಾಗದಲ್ಲಿ ಸರ್ವರನ್ನೂ ಅಸಮಾಧಾನವೆಂಬ ಕೂಪದಲ್ಲಿ ನೂಕಿ, ಗುಪ್ತರಾದ ಅವಧೂತರು ಸಹ್ಯಾದ್ರಿಯ ಕಿರಿಗಂಟೆಯ ಅಡವಿಗೆ ಹೋದರು. ಸಂಗಡ ಇದ್ದ ಇಬ್ಬರು ಶಿಷ್ಯರು ದಾರೀ ನಡೆದು ಬೇಸತ್ತರು. ಮೂರು ದಿನಗಳಾ ದರೂ ಅವರಿಗೆ ಅನ್ನ-ನೀರುಗಳಿದ್ದಿಲ್ಲ. ಆಗ ದೇಹಬುದ್ಧಿಯುಳ್ಳ ಆ ಶಿಷ್ಯದ್ವಯರು ಬಹಳವಾಗಿ ಹತಾಶರಾದರು. ಆಗ ಅವರು ಗುರುಗಳನ್ನು ಕುರಿತು ಹೇಳಿಕೊಳ್ಳ ಲಾರಂಭಿಸಿದರು:- "ಸ್ವಾಮಿಾ ನಮಗೆ ಕಾಲುಗಳು ಬಹಳವಾಗಿ ನೋಯುತ್ತವೆ. ಕ್ಷುದ್ಬಾಧೆಯನ್ನಂತೂ ಹೇಳಲೇತೀರದು. ನಮಗೆ ಈಗ ಪ್ರಾಣಾಂತ ಸಮಯವೇ ಬಂದ ಹಾಗಾಗಿದೆ. ಅದರಿಂದ ದಯಮಾಡಿ ನಮಗೆ ಅಪ್ಪಣೆಕೊಡಬೇಕು; ಇಲ್ಲಿ ಎಲ್ಲಿಯಾದರೂ ಸಮಿಾಪದಲ್ಲಿ ಹಳ್ಳಿಗಳಿದ್ದರೆ ಊಟ ಮಾಡಿ ಬರುವೆವು" ಎಂದು ಬೇಡಿಕೊಳ್ಳಲು. ಅವರ ಮಾತು ಕೇಳಿ ಅವಧೂತರು ನಕ್ಕರು; ಮತ್ತು ನುಡಿದ ರೇನಂದರೆ: "ಅಪ್ಪಗಳಿರಾ, ದೇಹಕಷ್ಟವನ್ನು ಸಹಿಸದಿದ್ದರೆ ವಿರಕ್ತರು ಹ್ಯಾಗಾಗು ವಿರಿ? ನಾನು ನಿಮಗೆ ಈ ಮೊದಲೇ ಹೇಳಲಿಲ್ಲವೆ? ವಿರಕ್ತನಾದವನು ದೇಹಯಾತ ನೆಯ ಕಡೆಗೆ ಸ್ವಲ್ಪವೂ ಲಕ್ಷ್ಯಗೊಡಬಾರದು. ವಿರಕ್ತಿಯುಳ್ಳವನೇ ಗುರುಭಕ್ತನಾಗ ಬೇಕು. ಒಮ್ಮೆ ಗುರುಭಕ್ತನಾದ ಮೇಲೆ ಕ್ಷುಧಾಶಾಂತ್ಯರ್ಥವಾಗಿಯಾಗಲಿ, ಮತ್ತಾವ ಕಾರಣದ ಸಲುವಾಗಿಯಾಗಲಿ ಸಾಂಸಾರಿಕರ ಸಹಾಯವನ್ನು ದೈನ್ಯ ದಿಂದ ಬಯಸಬಾರದು. ಇದು ಮೊದಲೇ ಕಲಿಯುಗವು; ಸಾಧುಗಳನ್ನು ಕಂಡರೆ ಜನರಿಗೆ ತಿರಸ್ಕಾರ ಹೆಚ್ಚು. ಇಂಥದರಲ್ಲಿ ನೀವು ದೇಹಸೌಖ್ಯಕ್ಕೋಸ್ಕರ ಯಾಚಿ ಸುತ್ತ ಹೋದರೆ ನಿಮ್ಮ ದೈನ್ಯವನ್ನು ಕಂಡು ಅವರಿಗೆ ಸಂತಾಪವಾಗಬಹುದು.

ಒಂದುವೇಳೆ ಅವರು ಏನಾದರೊಂದು ತಪ್ಪು ತಿಳುವಳಿಕೆಯಿಂದ ನಿಮ್ಮನ್ನು ವೈಮುರಿಯಾಗಿ ಥಳಿಸಿದರೂ ಥಳಿಸಬಹುದು. ಆದ್ದರಿಂದ ಅಂಥ ಹುಚ್ಚಿಗೆ ಹೋಗ ಬೇಡಿರಿ. ಅಡವಿಯಲ್ಲಿರುವ ವೃಕ್ಷಗಳು ನಮಗೆ ಆಹಾರವನ್ನೊದಗಿಸಲು ಸಿದ್ಧವಿರು ವವು. ಇದರಿಂದ ನಾವು ನಮ್ಮ ಜಠರಾಗ್ನಿಯನ್ನು ಶಾಂತಪಡಿಸಿಕೊಳ್ಳಬೇಕು.''

ಈ ಮೇರೆಗೆ ಅವಧೂತರು ಮಾತನಾಡಲು, ಆ ಶಿಷ್ಯರಿಬ್ಬರಿಗೆ ಅದು ರುಚಿಸದೆ ಹೋಯಿತು. ಸಮೀಚೀನವಾದ ಪಕ್ವಾನ್ನಗಳನ್ನುಂಡ ಅವರ ನಾಲಿಗೆಯು ಅಡವಿ ಯಲ್ಲಿ ಬೆಳೆದಿರುವ ಗಿಡಗಂಟಿಗಳ ತೊಪ್ಪಲವನ್ನು ಇಚ್ಛಿಸದಾಯಿತು. ಒಮ್ಮೆಯಾದ ರೂ ಅನ್ನವನ್ನು ಉಣ್ಣದಿದ್ದರೆ ಗತ್ಯಂತರವಿಲ್ಲೆಂದು ಅವರಿಗೆ ಅನಿಸಹತ್ತಿತು. ಆಗ ಅವರು ದೈನ್ಯದಿಂದ—ಸ್ವಾಮಿ, ಊರೊಳಗೆ ಹೋಗಿಬರುತ್ತೇವೆ. ಅನ್ನವಿಲ್ಲದೆ ನಮ್ಮ ದೇಹಸ್ಥಿತಿಯು ಕೆಟ್ಟುಹೋಗಿದೆ. ನನ್ನು ಇಚ್ಛೆಯನ್ನು ಪೂರ್ಣಪಡಿಸಬೇಕು, ಎಂದು ಮತ್ತೆ ಬೇಡಿಕೊಂಡರು. ಅದಕ್ಕೆ ಅವಧೂತರು:-ಮೂರ್ಖರಿರಾ ಊರೊ ಳಕ್ಕೆ ಹೋದರೆ ನಿಮಗೆ ಸೌಖ್ಯವಾಗದೆಂದು ಹೇಳಿದರೂ ನಿಮಗೆ ತಿಳವಳಿಕೆ ಬಾರದೆ ಹೋಯಿತು. ನಿಮ್ಮಂಥ ಮೂಢ ಶಿಷ್ಯರು ನಮ್ಮ ಬಳಿಗೆ ಬರಬಾರ ದಾಗಿತ್ತು. ಉಪಾಯವಿಲ್ಲ. ಹೋಗಿಬರ್ರಿ, ಎಂದು ಅಪ್ಪಣೆಕೊಟ್ಟರು. ಹಸಿದವನಿಗೆ ಷಡ್ರಸಾನ್ನವನ್ನು ಬಡಿಸದಂತೆ ಊರೊಳಗೆ ಹೋಗಲು ಆತುರರಾದ ಆ ಶಿಷ್ಯರಿಗೆ ಗುರುಗಳು ಅಪ್ಪಣೆಕೊಟ್ಟದ್ದೇ ಸಾಕಾಯಿತು. ಅವರು ಗುರುಗಳನ್ನು ನಮಿಸಿ ಯಾವ ದಿಕ್ಕಿಗೆ ಊರು ಇರುವದೆಂಬದನ್ನು ಹೊಗೆಯ ಸುಳಿದಾಟದ ಮೇಲಿಂದ ಗೊತ್ತುಹಚ್ಚಿ ಆ ದಿಕ್ಕಿಗೆ ನಡೆದರು. ಕೆಲವು ದಾರಿ ಕ್ರಮಿಸುತ್ತಿರಲು ಕರ್ಮಧರ್ಮ ಸಂಯೋಗದಿಂದ ಒಂದು ಹಳ್ಳಿಯು ಕಾಣಿಸಿತು. ಅದರಿಂದ ಅವರಿಗಾದ ಆನಂದ ವನ್ನು ಹೇಳಲಾಗಲ್ಲ. ಇನ್ನು ಸ್ವಲ್ಪಹೊತ್ತಿನಲ್ಲಿ ಅನ್ನವುದೊರೆತು ಕ್ಷುಧಾಶಾಂತಿಯಾ ಗುವದೆಂದು ಅವರು ಹಿಗ್ಗಿದರು. ಪೂರ್ಣ ಭಕ್ತಿಯಿಲ್ಲದೆ ಗುರುಸೇವೆ ಮಾಡುತ್ತೇ ವೆಂದು ಗುರುಸನ್ನಿಧಿಯನ್ನು ಸೇರುವ ಜನರಸ್ಥಿತಿಯು ಕಠಿಣ ಪ್ರಸಂಗ ಬಂದಾಗ ಹ್ಯಾಗಾಗುತ್ತದೆಂಬದು ಅವರ ಆಗಿನ ಸ್ವರೂಪದಿಂದ ಒಡೆದು ಕಾಣತೊಡಗಿತು.

ಆ ಶಿಷ್ಯದ್ವಯರು ಆ ಊರ ಸಮೀಪಕ್ಕೆ ಹೋದರು. ಇತ್ತ ಆ ಊರಿನಲ್ಲಿ ವಿಪರೀತ ಸಂಗತಿಯು ವರ್ತಿಸಿತ್ತು. ಕಳ್ಳರ ಉಪದ್ರವವು ಹೆಚ್ಚಾಗಿದ್ದದರಿಂದ ಕಳ್ಳರು ಅಡವಿಯಲ್ಲಿ ವಾಸಿಸಿ ರಾತ್ರಿಯಲ್ಲಿ ಊರೊಳಗೆ ಹೊಕ್ಕು ಕಳವು ಮಾಡುವ ರೆಂದು ಆ ಗ್ರಾಮವಾಸಿಗಳು ತಿಳಿದಿದ್ದರು. ಹೀಗೆ ಆ ಗ್ರಾಮವಾಸಿಗಳಿಗೆ ಭಾವನೆ ಯಾದಾಗ ಈ ಅಪರಿಚಿತರಿಬ್ಬರು ಆ ಊರನ್ನು ಹೊಕ್ಕರು. ಒಳಿಕ ಕೇಳುವದೇನು?

ಕಳ್ಳರು ಪಾಳತಿಯನ್ನು ನೋಡ ಬಂದರೆಂಬ ಭ್ರಾಂತಿಯು ಅಲ್ಲಿದ್ದ ಜನರಿಗೆ ಬಂದಿತು. ಕೂಡಲೆ ಹತ್ತಿಪ್ಪತ್ತು ಜನರು ಅವರನ್ನು ಮುತ್ತಿದರು ಹಸಿವೆಯಿಂದ ಬಳಲಿದ್ದರಿಂದ ಆ ಅಪರಿಚಿತರಿಗೆ ಮಾತಾಡಲಿಕ್ಕೆ ಬಾರದಂತಾಯಿತು. ಕೂಡಿದ ಜನರು ಇವರು ಕಳ್ಳರೆಂದೇ ನಿಶ್ಚಯಿಸಿ ಇವರನ್ನು ಮ್ಯಾಮೂರಿ ಥಳಿಸಿದರು. ಅನ್ನವು ಸಿಕ್ಕು ಹಸಿವು ಹಿಂಗೀತೆಂದು ಉಬ್ಬಿ ಬಂದ ಅವರಿಗೆ ಮ್ಯಾಯೂರಿ ಬಡತಗಳು ಬಿದ್ದವು. ಇನ್ನೂ ಅವರ ಸ್ಥಿತಿಯು ಏನಾಗುತ್ತಿತ್ತೋ ಏನೋ? ಅಷ್ಟರಲ್ಲಿ ಯಾರೋ ಬಂದು.- ಛೀ. ಹಾದಿಕಾರರನ್ನು ಹೀಗೆ ಹೊಡೆಯುವದುಂಟೆ? ಎಂದು ಜನರನ್ನು ಬೆದರಿಸಿದರು. ಆಗ ಜನರು ಅವರನ್ನು ಹೊಡೆಯುವದನ್ನು ಬಿಟ್ಟರು. ಹೀಗೆ ಬಿಟ್ಟದ್ದೇ ಸಾಕಾಯಿತು ಆ ಶಿಷ್ಯದ್ವಯರು ಗುರುಗಳ ಅಪ್ಪಣೆ ಮೀರಿದ್ದಕ್ಕೆ ಪಶ್ಚಾತ್ತಾಪ ಬಟ್ಟು ಬೀಳುತ್ತ ಏಳುತ್ತ ಗುರುಗಳ ಬಳಿಗೆ ಬಂದರು.

ಆಗ ಅವಧೂತರು ಒಂದು ಗಿಡದ ಬುಡಕ್ಕೆ ಕುಳಿತುಕೊಂಡಿದ್ದರು. ಶಿಷ್ಯರು ತೇಕುತ್ತ ಬರಲು ಮುಗುಳುನಗೆ ನಕ್ಕು:—ಯಾಕೆ ಮ್ಯಾಮೂರೆ ಪೆಟ್ಟು ತಿಂದು ಬಂದಿರಲ್ಲವೆ? ಸಾಂಸಾರಿಕರ ಸಂಗವು ಬೇಡವೆಂದು ನಾನು ಹೇಳಲಿಲ್ಲವೇ? ಹ್ಯಾಗಿದೆ, ಅನ್ನದ ಸವಿ! ಎಂದು ನುಡಿದರು ಶಿಷ್ಯರು:-ತಪ್ಪಾಯಿತು, ಕ್ಷಮಿಸಬೇಕೆಂದು ಚರಣಗಳ ಮೇಲೆ ಬಿದ್ದರು ಬಳಿಕ ಅವಧೂತರು ಸಮಯೋಚಿತ ಮಾತುಗಳಿಂದ ಅವರನ್ನು ಸಮಾಧಾನಗೊಳಿಸಿ ತಾವು ಸಿದ್ಧಪಡಿಸಿಟ್ಟಿದ್ದ ಎರಡು ಗುಳಿಗೆಗಳನ್ನು ಅವರಿಬ್ಬರಿಗೂ ಒಂದೊಂದರಂತೆ ಕೊಟ್ಟರು ಆ ಗುಳಿಗೆಗಳ ಸೇವನದಿಂದ ಅಮೃತ ಪಾನಮಾಡಿದಷ್ಟು ಸಮಾಧಾನವು ಅವರಿಗಾಯಿತು. ದೇಹಾಯಾಸವೂ ಕ್ಷುಧೆಯೂ ಹೊರಟುಹೋದವು ಆಗ ಅವರು ಗುರುಗಳನ್ನು ಬಹಳವಾಗಿ ಕೊಂಡಾಡಿದರು. ಶಿಷ್ಯರಿಗೆ ದೇಹ ಸಂತಾಪವು ಕಡಿಮೆಯಾಗಲು, ಅವಧೂತರು ಅವರನ್ನು ಕುರಿತು ನುಡಿದರೇನಂದರೆ:—.

"ತಮ್ಮಂಗಳಿರಾ. ಈಗ ವಿಪರೀತಕಾಲವು ಪ್ರಾಪ್ತವಾಗಿರುತ್ತದೆ. ಅತಿಥಿಗಳ ಸೇವೆಯು ಮುಗ್ಗಿ ಹೋಗಿರುತ್ತದೆ. ಹೀಗಾಗಲಿಕ್ಕೆ ಕಾರಣವೂ ಇದೆ. ಯಾಕಂದರೆ, ಅತಿಥಿಗಳಾಗಿ ಮನೆಗೆ ಬರುವವರು ಸಾತ್ವಿಕರಿದ್ದರೆ ಅತಿಥಿ ಸೇವೆ ಮಾಡುವವನಿಗೆ ಯಾವ ಬಗೆಯ ಹಿಂಸೆಯೂ ಆಗುವದಿಲ್ಲ. ಒಂದುವೇಳೆ ಅವರು ದುರ್ಜನರಾಗಿದ್ದರೆ, ಸೇವೆ ಮಾಡುವವನಿಗೆ ಅವರಿಂದ ಏನಾದರೂ ನಷ್ಟವಾಗದೆ ಇರದು. ದುರ್ಜನರ ಸ್ವಭಾವವು ಹೀಗೆಯೇ ಇರುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಅತಿಥಿಸೇವಕನು ಧನಿಕನಿದ್ದರೆ ಅವನ ಮನೆಯೊಳಗಿನ ಪದಾರ್ಥಗಳನ್ನು ಅತಿಥಿಗಳಾದ ದುರ್ಜನರು

ಸಂಧಿ ಸಾಧಿಸಿ ಎತ್ತಿ ಹಾಕುವರು. ಇಲ್ಲವೆ ಮತ್ತೇನನ್ನಾದರೂ ಮಾಡುವರು. ಹೀಗಾದರೆ ಅತಿಥಿಗಳ ವಿಷಯವಾಗಿ ಆದರವು ಹ್ಯಾಗೆ ಉತ್ಪನ್ನವಾಗಬೇಕು? ಆದ್ದರಿಂದ ತಮ್ಮಗಳಿರಾ, ಈಗ ಮಂದಿಯ ಮನೆಯಲ್ಲಿ ಸಥಿಯಿಂದ ಪ್ರವೇಶ ಮಾಡುವ ಹಾಗಿಲ್ಲ; ಕಲಿಕಾಲವು ಪ್ರಬಲವಾದ್ದರಿಂದ ಬರಿಯ ಅತಿಥಿಗಳಿಗೂ ದೋಷ ಕೊಡುವಹಾಗಿಲ್ಲ. ದುರ್ಜನ ಅತಿಥಿಗಳಂತೆ ದುರ್ಜನ ಗೃಹಸ್ಥರೂ ಇರುವರು. ಅವರು ಮನೆಗೆ ಬಂದ ಸಜ್ಜನ ಅತಿಥಿಗಳ ಮೇಲೆ ವೃಥಾರೋಪವನ್ನು ಹೊರಿಸಿ ಹಿಂಸಿಸುವರು. ಈ ಲೋಕ ವಿಲಕ್ಷಣ ಸ್ಥಿತಿಯನ್ನು ನೋಡಿ ಸಜ್ಜನರಾದವರು ಸಾಂಸಾರಿಕರಿಂದ ದೂರಿರುವದೇ ಹಿತಕರವು.''

ಈ ಮೇರೆಗೆ ಗುರುಗಳು ಬೋಧಿಸಲು ಆ ಶಿಷ್ಯದ್ವಯರಿಗೆ ತಕ್ಕ ಬುದ್ಧಿಗೆ ಎಚ್ಚರವುಂಟಾಯಿತು. ಮೈಮೇಲೆ ಬಿದ್ದ ಪೆಟ್ಟುಗಳ ನೋವು ಇನ್ನೂ ಕಡಿಮೆಯಾಗದ್ದರಿಂದ ಅರಿಯದ ಸ್ಥಳದಲ್ಲಿ ಹೀಗೆ ಅನ್ನದಾಶೆಗೆ ಹೋದದ್ದು ತಪ್ಪಾಯಿತೆಂದು ಅವರಿಗೆ ಪಶ್ಚಾತ್ತಾಪವುಂಟಾಯಿತು. ಆದರೆ ಮೂಲಚಿತ್ತ ವಾಸನೆಯನ್ನು ಅಳಿಯದಿದ್ದವರ ಪಶ್ಚಾತ್ತಾಪವು ಎಷ್ಟೊತ್ತಿನ ವರೆಗೆ? ಆ ಕ್ಷಣವು ಗತಿಸಿ ಹೋಯಿತೆಂದರೆ ಅವರು ಅದನ್ನು ಮರೆತುಬಿಡುವರು. ಅವರಂತೆ ನಮ್ಮ ಅವಧೂತರ ಈ ಶಿಷ್ಯದ್ವಯರೂ ಮರೆತರು. ಮುಂದೆ ಒಂದೆರಡು ದಿನಗಳು ಕ್ರಮಿಸಲು ಲಾಡ ಎಂಬ ಉಪನಾಮದ ಶಿಷ್ಯನೊಬ್ಬನು ಗುರುಗಳನ್ನು ಕುರಿತು ನುಡಿದನೇನಂದರೆ:—''ಸ್ವಾಮಿ, ನಿದ್ದೆಯು ನನ್ನನ್ನು ಬಲವಾಗಿ ಬಾಧಿಸುವದು. ಟೊಂಕಕ್ಕೆ ಹಗ್ಗವನ್ನು ಬಿಗಿದು ಒಂದು ಗಿಡಕ್ಕೆ ಕಟ್ಟಿದರೂ ನಿದ್ದೆ ಮಾಡುವ ಹಾಗಿದ್ದೇನೆ. ಕ್ಷುಧೆಯ ಬಾಧೆಯಯನ್ನಂತೂ ಹೇಳುವಹಾಗಿಲ್ಲ.''

ಶಿಷ್ಯನ ಈ ಮಾತು ಕೇಳಿ ಅವಧೂತರು ನಕ್ಕರು; ಮತ್ತು ತಮ್ಮ ಮನಸ್ಸಿನಲ್ಲಿ ಆಲೋಚಿಸಿದರೇನಂದರೆ:—ನಮ್ಮ ಸಂಗಡ ಬಂದ ಇವರಿಬ್ಬರೂ ಬಹಳ ಕಚ್ಚಾ ಸ್ಥಿತಿಯಲ್ಲಿರುವರು. ಇವರಿಗೆ ಬೋಧದಿಂದ ಪ್ರಯೋಜನವಾಗುವದಿಲ್ಲ. ಒಂದುವೇಳೆ ಆದರೂ ಬಹಳ ಕಾಲ ಬೇಕು. ಇರಲಿ. ಈಗ ಇವರು ನಿದ್ದೆಯನ್ನೂ ಅನ್ನವನೂ ಇಚ್ಛಿಸುವದರಿಂದ ಅದನ್ನು ಒದಗಿಸಿ ಕೊಡೋಣ; ಆದರೆ ಹಗ್ಗದಿಂದ ಬಿಗಿದರೂ ನಿದ್ದೆ ಮಾಡುತ್ತೇನೆಂದು ಅಂದದ್ದರಿಂದ ಹಗ್ಗವನ್ನು ಕಟ್ಟಿಸಿಯೇ ನಿದ್ದೆ ಮಾಡಿಸೋಣ; ಸಾಂಸಾರಿಕರ ಪ್ರಭಾವವು ಇನ್ನಿಷ್ಟು ಇವರಿಗೆ ಗೊತ್ತಾಗಲಿ.'' ಈ ಪ್ರಕಾರ ಯೋಚಿಸಿ ಅವರು ಶಿಷ್ಯರನ್ನು ಕುರಿತು:—''ತಮ್ಮಗಳಿರಾ, ಈ ದಿನ ನಿಮ್ಮ ಇಚ್ಛೆಯನ್ನು ಪೂರ್ಣ ಮಾಡುವೆವು. ಹೊತ್ತು ಸಮೀಪಕ್ಕೆ ಬಂದಿದೆ; ಯಾವದಾದ

ರೊಂದು ಗ್ರಾಮವನ್ನು ಆಶ್ರಯಿಸೋಣ; ಅಲ್ಲಿಯ ಗ್ರಾಮಸ್ಥರು ನಮ್ಮನ್ನು ಹಗ್ಗದಿಂದ ಪ್ರತಿಬಂಧಿಸುವರು. ಆಗ ಸುಖವಾಗಿ ನಿದ್ದೆ ಮಾಡೋಣವಂತೆ'' ಎಂದುನುಡಿದರು. ಆದಕ್ಕೆ ಶಿಷ್ಯರು ಸ್ವಾಮಿ, ಸುಮ್ಮಸುಮ್ಮನೆ ಜನರು ನಮ್ಮನ್ನು ಹಗ್ಗದಿಂದ ಯಾಕೆ ಪ್ರತಿಬಂಧಿಸುವರು? ಎನಲು, ಗುರುಗಳು ಮಾತನಾಡದೆ ಸಮೀಪದೊಂದು ಹಳ್ಳಿಯ ಹಾದಿಯನ್ನು ಹಿಡಿದರು. ಹೊತ್ತು ಮುಣುಗುವ ಸಮಯಕ್ಕೆ ಅವರು ಒಂದು ಹಳ್ಳಿಯ ಸಮೀಪಕ್ಕೆ ಇರುವ ಹಳ್ಳಕ್ಕೆ ಹೋದರು. ಅವಧೂತರು ಹಳ್ಳದ ದಂಡೆಯ ಮೇಲೆ ಕುಳಿತರು. ಶಿಷ್ಯರೂ ಕುಳಿತರು. ಅಷ್ಟರಲ್ಲಿ ಕರ್ಮಧರ್ಮ ಸಂಯೋಗದಿಂದ ಒಬ್ಬ ತರುಣಿಯು ನೀರು ಒಯ್ಯುವದಕ್ಕಾಗಿ ಹಳ್ಳಕ್ಕೆ ಬಂದಳು. ಹೊತ್ತು ಮುಳುಗುವ ಸಮಯ; ಹಳ್ಳದಲ್ಲಿ ಈ ಮೂವರ ಹೊರತು ಬೇರೆ ಯಾರೂ ಇದ್ದಿಲ್ಲ. ತರುಣಿಯು ಹಿಂದೆ ಮುಂದೆ ನೋಡುತ್ತ ಬಂದ ತಪ್ಪಿಗೆ ಹ್ಯಾಗಾದರೂ ಮಾಡಿ ಕೊಡ ತುಂಬಿಕೊಂಡು ಹೋಗಬೇಕೆಂದು ಅವಸರದಿಂದ ನೀರಲ್ಲಿ ಕಾಲಿಡುತ್ತಿರಲು, ಆಕೆಯು ತನ್ನ ಮಾನ ರಕ್ಷಣೆಗಾಗಿ ಇಷ್ಟು ಅಂಜುತ್ತಿರುವಳೆಂದು ಅವಧೂತರು ತಿಳಿದುಕೊಂಡರು. ಆ ಹೆಣ್ಣುಮಗಳು ಮಾನವಂತೆಯೂ ಪುಕ್ಕಳೂ ಇರುವಳೆಂಬದು ಅವರಿಗೆ ಗೊತ್ತಾಗಿಹೋಯಿತು. ಶಿಷ್ಯರಿಗೆ ಅವರು ಹ್ಯಾಗೂ ಸಾಂಸಾರಿಕರ ಪ್ರಭಾವವನ್ನು ತೋರಿಸಬೇಕಾಗಿತ್ತು. ಆದ್ದರಿಂದ ಅನಾಯಾಸವಾಗಿ ದೊರೆತ ಈ ಸಂಧಿಯನ್ನು ಕಳೆದುಕೊಳ್ಳದೆ ಒಮ್ಮೆಲೆ:—''ಆಕೆಯನ್ನು ಹಿಡಿಯಿರಿ; ಹಿಡಿಯಿರಿ: ಓಡಿ ಹೋಗುವಳು ಹಿಡಿಯಿರಿ'' ಎಂದು ಕೂಗಿದರು. ಮೊದಲೇ ಅಂಜುತ್ತಿದ್ದ ಆ ಹೆಣ್ಣುಮಗಳು ಅವಧೂತರು ಹೀಗೆ ಕೂಗಿದ ಕೂಡಲೆ ಅಂಜಿ ಎದೆಯೊಡೆದಳು. ಕೂಡಲೆ ಅವಳು ಕೈಯೊಳಗಿನ ಕೊಡವನ್ನು ಅಲ್ಲಿಯೇ ಬಿಟ್ಟುಕೊಟ್ಟು ಮೈಮೇಲೆ ಎಚ್ಚರವಿಲ್ಲದೆ ಓಡಿ ಊರ ಅಗಸೆಯ ಬಾಗಿಲಕ್ಕೆ ಬಂದು ಬಿದ್ದಳು. ಆಗ ಅಲ್ಲಿ ಕೆಲ ಜನ ರೈತರು ಗ್ರಾಮಾಧಿಕಾರಿಗಳೊಡನೆ ಏನನ್ನೋ ಆಲೋಚಿಸುತ್ತ ಕುಳಿತುಕೊಂಡಿದ್ದರು. ಒಮ್ಮಿಂದೊಮ್ಮೆ ಈ ಸ್ತ್ರೀಯು ಹೀಗೆ ಓಡಿ ಬಂದು ಸ್ಮೃತಿ ತಪ್ಪಿ ಬೀಳಲು ಅವರು ಗಾಬರಿಯಾಗಿ ಆಕೆಗೆ ಗಾಳಿಯನ್ನು ಹಾಕಿದರು. ಮುಂದೆ ಕೆಲ ನಿಮಿಷಗಳು ಕ್ರಮಿಸುತ್ತಿರಲು ಆಕೆಯು ಶುದ್ಧಿಯ ಮೇಲೆ ಬಂದು ಹಳ್ಳದಲ್ಲಿ ನಡೆದ ವಿಷಯವನ್ನು ತಿಳಿಸಿದಳು. ಬಳಿಕ ಕೇಳುವದೇನು? ಅಲ್ಲಿದ್ದ ಎಲ್ಲ ಜನರೂ ಸಿಟ್ಟಿಗೆದ್ದು ಕೋಲು ಗುದಿಗೆಗಳನ್ನು ತಕ್ಕೊಂಡು ಹಳ್ಳದ ಕಡೆಗೆ ಧಾವಿಸಿದರು. ನಮ್ಮ ಅವಧೂತರು ಮುಂದಿನ ಪರಿಣಾಮವನ್ನು ನಿರೀಕ್ಷಿಸುತ್ತ ಕುಳಿತಂತೆ ಸ್ವಸ್ಥವಾಗಿ ಕುಳಿತಿದ್ದರು. ಶಿಷ್ಯರು ಮಾತ್ರ ಗಾಬರಿಯಾಗಿ ಎಲ್ಲಿ ಮೈಮೇಲೆ ಪೆಟ್ಟು ಬರುವದೋ

ಎಂದು ಚಿಂತಿಸುತ್ತಿದ್ದರು. ಅಷ್ಟರಲ್ಲಿ ಗ್ರಾಮಸ್ಥರು ಅಲ್ಲಿಗೆ ಬಂದು ಬಿಟ್ಟರು. ಆ ಸ್ತ್ರೀಯು ಹೇಳಿದಂತೆ ಮೂವರೂ ಕೈಗೆ ಸಿಗಲು, ಕೇಳುವದೇನು? ತಾಮಸಿಗಳಾದ ಆ ಜನರು ಅವರನ್ನು ಮೈಮುರಿಯಾಗಿ ಥಳಿಸಿದರು. ಅವಧೂತರು ಕಂಯಿ ಕುಂಯಿ ಅನ್ನದೆ ಪೆಟ್ಟುಗಳನ್ನು ತಿಂದರು. ಶಿಷ್ಯರೂ ನಿರ್ವಾಹವಿಲ್ಲದೆ ಗುರುಗಳ ಅಂಜಿಕೆಗೆ ಬಂದ ದುಃಖವನ್ನು ಸಹಿಸಿದರು. ಬಳಿಕ ಗ್ರಾಮಸ್ಥರು ಅವರನ್ನು ಬಲವಾದ ಹಗ್ಗಗಳಿಂದ ಪ್ರತಿಬಂಧಿಸಿ ಗ್ರಾಮಕ್ಕೆ ಒಯ್ದು ಚಾವಡಿಯಲ್ಲಿ ಹಾಕಿದರು. ಇಷ್ಟೆಲ್ಲ ವಿಧಿಯಾದ ಬಳಿಕ ಗ್ರಾಮಸ್ಥರೆಲ್ಲರೂ ಊಟಕ್ಕೆ ಮನೆಗೆ ಹೋದರು. ಅಲ್ಲಿ ಯಾರೂ ಇಲ್ಲದ್ದನ್ನು ನೋಡಿ ಅವಧೂತರು ಶಿಷ್ಯರನ್ನು ಕುರಿತು—ಹ್ಯಾಗದೆ ನಿದ್ರೆಯ ಸವಿಯು? ಅನಾಯಾಸವಾಗಿ ಕೈಕಾಲುಗಳು ಕಟ್ಟಲ್ಪಟ್ಟಿವೆ ಬೆಳತನಕ ಬೇಕಾದ ಹಾಗೆ ವಿಶ್ರಾಂತಿಯನ್ನು ಹೊಂದಿರಿ. ಎಂದು ಹೇಳಿದರು. ಶಿಷ್ಯರು ತಮ್ಮ ಪ್ರಾರಬ್ಧಕ್ಕೆ ವ್ಯಸನ ಪಡುತ್ತ ಅಂದಿನ ರಾತ್ರಿಯನ್ನು ಕಳೆದರು.

ಮರುದಿನ ಬೆಳಗಾಯಿತು. ಗ್ರಾಮಸ್ಥರು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಚಾವಡಿಗೆ ಬಂದರು. ನಿನ್ನೆ ರಾತ್ರಿಯಲ್ಲಿ ಸಿಕ್ಕ ಕಳ್ಳರ ಸಮಾಚಾರವನ್ನು ಇನ್ನಿಷ್ಟು ಚನ್ನಾಗಿ ತಕ್ಕೊಳ್ಳಬೇಕೆಂದು ಅವರು ಪರಸ್ಪರರಲ್ಲಿ ಆಲೋಚಿಸಿಕೊಂಡಿದ್ದರು; ಆದರೆ ಚಾವಡಿಗೆ ಬಂದಬಳಿಕ ಅವರ ಮನಸ್ಸಿನಲ್ಲಿ ಬಹು ದೊಡ್ಡ ಕ್ರಾಂತಿಯುತ್ಪನ್ನವಾಯಿತು. ಸೂರ್ಯನ ಸ್ವಚ್ಛಪ್ರಕಾಶದಲ್ಲಿ ಕೃಷ್ಣಾವಧೂತರ ದೈವೀ ತೇಜಸ್ಸಿನ ಮುಖಮುದ್ರೆಯನ್ನು ನೋಡಿದ ಕೂಡಲೆ ಗ್ರಾಮಸ್ಥರು ಬೆದರಿದರು. ಅವರು ತಮ್ಮ ತಮ್ಮೊಳಗೆ ಒಬ್ಬರ ಮುಖವನ್ನು ಒಬ್ಬರು ನೋಡತೊಡಗಿದರು. ಆಗ ಅವರಿಗೆ ಮಿತಿಮೀರಿದ ಪಶ್ಚಾತ್ತಾಪವಾಯಿತು. "ನಿನ್ನೆ ರಾತ್ರಿಯಲ್ಲಿ ನಾವು ಪ್ರತಿಬಂಧಿಸಿದ ಈ ಮೂವರು ನಿಜವಾಗಿಯೂ ದುರ್ಜನರಾಗಿರದೆ ಯಾರೋ ಮಹಾತ್ಮರಿರಬೇಕು; ಇಂಥವರಿಗೆ ನಾವು ಎಷ್ಟು ಹಿಂಸೆ ಕೊಟ್ಟೆವಲ್ಲಾ. ಹಾಯ್! ಹಾಯ್! ಇವರು ನಮಗೆ ಎಲ್ಲಿ ಶಾಪವ ಕೊಡುವರೋ" ಎಂಬ ವಿಚಾರಗಳು ಅವರ ಮನಸ್ಸಿನಲ್ಲಿ ಉತ್ಪನ್ನವಾಗಲು, ಅವರ ದೇಹದಲ್ಲಿ ಚಳಿಬಂದಹಾಗಾಯಿತು. ಬಳಿಕ ಅವರೆಲ್ಲರೂ ಒಮ್ಮನಸ್ಸಿನಿಂದ ಅವಧೂತರ ಚರಣಕಮಲಗಳಿಗೆರಗಿ ಕೃತಾಪರಾಧದ ಬಗ್ಗೆ ಕ್ಷಮೆಯನ್ನು ಬೇಡಿಕೊಂಡರು. ಮತ್ತು ಆ ತ್ರಿವರ್ಗರ ಬಂಧನಗಳನ್ನು ಹರಿದೊಗೆದು ಮನೆಗೆ ಬರಬೇಕೆಂದು ಪ್ರಾರ್ಥಿಸಿದರು. ಸದಾನಂದ ಮೂರ್ತಿಗಳಾದ ಅವಧೂತರು ಬಂಧನವು ತೊಲಗಿತೆಂದು ಉಲ್ಲಾಸವನ್ನು ತಳೆಯದೆ, ಯಥಾಪ್ರಕಾರವಾಗಿ ತಮ್ಮ ನಿಜಾನಂದದಲ್ಲಿಯೇ ಇದ್ದುಕೊಂಡು ಗ್ರಾಮಸ್ಥರ ಪ್ರಾರ್ಥನೆಯಂತೆ

ಅನರ ಮನೆಗೆ ಹೊರಟಳು. ಶಿಷ್ಯರೂ ನಡೆದರು. ನಿನ್ನೆ ಸಾಯಂಕಾಲದಲ್ಲಿ ಇಷ್ಟೆಲ್ಲ ಅನರ್ಥಕ್ಕೆ ಕಾರಣಳಾದ ತರುಣಿಯೂ ಬಂದು ಅವಧೂತರ ಕ್ಷಮೆಯನ್ನು ಬೇಡಿಕೊಂಡಳು. ಅಂದು ಗ್ರಾಮಸ್ಥರ ಮನೆಯಲ್ಲಿ ಅವಧೂತರವರ ಪಾದಪೂಜಾದಿ ಸಂಭ್ರಮಗಳು ನಡೆದವು. ಪಂಚಪಕ್ವಾನ್ನಗಳಿಂದ ಬ್ರಾಹ್ಮಣ ಸಂತರ್ಪಣೆಯು ಸಾಂಗವಾಯಿತು. ಇದೆಲ್ಲ ಪ್ರಕಾರವನ್ನು ನೋಡಿ ಅವಧೂತರವರ ಶಿಷ್ಯರಿಗೆ ಆಶ್ಚರ್ಯವಾಯಿತು. ಮಹಾತ್ಮರು ಮನಸ್ಸಿಗೆ ಬಂದರೆ ಪ್ರಖರವಾದ ತಮ್ಮ ದೈವೀತೇಜಸ್ಸಿನಿಂದ ಬೇಕಾದ ಕಾರ್ಯವನ್ನು ಮಾಡುವರೆಂಬ ವಿಚಾರವು ಅವರಲ್ಲಿ ಹುಟ್ಟಿತು. ಶಿಷ್ಯರೂ ಸುಗ್ರಾಸಭೋಜನದಿಂದ ತೃಪ್ತರಾದರು. ಬಳಿಕ ಗ್ರಾಮಸ್ಥರಿಗೆ ತಮ್ಮ ಮನೆಗೆ ಬಂದಿರುವ ಈ ಅವಧೂತರು ಕರವೀರಕ್ಷೇತ್ರವಾಸಿಗಳೂ, ಸುಪ್ರಸಿದ್ಧ ಸಾಧುಗಳೂ ಆದ ಕೃಷ್ಣಾವಧೂತರೆಂದು ಗೊತ್ತಾಗಲು, ಅವರ ಸಂತೋಷಕ್ಕೆ ಮಿತಿಯಿಲ್ಲದೆ ಹೋಯಿತು. ಅವರು ಬಹಳ ಪ್ರೇಮದಿಂದ ೨/೩ದಿನಗಳ ವರೆಗೆ ಅವಧೂತರನ್ನು ಬಹು ಆಗ್ರಹಮಾಡಿ ಇಟ್ಟುಕೊಂಡರು. ಶಿಷ್ಯರ ಇಚ್ಛೆಯನ್ನು ಪೂರ್ಣ ಮಾಡುವದಕ್ಕಾಗಿ ಅವಧೂತರು ನಿಂತುಕೊಂಡರು.

ಈ ಮೇರೆಗೆ ಆತಿಥ್ಯವನ್ನು ಹೊಂದಿದ ಬಳಿಕ ಅವಧೂತರು ಶಿಷ್ಯರನ್ನು ಕುರಿತು—"ತಮ್ಮಗಳಿರಾ, ಇನ್ನಾದರೂ ನಿಮ್ಮ ದೇಹಕ್ಕೆ ಸಮಾಧಾನವುಂಟಾಯಿತೋ ಇಲ್ಲವೋ? ಹೀಗೆಯೇ ನೀವು ಈ ವಿಷಯಗಳಿಂದ ಎಷ್ಟು ದಿವಸಗಳವರೆಗೆ ಸಮಾಧಾನ ಹೊಂದುತ್ತ ಹೋಗುವಿರಿ? ವಿಷಯಗಳಿಂದಲೇ ನಿಮಗೆ ಸಮಾಧಾನವಾಗುತ್ತಿದ್ದರೆ ನಿಮ್ಮ ನಿಮ್ಮ ಮನೆಯಲ್ಲಿ ಸಂಸಾರವನ್ನಾದರೂ ಮಾಡಿಕೊಂಡು ಇರಬೇಕು. ಹೀಗೆ ನಮ್ಮಂಥವರ ಬೆನ್ನಹತ್ತಿ ಬರುವದರಲ್ಲಿ ಪ್ರಯೋಜನವಾದರೂ ಯಾವದು? ವಿಷಯಗಳ ಮೇಲೆ ಸ್ವಲ್ಪಾದರೂ ತಿರಸ್ಕಾರವುತ್ಪನ್ನವಾದರೆ ಅಧ್ಯಾತ್ಮ ವಿಚಾರದಲ್ಲಿ ಪ್ರವೇಶಕ್ಕೆ ಆಸ್ಪದವು ಸಿಕ್ಕುವದು. ಇನ್ನುಮುಂದೆ ಮಾತ್ರ ಹೀಗೆ ಮಾಡಬೇಡಿರಿ. ಹೀಗೆ ಸಾಂಸಾರಿಕರ ಮನೆಯಲ್ಲಿ ಬಹಳದಿವಸ ಕೂತುಕೊಳ್ಳುವದು ಸಜ್ಜನರ ಧರ್ಮಕ್ಕೆ ವಿರೋಧವಾಗುತ್ತದೆ ಇದರಿಂದ ವೈರಾಗ್ಯವೃತ್ತಿಯುವರಿಗೂ ಹಾನಿಯೊದಗುವದು. ಇದಕ್ಕೊಂದು ಸಣ್ಣ ಕಥೆಯನ್ನು ಹೇಳುತ್ತೇನೆ ಕೇಳಿರಿ.—

ಸಂಸಾರದ ತಾಪತ್ರಯಗಳನ್ನು ತಾಳಲಾರದೆ ಒಬ್ಬ ಮನುಷ್ಯನು ದೇಶಾಂತರ ಹೊರಟನು. ಹೀಗೆ ಕೆಲವು ದಿವಸಗಳ ವರೆಗೆ ಅವನು ಅಲ್ಲಲ್ಲಿ ಅಲೆದಾಡುತ್ತಿರಲು ಅವನಿಗೆ ಒಬ್ಬ ಗುರುವು ಕೂಡಿದನು. ಆ ಗುರುಗಳ ಸಹವಾಸದಿಂದ ಅವನಿಗೆ ತಕ್ಕಮಟ್ಟಿಗೆ ವೈರಾಗ್ಯವು ದೃಢವಾಯಿತು. ಹೀಗೆಯೇ ಅವನು ಗುರುಸೇವೆಯಲ್ಲಿ

ನಿರತನಾಗಿದ್ದರೆ, ವೈರಾಗ್ಯಸಾಮ್ರಾಜ್ಯದ ವೈಭವವನ್ನು ಅನುಭವಿಸಿ, ಸ್ವಾನಂದಮಗ್ನನಾಗುತ್ತಿದ್ದನು. ಆದರೆ ಅವನ ಪ್ರಾಕ್ಕರ್ಮವಶದಿಂದಲೋ ಏನೋ ಅವನಿಗೆ ಒಬ್ಬ ಸಾಂಸಾರಿಕನ ಸ್ನೇಹಸಂಬಂಧವು ಬೆಳೆಯಿತು. ಮುಂದೆ ಸ್ವಲ್ಪ ದಿವಸಗಳಲ್ಲಿ ಆ ಸ್ನೇಹವು ಪರಸ್ಪರರನ್ನು ಏಕಜೀವರನ್ನಾಗಿ ಮಾಡಿಬಿಟ್ಟಿತು.

ಶಿಷ್ಯರೇ, ಮುಂದಿನ ಸಂಗತಿಯನ್ನೇನು ಹೇಳಲಿ? ವಿರಕ್ತನು ಆ ಸಾಂಸಾರಿಕನಲ್ಲಿ ಸರ್ವದಾ ಇರತೊಡಗಿದನು. ಆ ಸಾಂಸಾರಿಕನು ಸಾಮಾನ್ಯನಿದ್ದಿಲ್ಲ. ನಾಮಾಂಕಿತ ಮಾಂತ್ರಿಕನಾಗಿದ್ದನು. ಭೂತ-ಪಿಶಾಚಿಗಳ ವಶೀಕರಣವು ಅವನಲ್ಲಿ ಚನ್ನಾಗಿದ್ದಿತು; ಚಾಟ-ಮಾಟಗಳಲ್ಲಂತೂ ಪ್ರವೀಣನು. ಈ ವಿದ್ಯೆಗಳಿಂದ ಅವನಿಗೆ ಅಗಣಿತ ದ್ರವ್ಯಸಂಪಾದನವಾಗುತ್ತಿತ್ತು. ಆದರಿಂದ ಅವನ ಲೌಕಿಕವು ಹೆಚ್ಚಿ, ವಿಷಯಸುಖಲೋಲುಪತೆಯು ಅಜ್ಞರ ಬಾಯೊಳಗೆ ನೀರೊಡಿಸುವಷ್ಟು ಬೆಳೆದಿತ್ತು. ಅವನ ನಿಕಟಸಂಬಂಧದಿಂದ ವಿರಕ್ತನ ಬಾಯಲ್ಲಿ ನೀರೊಡೆಯಲಾರಂಭಿಸಿತು. ಅವನ ಗುರುಸೇವೆಯು ಕೈಬಿಟ್ಟಿತು. ಗುರುಧ್ಯಾನವು ಮಾಯವಾಯಿತು. ಅವನು ಆ ಸಾಂಸಾರಿಕನಿಗೆ ದುಂಬಾಲಬಿದ್ದು ಭೂತ-ಪಿಶಾಚಿಗಳ ವಶೀಕರಣ ಮಂತ್ರವನ್ನು ಕಲಿತುಕೊಂಡನು.

ಅನಂತರ ವಿರಕ್ತನು ಆ ಸಾಂಸಾರಿಕನನ್ನು ತ್ಯಜಿಸಿ ಸುರಹೊನ್ನಿಯೆಂಬ ಹಳ್ಳಿಯಲ್ಲಿ ವಾಸಿಸಿದನು. ಸ್ವಲ್ಪ ದಿವಸಗಳಲ್ಲಿಯೇ ಸುತ್ತಲೂ ಅವನ ಪ್ರಸಿದ್ಧಿಯಾಯಿತು. ದೆವ್ವಬಡಕರು ಅವನಿಗೆ ದುಂಬಾಲ ಬೀಳುವರು. ಕೇಳಿದಷ್ಟು ಹಣಕೊಡುವರು. ಹೀಗಾದ್ದರಿಂದ ವಿರಕ್ತನ ವಿಷಯವಾಸನೆಗೆ ಚಿಗುರೊಡೆಯಿತು. ಬರಬರುತ್ತ ಅದು ಬೆಳೆದು ದೊಡ್ಡ ಹೆಮ್ಮರವಾಯಿತು. ತನ್ನ ವಿಷಯೇಚ್ಛೆಯನ್ನು ತೃಪ್ತಿಗೊಳಿಸಲಿಕ್ಕೆ ಅವನು ಬೇಕಾದಂಥ ನೀಚಕೃತ್ಯವನ್ನಾದರೂ ಮಾಡಲು ಅಂಜದಾದನು. ತಾನು ಯಾರು, ತನ್ನ ಸ್ಥಿತಿಯು ಮೊದಲು ಹ್ಯಾಗಿತ್ತು? ಈಗ ಯಾವ ಮನೆಗೆ ಬಂದಿರುತ್ತದೆಂಬದನ್ನು ಅವನು ಪೂರಾ ಮರೆತು ಬಿಟ್ಟನು. ಎಷ್ಟು ಬಗೆಯಿಂದ ವಿಷಯಸುಖ ಅನುಭವಿಸಿದರೂ ಅವನಿಗೆ ತೃಪ್ತಿಯೇ ಇಲ್ಲದೆ ಹೋಯಿತು. ಕೊನೆಗೆ ಅವನು ಒಂದು ಭಯಂಕರ ನಿಯಮವನ್ನು ಆ ಊರ ನಿವಾಸಿಗಳಿಗೆ ತಿಳಿಸಿಬಿಟ್ಟನು. ಆ ನಿಯಮವ ಶ್ರವಣಮಾತ್ರದಿಂದ ಆ ಗ್ರಾಮವಾಸಿಗಳಿಗೆ ಸಾವಿರಾರು ಚೇಳು ಕಡಿದಷ್ಟು ಸಂತಾಪವಾಯಿತು; ಆದರೆ ಮಾಂತ್ರಿಕನಾದ ಅವನ ಮುಂದೆ ತಮ್ಮ ಆಟವೇನೂ ಸಾಗದೆಂದು ತಮ್ಮ ಸಿಟ್ಟನ್ನು ತಾವೇ ನುಂಗಿಕೊಂಡರು. ಮಾಂತ್ರಿಕನ ಈ ಹೊಸನಿಯಮವಾವುದೆಂದರೆ—ಆ ಗ್ರಾಮವಾಸಿನಿಯರಾದ ಬಾಲಿಕೆಯರು

ಯಾವ ಜಾತಿಯವರೇ ಆಗಿರಲೊಲ್ಲರೇಕೆ? ಪ್ರಥಮ ರಜೋದರ್ಶನವಾದ ಬಳಿಕ ಅವರನ್ನು ತನ್ನ ಬಳಿಗೆ ಕಳಿಸಬೇಕೆಂಬುದು. ಇದನ್ನು ಯಾರು ಪಾಲಿಸುವದಿಲ್ಲವೋ ಅವರಿಗೆ ಕಡುತರವಾದ ಶಿಕ್ಷೆಯಾಗುವದೆಂದು ಡಂಗುರುವ ಹೊಯಿಸಿದನು.

ಮಾಂತ್ರಿಕನ ಈ ಅಪಮಾನಕಾರಕವಾದ ಹಾಗು ನಿಂದ್ಯವಾದ ನಿಯಮ ವನ್ನು ಗ್ರಾಮವಾಸಿಗಳು ಪಾಲಿಸದೆ ಇರಲು ಮಾಂತ್ರಿಕನು ಕ್ರೋಧ ಸಂತಪ್ತನಾಗಿ ಪಿಶಾಚಿಗಳ ಸಹಾಯದಿಂದ ರಜೋದರ್ಶನ ಹೊಂದಿದ ಸ್ತ್ರೀಯನ್ನೂ-ಆಕೆಯ ಪತಿ ಯನ್ನೂ ಸಂಹರಿಸಹತ್ತಿದನು. ಆ ಮನೆಯವರಿಗೆ ಅನೇಕ ಬಗೆಯ ಪೀಡೆಯನ್ನುಂಟು ಮಾಡಹತ್ತಿದನು. ಹೀಗೆ ಮೂರು ನಾಲ್ಕು ಮನೆಯವರಿಗೆ ಪೆಟ್ಟು ತಗಲಲು ಸರ್ವರೂ ಅಂಜಿದರು. ಮುಂದೆ ಪ್ರತಿಯೊಬ್ಬರು ಜೀವಕ್ಕೆ ಅಂಜಿ ತಮ್ಮ ಮಕ್ಕಳ ಅಮೂಲ್ಯ ವಾದ ಪಾತಿವ್ರತ್ಯವನ್ನು ಹಾಳು ಮಾಡಿಕೊಳ್ಳ ಹತ್ತಿದರು. ಹೀಗೆ ಕೆಲವು ದಿವಸ ಗಳ ವರೆಗೆ ನಡೆಯಲು ಒಂದು ದಿನ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಈ ಪ್ರಸಂಗವು ಬಂದಿತು. ಇಂಥ ಬ್ರಾಹ್ಮಣನ ಮನೆಯಲ್ಲಿ ನಾಳೆಗೆ ನಿಷೇಕ ಸಮಾರಂಭ ಇರುವ ದೆಂಬ ವರ್ತಮಾನವನ್ನು ಕೇಳಿ ಮಾಂತ್ರಿಕನು ತನ್ನ ಪದ್ಧತಿಯಂತೆ ಬ್ರಾಹ್ಮಣನಿಗೆ ಸೇವಕರ ಕಡೆಯಿಂದ ವರದಿಯನ್ನು ಕೊಡಿಸಿದನು. ಈ ಮಾತನ್ನು ಕೇಳುತ್ತಲೇ ಬ್ರಾಹ್ಮಣನ ಜೀವವು ನೆತ್ತಿಯಿಂದ ಹೋದ ಹಾಗಾಯಿತು. ಅವನು ದೀರ್ಘಚಿಂ ತೆಗೆ ಒಳಗಾದನು. ಅಂದು ಆ ಮನೆಯೊಳಗಿನ ಯಾರಿಗೂ ಉಲ್ಲಾಸವಿಲ್ಲದೆ ಹೋಯಿತು. ಕರ್ಮ ಧರ್ಮ ಸಂಯೋಗದಿಂದ ಆ ದಿವಸ ಆ ಬ್ರಾಹ್ಮಣನ ಮನೆಗೆ ದೂರ ದೇಶದ ಒಬ್ಬ ಅತಿಥಿಯು ಬಂದಿದ್ದನು. ಆತನಿಗೆ ಆ ಮನೆಯ ಜನರ ಶೋಚ ನೀಯ ಸ್ಥಿತಿಯನ್ನು ನೋಡಿ ಆಶ್ಚರ್ಯವಾಯಿತು. ಅವರು ಹೀಗೇಕೆ ಮಾಡುವ ರೆಂಬ ಇಂಗಿತವು ಅವನಿಗೆ ತಿಳಿಯದೆ ಹೋಯಿತು. ಬಳಿಕ ಅವನು ಬಾಯಿಬಿಚ್ಚಿ ಆ ಮನೆಯ ಯಜಮಾನನನ್ನು ಕೇಳಿದನು. ಅದಕ್ಕೆ ಆ ಬ್ರಾಹ್ಮಣನು ಒತ್ತಿ ಬರುವ ದುಃಖವನ್ನು ಸಹಿಸಿಕೊಳ್ಳುತ್ತ:—"ಅತಿಥಿಶ್ರೇಷ್ಠನೇ, ಮನೆಯಲ್ಲಿ ಮಂಗಲ ಕಾರ್ಯವು ನಡೆದಿರಲು, ನಾವು ದುಃಖಿಸುತ್ತಿರುವದನ್ನು ನೋಡಿ ನಿಮಗೆ ಆಶ್ಚರ್ಯ ವಾಗಿರಬಹುದು. ಆದರೆ ಅದರ ನಿಜವಾದ ಕಾರಣವು ಹೀಗಿರುವದು ಎಂದು ನುಡಿದು ಮಾಂತ್ರಿಕನ ದುರ್ಬುದ್ಧಿಯನ್ನು ಸಮಗ್ರವಾಗಿ ಹೇಳಿದನು. ಅದನ್ನು ಕೇಳಿ ಅತಿ ಥಿಗೂ ಪರಮ ಸಂತಾಪವಾಯಿತು. ಆಗ ಅವನು ಬ್ರಾಹ್ಮಣನನ್ನು ಕುರಿತು ನುಡಿದ ನೇನಂದರೆ:—ಬ್ರಾಹ್ಮಣನೇ, ಏನೂ ಚಿಂತೆ ಮಾಡಬೇಡ; ನಿಮ್ಮ ಮನೆತನದ ಪವಿತ್ರ ತೆಯನ್ನು ಕಾಯಲಿಕ್ಕೆ ನಮ್ಮ ವಾಯುಕುವರನು ಸಮರ್ಥನಿರುವನು. ನೀನು

ಮಾಂತ್ರಿಕನ ಅಂಜಿಕೆಯನ್ನು ಬಿಟ್ಟು ಸೊಸೆಗೆ ವಿಧಿಪೂರ್ವಕವಾಗಿ ಗರ್ಭಾಧಾನವನ್ನು ಮಾಡಿಸು.''

ಈ ಮೇರೆಗೆ ಅತಿಥಿಯು ಅಭಯವ ಕೊಡಲು ಬ್ರಾಹ್ಮಣನು ಸಂತೋಷ ಹೊಂದಿ ಬ್ರಾಹ್ಮಣ ಸಂತರ್ಪಣಾದಿ ಕಾರ್ಯಗಳನ್ನು ಯಥಾ ಸಾಂಗವಾಗಿ ಜರುಗಿಸಿದನು. ಬಳಿಕ ರಾತ್ರಿಯಾಗಲು ಅತಿಥಿಯು ಗರ್ಭಾಧಾನ ಸಂಸ್ಕಾರ ಹೊಂದುವ ಆ ದಂಪತಿಗಳನ್ನು ಶಿಂಗರಿಸಿದ ಒಂದು ಕೋಣೆಯಲ್ಲಿ ಕಳುಹಿ ತಾನು ಬಾಗಿಲ ಬಳಿಯಲ್ಲಿ ತನ್ನ ಉಪಾಸ್ಯ ದೈವತವಾದ ಶ್ರೀ ಮಾರುತಿಯನ್ನು ಆವಾಹಿಸಿ ಧ್ಯಾನಸ್ಥನಾಗಿ ಕುಳಿತು ಬಿಟ್ಟನು. ಅತಿಥಿಯು ಕ್ರಿಯಾಸಿದ್ಧಿಯುಳ್ಳವನೂ, ಮಾರುತಿಯ ನಿಸ್ಸೀಮ ಉಪಾಸಕನೂ ಆಗಿದ್ದನು. ಮಧ್ಯ ರಾತ್ರಿಯು ಮೀರುತ್ತ ಬಂದರೂ ತನ್ನ ಬಳಿಗೆ ಯಾರೂ ಸುಳಿಯದ್ದರಿಂದ ಅವನು ವಿಲಕ್ಷಣವಾಗಿ ಸಂತಾಪಗೊಂಡನು. ಬ್ರಾಹ್ಮಣನಿಗೆ ತನ್ನ ಕರಾಮತಿಯನ್ನು ತೋರಿಸಬೇಕೆಂದು ತನ್ನ ಬಳಿಯಲ್ಲಿದ್ದ ಭೂತಗಳಲ್ಲಿ ಒಂದೊಂದನ್ನೇ ಬಿಡಹತ್ತಿದನು. ಆ ಭೂತಗಳು ಬ್ರಾಹ್ಮಣನ ಮನೆಯ ವರೆಗೆ ಬಂದು ಬಾಗಿಲಲ್ಲಿ ಪ್ರಖರ ತೇಜಸ್ಸಿನ ಶ್ರೀಮಾರುತೀ ಭಕ್ತನನ್ನು ನೋಡಿ ಅಂಜಿ ತಿರುಗಿ ಹೋದವು. ಇಷ್ಟೇ ಅಲ್ಲ; ಆ ಬ್ರಾಹ್ಮಣನ ಮಗ ಹಾಗು ಸೊಸೆಯನ್ನು ನಾಶಗೊಳಿಸಲಿಕ್ಕೆ ಯಾವ ಭಯಂಕರ ಪದಾರ್ಥಗಳನ್ನು ತಕ್ಕೊಂಡು ಬಂದಿದ್ದವೋ ಆ ಪದಾರ್ಥಗಳನ್ನು ತಿರುಗಿ ತಕ್ಕೊಂಡು ಹೋಗಿ ಮಾಂತ್ರಿಕನ ಮೈಮೇಲೆ ಚಲ್ಲಿಬಿಟ್ಟವು. ಮಾಂತ್ರಿಕನು ಆಕ್ಷಣದಲ್ಲಿ ಸುಟ್ಟು ಭಸ್ಮೀ ಭೂತನಾದನು.

ಮರುದಿನ ಬ್ರಾಹ್ಮಣನು ಎದ್ದು ತನ್ನ ಮಗ ಹಾಗು ಸೊಸೆ ಇಬ್ಬರೂ ಸುರಕ್ಷಿತವಾಗಿಇದ್ದದ್ದನ್ನು ನೋಡಿ ತುಂಬಾ ಸಂತೋಷಪಟ್ಟು ಅತಿಥಿಯ ಉಪಕಾರವನ್ನು ಬಹಳವಾಗಿ ಸ್ಮರಿಸಿದನು. ಅಷ್ಟರಲ್ಲಿ ಮಾಂತ್ರಿಕನು ಸತ್ತುಹೋದ ಸುದ್ದಿಯು ಊರ ತುಂಬಹಬ್ಬಿತು. ಜನರೆಲ್ಲರೂ ಸಂತೋಷದಿಂದ ಬ್ರಾಹ್ಮಣನ ಮನೆಗೆ ಬಂದು, ಅತಿಥಿಯನ್ನು ಬಹು ವಿಧವಾಗಿ ಕೊಂಡಾಡಿ, ಅವನಿಗೆ ವಿಪುಲ ಧನವನ್ನು ಕೊಡಹೋದರು. ಆದರೆ ನಿಸ್ಪೃಹಿಯೂ, ಪರೋಪಕಾರರತನೂ ಆದ, ಆ ಮಾರುತೀಭಕ್ತನು ಒಂದು ಕಪರ್ದಿಕವನ್ನು ಕೂಡಾ ತಕ್ಕೊಳ್ಳದೆ ತನ್ನ ಕೆಲಸಕ್ಕಾಗಿ ಮುಂದೆ ದಾರೀ ಹಿಡಿದನು. ಹೇಳತಕ್ಕ ತಾತ್ಪರ್ಯವಿಷ್ಟೇ: ಯಾವ ಮನುಷ್ಯನು ಮೊದಲು ವಿರಕ್ತನಾಗಿ ಗುರುಸೇವೆಯಲ್ಲಿ ನಿಂತಿದ್ದನೋ, ಕಡೆಗೆ ಅವನು ಸಾಂಸಾರಿಕರ -ವಿಷಯಲಂಪಟಿಗಳ ಸಂಸರ್ಗದಿಂದ ಇಷ್ಟು ನೀಚನಾದನು. ವಿಷಯಗಳ ಮೋಹವು ಮೊದಲೇ ಬಹು ತೀವ್ರವಾಗಿ ಮನುಷ್ಯನ ಮೇಲೆ ತನ್ನ ಅಧಿಕಾರ ಕೂಡ್ರಿಸುವಂಥಾದ್ದಿದ್ದು, ಅದಕ್ಕೆ

ನೆರವಾಗಿ ವಿಷಯಲಂಪಟಿಗಳ ಸ್ನೇಹವು ಕೂಡಿದರಂತೂ ಹುಣ್ಣಿನ ಮೇಲೆ ಇಪ್ಪಿ ಕುಳಿತಂತಾಗುವದು. ಆ ಮೇಲೆ ಭ್ರಷ್ಟವಾಗುವದಕ್ಕೆ ಅವಕಾಶವೇ ಉಳಿಯುವ ದಿಲ್ಲ. ಶಿಷ್ಯರಿರಾ, ಈ ಮಾತನ್ನು ಚನ್ನಾಗಿ ಧ್ಯಾನದಲ್ಲಿಡಿರಿ. ಜ್ಞಾನಿಗಳಿಗೆ ಮಾತ್ರ ವಿಷಯಗಳಿಂದಾಗಲಿ, ವಿಷಯಲಂಪಟಿಗಳಿಂದಾಗಲಿ ಯಾವ ಬಗೆಯ ತೊಂದರೆಯೂ ಉಂಟಾಗಲಾರದು. ಆದರೆ ಸಾಧಕರಾದವರು ಬಹು ಎಚ್ಚರದಿಂದ ನಡೆಯಬೇಕು. ಒಮ್ಮೆ ಅವರು ಕಾಲು ಜಾರಿ ವಿಷಯಸಾಗರದಲ್ಲಿ ಕಡಕೊಂಡು ಬಿದ್ದರೆಂದರೆ, ತೀರಿತು. ಅವರ ಅಧಃಪತನವೇ ಆಗುವದು. ಆದ್ದರಿಂದ ಸಾಧಕರಾದ ವಿರಕ್ತರಿಗೆ ಸಾಂಸಾರಿಕರ ಸಂಗವು ಮಾರಕವೆಂದು ತಿಳಿಯಬೇಕು.

ಈ ಮೇರೆಗೆ ಕೃಷ್ಣಾವಧೂತರು ತಮ್ಮ ಶಿಷ್ಯರಿಗೆ ಸದುಪದೇಶ ಮಾಡಿ ಅವ ರೊಡನೆ ಅಲ್ಲಿಂದ ಹೊರಟರು. ತಾವು ಊರ ಬಿಟ್ಟಂದಿನಿಂದ ಇಲ್ಲಿಯವರೆಗೆ ಹಲವು ಸಂಗತಿಗಳು ಅನುಭವಕ್ಕೆ ಬಂದದ್ದರಿಂದ ಆ ಶಿಷ್ಯರಾದರೂ ಎಚ್ಚತ್ತು ದೇಹ ಸುಖವನ್ನು ತೊರೆದರು. ಹೀಗೆ ಅವರು ಪ್ರಯಾಣ ಮಾಡುತ್ತ ಮಾಡುತ್ತ ವಿರ ಜಿಗೆ ಬಂದು ಮುಟ್ಟಿದರು.

# ೫ನೆಯ ಪ್ರಕರಣ.

## ಹಲವು ಅಮಾನುಷ ಲೀಲೆಗಳು.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಕೃಷ್ಣಾವಧೂತರು ತಾರಾಬಾಯಿಯ ಅಹಂಭಾವವನ್ನು ಬಿಡಿಸುವದಕ್ಕಾಗಿಯೂ, ಶಿಷ್ಯರಿಗೆ ಅನುಭವವನ್ನು ತಂದುಕೊಡುವದಕ್ಕಾಗಿಯೂ, ಬೆಳೆಸಿದ ಪಯಣವನ್ನು ಮುಗಿಸಿ ಮಿರಜಿಗೆ ಬಂದ ಬಳಿಕ ಅಲ್ಲಿ ಕೆಲವು ದಿನಗಳವರೆಗೆ ಇದ್ದು, ಕರವೀರ ಕ್ಷೇತ್ರಕ್ಕೆ ತೆರಳಿದರು. ತಾಯಿಯನ್ನು ಕಳೆದುಕೊಂಡ ಎಳೆಗರು ವು ಒಳಲುತ್ತಿರುವಂತೆ ಒಂದೇಸವನೆ ಹಂಬಲಿಸುತ್ತಲಿದ್ದ ತಾರಾಬಾಯಿಗೆ ಆಗ ಆದ ಆನಂದವನ್ನು ಬಣ್ಣಿಸಲಳವಲ್ಲ. ದಾರಿದ್ರ್ಯದಿಂದ ಬಳಲುವವನಿಗೆ ಅಪಾರ ನಿಧಿಯು ಸಿಕ್ಕಂತೆಯೂ, ಮರಣೋನ್ಮುಖನಾದವನ ಮುಖದಲ್ಲಿ ಅಕಸ್ಮಾತ್ತಾಗಿ ಅಮೃತಬಿಂದುವು ಬಿದ್ದಂತೆಯೂ ಆಯಿತೆಂದು ಹೇಳಬಹುದು. ಅವಳು ಅತ್ಯಂತ ಭಕ್ತಿಯಿಂದ ಅವಧೂತರವರ ಚರಣಕಮಲಗಳ ಮೇಲೆ ಮಸ್ತಕವನ್ನಿಟ್ಟು, ಆನಂದಾಶ್ರುಗಳಿಂದ ಆ ಧೂಲಿಪೂರ್ಣವಾದ ಪಾದಗಳನ್ನು ತೊಳೆದಳು. ಆಕೆಯ ನಿಶ್ಚಲಭಕ್ತಿಯನ್ನು ಬಲ್ಲವರಾದ ಆ ಮಹಾತ್ಮರು ಸಮಯೋಚಿತ ವಚನಗಳಿಂದ ಆಕೆಯನ್ನು ಸಂತೈಸಿದರು; ಮತ್ತು ಎಂದಿನಂತೆ ಅವಳಲ್ಲಿ ಆತಿಥ್ಯವನ್ನು ಕೈಕೊಳ್ಳುತ್ತ ವಾಸಮಾಡಿದರು.

ಹೀಗಿರಲು, ಒಂದು ದಿನ ಒಬ್ಬ ಸುಮಂಗಲೆಯು ದರ್ಶನಕ್ಕಾಗಿ ಬಂದಳು. ಅವಳು ನಮಸ್ಕರಿಸುವಷ್ಟರಲ್ಲಿ ಅವಧೂತರು ಒಮ್ಮೆಲೆ—"ನೀನು ಈಗ ಸುಮಂಗಲೆಯಿರುವದಿಲ್ಲ; ನಿನ್ನ ಗಂಡನು ಪರಂಧಾಮಕ್ಕೆ ತೆರಳಿದ್ದರಿಂದ ನೀನು ನಿನ್ನ ಮುಖವನ್ನು ನನಗೆ ತೋರಿಸಬೇಡ; ನಡೆ, ಬೇಗ ಮನೆಗೆ ಹೋಗು." ಎಂದು ನುಡಿದರು. ಅವಧೂತರ ಈ ವಚನವನ್ನು ಕೇಳಿ, ಅದೇ ಮನೆಯಿಂದ ಬಂದ ಆ ಸ್ತ್ರೀಗೆ ಪರಮಾಶ್ಚರ್ಯವಾಯಿತು. ಅವಳು ಮನೆಯಿಂದ ಹೊರಡುವಾಗ ಆಕೆಯ ಗಂಡನು ಮನೆತನದ ಲೆಖ್ಖಪತ್ರಗಳನ್ನು ಬರೆಯುತ್ತ ಕುಳಿತುಕೊಂಡಿದ್ದನು. ಜಡ್ಡಿಲ್ಲ; ಜಾಪತ್ರಿಯಿಲ್ಲ; ಜ್ವರವಿಲ್ಲ; ಛಳಿಯಿಲ್ಲ; ಸದೃಢನಾಗಿದ್ದ ಗಂಡನು ಇಷ್ಟರಲ್ಲಿಯೇ ಸತ್ತನೆಂಬದು ಅವಳಿಗೆ ಹುಡುಗಾಟಿಕೆಯಾಗಿ ತೋರಿತು. ಆದರೂ ಅವಳು ಅವ

ಧೂತರ ಗದ್ದರಿಕೆಗೆ ಅಂಜಿ ಸುಮ್ಮನೆ ಮನೆಗೆ ಬಂದಳು. ಅವಳು ಮನೆಯ ಸಮೀಪಕ್ಕೆ ಬರುವಷ್ಟರಲ್ಲಿ ಮನೆಯಲ್ಲಿ ಅಳುವ ಸ್ವರವು ಕೇಳಬಂದಿತು. ಆಗ ಅವಳ ಎದೆಯು ಧಸ್ಸೆಂದಿತು; ಕೈ-ಕಾಲುಗಳು ತಣ್ಣಗಾದವು; ಕಣ್ಣುಗಳು ಅಶ್ರುಪೂರ್ಣವಾದವು; ಅವಳು ಮುಂದಕ್ಕೆ ಹೆಜ್ಜೆಯನ್ನಿಕ್ಕದೆ ಅಲ್ಲಿಯೇ ಕುಸಿಕುಳಿತಳು. ಅಷ್ಟರಲ್ಲಿ ಅವರ ಮನೆಯಿಂದ ಬಂದ ಬೇರೊಬ್ಬ ಗೃಹಸ್ಥನು "ನಿಮ್ಮ ಯಜಮಾನರು ಏನೂ ಬೇನೆಯಿಲ್ಲದೆ ಅಕಸ್ಮಾತ್ತಾಗಿ ನಿಶ್ಚೇಷ್ಟಿತರಾಗಿರುವರು. ನಾನು ವೈದ್ಯರನ್ನು ಕರೆತರುವೆನು, ನೀವು ಬೇಗನೆ ಒಳಗೆ ನಡೆಯಿರಿ" ಎಂದು ಹೇಳಿ ಭರದಿಂದ ಸಾಗಿದನು. ಆಗಂತೂ ಕೇಳುವದೇನು? ಆ ಸ್ತ್ರೀಯು ಎದೆಬಡಕೊಳ್ಳುತ್ತ ಒಳಗೆ ಹೋಗಿ ನೋಡಲು, ಗಂಡನ ಕಥೆ ಮುಗಿದು ಹೋಗಿತ್ತು. ಅವಳು ತನ್ನ ದುರ್ದೈವವನ್ನು ಹಳಿದುಕೊಳ್ಳಲಾರಂಭಿಸಿದಳು. ಮುಂದಿನ ಕ್ರಿಯೆಗಳೆಲ್ಲವೂ ನೆರವೇರಿದವು. ಮುಂದೆ ಕೆಲವು ದಿವಸಗಳು ಕ್ರಮಿಸಲು ಕ್ರಮೇಣ ಗಂಡಸತ್ತ ದುಃಖವು ಮರೆತು ಹೋಯಿತು. ಒಂದು ದಿನ ಆ ಸ್ತ್ರೀಯು ಕೆಲಸವಿಲ್ಲದೆ ಕುಳಿತುಕೊಂಡಿರಲು, ಅವಧೂತರ ಸ್ಮರಣೆಯಾಗಿ ಅವರ ಅಪರೋಕ್ಷಜ್ಞಾನದ ವಿಷಯವಾಗಿ ಅವಳಿಗೆ ಕೌತುಕವಾಯಿತು. ಆ ಕೌತುಕದ ಜೊತೆಗೆ ಅವಳಲ್ಲಿ ಆ ಮಹಾತ್ಮರ ವಿಷಯವಾಗಿ ಭಕ್ತಿಯೂ ಉತ್ಪನ್ನವಾಯಿತು. ಆಗ ಅವಳು ಅವಧೂತರ ಬಳಿಗೆ ಹೋಗಿ ಪೊಡಮಟ್ಟಳು. ಬಹಳ ದಿವಸಗಳ ಮೇಲೆ ಬಂದ ಆ ಸ್ತ್ರೀಯನ್ನು ನೋಡಿ ಆ ಮಹಾತ್ಮರು ನುಡಿದರೇನಂದರೆ—ತಾಯಿ, ಪ್ರಾಣಿಗಳಿಗೆ ಭೋಗದಲ್ಲಿದ್ದದ್ದು ಬಿಡುವದಿಲ್ಲ. ಈಶ್ವರನು ಇಟ್ಟ ಸ್ಥಿತಿಯಲ್ಲಿ ಸಂತೋಷದಿಂದಿರುವದೇ ಸಾಧುಧರ್ಮವು; ಯಾವದೂ ಶಾಶ್ವತವಲ್ಲದ್ದರಿಂದ ಸತ್ತವರ ವಿಷಯದಲ್ಲಿ ಹಳಹಳಿಸುವದು ಯೋಗ್ಯವಾಗದು. ಆದ್ದರಿಂದ ನೀನು ಗಂಡನ ವಿಯೋಗ ದುಃಖವನ್ನು ಮರೆತು ಭಗವತ್ ಸೇವೆಯಲ್ಲಿ ಕಾಲಕ್ರಮಣಮಾಡು. ಈ ರೀತಿಯಾಗಿ ಬೋಧಿಸಲು, ಆ ಸ್ತ್ರೀಯು ಸಮಾಧಾನವನ್ನು ಹೊಂದಿ ಮನೆಗೆ ಹೋಗಿ ಅವಧೂತರಲ್ಲಿ ಪರಮ ವಿಶ್ವಾಸವನ್ನು ತಳೆದು ಜನ್ಮಸಾರ್ಥಕ್ಯವನ್ನು ಮಾಡಿಕೊಂಡಳು.

ಈ ಬಗೆಯಾಗಿ ಆ ಮಹಾತ್ಮರ ದೈವೀ ಲೀಲೆಗಳು ಜನರಲ್ಲಿ ಸದ್ಭಾವನೆಯನ್ನು ಹುಟ್ಟಿಸುತ್ತಿರಲು, ಕರವೀರಸ್ಥನಾದ ಒಬ್ಬ ಗೃಹಸ್ಥನು ಪ್ರತಿದಿನದಲ್ಲೂ ಅವಧೂತರವರ ದರುಶನಕ್ಕೆ ಬರುತ್ತಿದ್ದನು. ಹೀಗೆ ನಿಯಮದಿಂದ ನಡೆಯುವ ಆತನನ್ನು ನೋಡಿ ಅವಧೂತರು ಸಂತೋಷಪಡುತ್ತಿದ್ದರು. ಸಣ್ಣ ಕೆಲಸವೇ ಆಗಲಿ, ದೊಡ್ಡ ಕೆಲಸವೇ ಆಗಲಿ ಅದರಲ್ಲಿ ನಿಯಮಿತತನವನ್ನು ಕಾಯ್ದುಕೊಳ್ಳು

ವದು ಕಠಿಣವಿರುತ್ತದೆ; ಮತ್ತು ಏನಾದರೂ ಮಹತ್ವವಿದ್ದರೆ ಈ ನಿಯಮಿತತನದಲ್ಲಿಯೇ ಇರುತ್ತದೆ. ಅವ್ಯವಸ್ಥಿತವಾಗಿ ಯಜ್ಞಯಾಗಾದಿಗಳನ್ನು ಮಾಡಿದರೂ ಪ್ರಯೋಜನವಾಗದು. ಆದರೆ ಒಳ್ಳೇ ನಿಯಮಬದ್ಧವಾಗಿ ಒಂದು ನಮಸ್ಕಾರ ಹಾಕುವದನ್ನೇ ಆಗಲೊಲ್ಲದೇಕೆ ಪಾಲಿಸಿದರೆ ಅದರಿಂದ ಮನುಷ್ಯನ ಕೋಟಿ ಕಲ್ಯಾಣವಾಗುವದು. ಈ ನಿಯಮಪಾಲನಕ್ಕೆ ಏಕನಿಷ್ಠೆಯೆನ್ನುವರು. ಇದಕ್ಕೇ ದೇವರಾಗಲಿ, ಸಜ್ಜನರಾಗಲಿ ಒಲಿಯುವರು. ಮನುಷ್ಯರಲ್ಲಿ ಕ್ರಿಯಾಸಿದ್ಧಿಯನ್ನುಂಟುಮಾಡಿದರೆ ಈ ನಿಯಮಪಾಲನೇ ಮಾಡುವದು; ಈ ನಿಯಮಪಾಲನದ ಅರ್ಥಾತ್ ಏಕನಿಷ್ಠೆಯ ಮಹತ್ವವು ಈ ರೀತಿಯಾಗಿದ್ದು, ಅದನ್ನು ಪಾಲಿಸುವದು ಚಂಚಲ ಸ್ವಭಾವದ ನಮ್ಮಿಂದ ಆಗದ್ದಕ್ಕೆ ನಾವು ದೇವರ ಅಥವಾ ಸಜ್ಜನರ ಸಂತೋಷಕ್ಕೆ ಕಾರಣರಾಗದೆ ಹತಾಶರಾಗುತ್ತೇವೆ; ಆದರೆ ಪ್ರಸ್ತುತ ಗೃಹಸ್ಥನು ಒಳ್ಳೇ ನಿಷ್ಠೆಯುಳ್ಳವನಾಗಿದ್ದನು. ಅವನು ಸರಕಾರೀ ಕಚೇರಿಯಲ್ಲಿ ಗುಮಾಸ್ತನಾಗಿದ್ದನು. ಅವನು ತನ್ನ ಕೆಲಸವನ್ನು ತೀರಿಸಿಕೊಂಡು ಸಂಧ್ಯಾಕಾಲದ ಆರು ಗಂಟೆಗೆ ತಪ್ಪದೆ ಅವಧೂತರ ದರ್ಶನಕ್ಕೆ ಬರುತ್ತಿದ್ದನು. ಎಷ್ಟು ವಿಘ್ನಗಳು ಬಂದರೂ ಅವನು ಈ ನಿಯಮವನ್ನು ತಪ್ಪಿಸಲಿಲ್ಲ. ಸಾಂಸಾರಿಕರಿಗೆ ಸಂಸಾರದಲ್ಲಿ ಅನೇಕ ತಾಪತ್ರಯಗಳಿರುವವೆಂಬದನ್ನು ಬರೆದು ತೋರಿಸುವ ಕಾರಣವಿಲ್ಲ. ಇಂಥ ತಾಪತ್ರಯಗಳು ಮೇಲಿಂದ ಮೇಲೆ ಒದಗುತ್ತಿದ್ದರೂ ಆ ಗುಮಾಸ್ತನು ಅವುಗಳ ಕಡೆಗೆ ಲಕ್ಷ್ಯಗೊಡದೆ ಒಂದೇ ನಿಷ್ಠೆಯಿಂದ ತನ್ನ ಕ್ರಮವನ್ನು ನಡಿಸಿದನು. ಅವನ ಈ ನಿಷ್ಠೆಗೆ ಏನಾದರೂ ಪ್ರತಿಫಲಕೊಡಬೇಕೆಂಬ ಇಚ್ಛೆಯು ಅವಧೂತರಲ್ಲಿ ಸ್ವಾಭಾವಿಕವಾಗಿ ಉತ್ಪನ್ನವಾಯಿತು. ದೊಡ್ಡವರಿಗೆ ಇಚ್ಛೆಯಾಗುವದೊಂದೇ ತಡ; ಕಾರ್ಯವು ಆ ಕ್ಷಣದಲ್ಲಿ ಜರುಗಿ ಹೋಗುವದು. ಅವಧೂತರಲ್ಲಿ ಹೀಗೆ ಅಪೇಕ್ಷೆ ಉತ್ಪನ್ನವಾಗುವದಕ್ಕೂ ಗುಮಾಸ್ತನು ದರುಶನಕ್ಕೆ ಬರುವದಕ್ಕೂ ವೇಳೆ ಬಿದ್ದಿತು. ಕೂಡಲೆ ಅವರು ಗುಮಾಸ್ತನನ್ನು ಕುರಿತು:—"ಗುಮಾಸ್ತರೇ, ಇನ್ನು ಸುಖವಾಗಿ ಭೋಜನ ಮಾಡಿರಿ. ಲಾಡು, ಖೀರು, ಜಿಲೇಬಿಗಳನ್ನು ತಿನ್ನಿರಿ" ಎಂದು ನುಡಿದರು. ಅವಧೂತರು ಹೀಗೇಕೆ ನುಡಿಯುವರೆಂಬ ಅರ್ಥವು ಗುಮಾಸ್ತನಿಗೆ ಆಗಲಿಲ್ಲ. ಹತ್ತರ ಕುಳಿತಿದ್ದ ಬೇರೆ ಗೃಹಸ್ಥರಿಗೂ ಆಗಲಿಲ್ಲ. ಅವಧೂತರು ಮುಂದೆ ಮಾತಾಡದೆ ಸುಮ್ಮನಾದರು. ಗುಮಾಸ್ತನು ತನ್ನ ನಿಯಮಿತ ಸೇವೆಯನ್ನು ತೀರಿಸಿಕೊಂಡು ಗುರುಗಳು ಹೀಗೇಕೆ ಮಾತಾಡಿರಬಹುದೆಂದು ಯೋಚಿಸುತ್ತ ಮನೆಗೆ ಹೋದನು.

ಮರುದಿನ ಹತ್ತುಗಂಟೆಗೆ ಊಟಮಾಡಿ ಗುಮಾಸ್ತನು ನಿತ್ಯದಂತೆ ಕಚೇರಿಗೆ

ಹೋದನು. ಅವನು ತನ್ನ ಕೆಲಸಕ್ಕೆ ಪ್ರಾರಂಭಿಸಬೇಕೆನ್ನುತ್ತಿರಲು, ಅವನವರಿಷ್ಠ ಅಧಿಕಾರಿಯು ಅವನನ್ನು ಕರೆಕಳುಹಿದನು. ಗುಮಾಸ್ತನು ಅವಸರದಿಂದ ಅವನಬಳಿಗೆಹೋದನು. ಗುಮಾಸ್ತನುಬರಲು ಅಧಿಕಾರಿಯು ನಗೆಮುಖದಿಂದ—"ಏನು ಗುಮಾಸ್ತರೆ, ನಿಮ್ಮ ದೈವವು ಪ್ರಸನ್ನವಾಯಿತು. ನಿಮ್ಮಗೆ ಈಗಿದ್ದ ४೦ ರೂಪಾಯಿ ಸಂಬಳದಿಂದ ೧೦೦ ರೂ.ಸಂಬಳವುಳ್ಳ ನಮ್ಮ ಕಚೇರಿಯಲ್ಲಿರುವ ಇಂಥ ಸ್ಥಳದಮೇಲೆ ನೇಮಣೂಕ ಮಾಡಿದೆ ಎಂದು ಮೇಲಧಿಕಾರಿಗಳಿಂದ ತಾರು ಬಂದಿದೆ, ತಾರಿನಮೇಲೆ ನಮಗೆ ನಿನ್ನೆ ರಾತ್ರಿ ಹುಕುಮು ಬಂದದ್ದನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಈಗಿಂದೀಗಲೇನೀವು ನಿಮ್ಮ ಹೊಸ ಸ್ಥಳದ ಮೇಲೆ ಹಾಜರಾಗಿರಿ" ಎಂದು ನುಡಿದನು. ಅವನ ಮಾತು ಕೇಳಿ ಗುಮಾಸ್ತನಿಗಾದ ಆನಂದವನ್ನು ವರ್ಣಿಸಲಶಕ್ಯವು. ಕೂಡಲೇ ಅವನಿಗೆ ನಿನ್ನೆ ಸಾಯಂಕಾಲದಲ್ಲಿ ಅವಧೂತರು ಅಂದ ಮಾತು ನೆನಪಾಯಿತು. ಗುರುಮಹಾರಾಜರೇ, ಹೀಗೆ ತನ್ನಮೇಲೆ ಕೃಪೆಮಾಡಿದರೆಂದು ಅವನು ನಲಿದಾಡಿದನು. ಬಳಿಕಅವನು ಸಂಜೆಯುವರೆಗೆ ಕೆಲಸಮಾಡಿ ಆದಿನ ಬಹಳ ಉತ್ಸುಕತೆಯಿಂದ ಅವಧೂತರ ಸನ್ನಿಧಿಗೆ ಹೋದನು. ಅವನನ್ನು ಕಾಣುತ್ತಲೇ ಅವಧೂತರು—ಬರ್ರಿ, ಗುಮಾಸ್ತರೇ; ಅಲ್ಲ, ಅಲ್ಲ ಶಿರಸ್ತೇದಾರರೇ, ಬರ್ರಿ; ನಿಮಗೆ ನೂರುರೂಪಾಯಿ ಸಂಬಳವಾಯಿತಲ್ಲವೆ? ಎಂದು ನುಡಿದರು. ಅವಧೂತರ ಈ ಮಾತು ಕೇಳಿ ಬಳಿಯಲ್ಲಿದ್ದ ಜನರು ದಂಗುಬಡಿದು ಕುಳಿತರು. ಗುಮಾಸ್ತನು ತನಗೆ ಬಂದಿದ್ದ ತಂತೀಮೇಲಿನ ಹುಕುಮನ್ನು ಗುರುಗಳ ಮುಂದಿಟ್ಟು ಸಾಷ್ಟಾಂಗವಾಗಿ ವಂದಿಸಿದನು. ಅವನ ಬಾಯಿಯಿಂದ ಎಲ್ಲ ಸಂಗತಿಗಳನ್ನು ಕೇಳಿ ಅಲ್ಲಿದ್ದ ಜನರಿಗೆಲ್ಲ ತುಂಬಾ ಸಂತೋಷವಾಯಿತು. ಪ್ರತಿಯೊಬ್ಬನೂಅವಧೂತರ ಅದ್ಭುತಸಾಮರ್ಥ್ಯವನ್ನು ಕೊಂಡಾಡಹತ್ತಿದನು. ಗುಮಾಸ್ತನಂತೂ ಅವಧೂತರನ್ನು ತನ್ನ ಭಾಗದ ದೇವರೇ ಎಂದು ಗಟ್ಟಿಯಾಗಿ ನಂಬಿದನು. ಅವನು ಈ ನಂಬಿಗೆಯನ್ನು ಕಡೆತನಕ ಕಳೆದುಕೊಳ್ಳಡೆ. ಅವಧೂತರ ಭಕ್ತನಾಗಿ ಅಂತ್ಯದಲ್ಲಿ ಸದ್ಗತಿಯನ್ನು ಹೊಂದಿದನು.

ಈಮೇರೆಗೆಅವಧೂತರು ಭಕ್ತರಕಲ್ಯಾಣವನ್ನುಮಾಡಹತ್ತಲು ಅವರ ಪ್ರಸಿದ್ಧಿಯು ದಿನ ದಿನಕ್ಕೆಹೆಚ್ಚಚ್ಚಾಗಲಾರಂಭಿಸಿತು. ಆಗ ನಿಂದಕರ ಮುಖಭಂಗವಾದರೂ ಅವರು ತಮ್ಮ ಬಿಂಕವನ್ನುಬಿಡದೆ ಮನಸೋಕ್ತವಾಗಿಆ ಮಹಾತ್ಮರನ್ನುಆಡಿಕೊಳ್ಳುತ್ತಿದ್ದರು. ಹೀಗಿರಲು,ನಿಂದಕರಲ್ಲೊಬ್ಬನು ಅವಧೂತರವರಬಳಿಗೆ ಬಂದುನಮಸ್ಕರಿಸಿ ತನಗೆ ಸಂತತಿಯಾಗಬೇಕೆಂದು, ಪ್ರಾರ್ಥಿಸಿದನು, ಆತನು ತಮ್ಮ ಪರೀಕ್ಷಾರ್ಥವಾಗಿ ಬಂದಿರುವನೆಂದು ಆ ಮಹಾತ್ಮರು ಕಂಡುಹಿಡಿದು ಶಾಂತಸ್ವರದಿಂದ ನುಡಿದ

ರೇನಂದರೆ—"ಅಪ್ಪಾ, ನಿನಗೆ ಮಕ್ಕಳನ್ನು ಕೊಡಲಿಕ್ಕೆ ನಾನು ದೇವರಲ್ಲ; ನಿನ್ನಂತೆಯೇ ನಾನೊಬ್ಬನು ಮನುಷ್ಯನು; ನನ್ನ ಬಳಿಗೆ ಏಕೆ ಬಂದೆ? ಇನ್ನು ನೀನು 'ನಿಮ್ಮ ಬಳಿಗೆ ಎಷ್ಟೋ ಜನರು ಬರುತ್ತಿದ್ದು, ಅವರ ಮನಕಾಮನೆಗಳು ಪೂರ್ಣವಾಗಿವೆಯಲ್ಲ' ಎಂದು ಕೇಳ ಬಹುದು. ಆ ಕಾಮನೆಗಳು ಪೂರ್ಣವಾದ್ದಕ್ಕೂ ಸಂಬಂಧವು ನಮಗಿಲ್ಲ. ಜಗಚ್ಚಾಲಕ ನಾದ ಪರಮಾತ್ಮನು ಒಂದು ನಿಯಮವನ್ನು ಮಾಡಿಟ್ಟಿರುವನು. ಅದರಂತೆ ಎಲ್ಲ ಕಾರ್ಯಗಳೂ ನಡೆಯುವವು. ಯಾರಲ್ಲಿ ಸದ್ಭಾವನೆಯಿದೆಯೋ ಅವರಿಗೆ ಸತ್‌ಫಲಗಳು ದೊರೆಯುವವು. ಕನ್ನಡಿಯಲ್ಲಿ ಪಡಿನೆಳಲನ್ನು ನೋಡಲಿಚ್ಛಿಸುವವನಿಗೆ ತನ್ನ ಕೃತಿಯೇ ತನಗೆ ಕಾಣುವದೆಂಬ ಮಾತನ್ನು ಹೇಳಬೇಕಾಗುವ ಕಾರಣವಿಲ್ಲ; ಅದರಂತೆ ಈ ಸೃಷ್ಟಿ ಯಲ್ಲಾದರೂ ನಿಮ್ಮ ನಿಮ್ಮ ಕೃತಿಗಳಿಗನುಸರಿಸಿ ಈಶ್ವರನು ಫಲಗಳನ್ನು ಕೊಡು ವನು. ಸತ್‌ಕ್ರಿಯೆಯಿಲ್ಲದೆ ಸದ್ಭಾವನೆಯಿಲ್ಲದೆ ಫಲವು ಸಿಗದು. ವ್ಯವಹಾರದಲ್ಲಾ ದರೂ ಪ್ರತಿಫಲವು ದೊರೆಯಬೇಕಾದರೆ ಕಷ್ಟಪಡಬೇಕಾಗುತ್ತದೆಂಬದನ್ನು ನಿನಗೆ ತಿಳಿಸಿಕೊಡುವ ಕಾರಣವಿಲ್ಲ. ನಿನ್ನಲ್ಲಿ ಸದ್ಭಾವನೆಯಿದ್ದರೆ ನೀನು ಇಚ್ಛಿಸಿದ ಫಲವು ತಾನೇ ಸಿಗುವದು. ನಿನ್ನಲ್ಲಿ ಸದ್ಭಾವನೆಯು ಇರುವದೋ ಅಥವಾ ಇರುವದಿಲ್ಲವೋ ಎಂಬದನ್ನು ಹೇಳಲಿಕ್ಕೆ ಈಗ ಬರುವಂತೆ ಇಲ್ಲದಿದ್ದರೂ ಫಲವಾಗಲಿ ನಿಷ್ಫಲವಾ ಗಲಿ ನಿನಗೆ ಉಂಟಾದಾಗ ಅದರ ಇತ್ಯರ್ಥವು ಸ್ವಾಭಾವಿಕವಾಗಿಯೇ ಆಗುತ್ತದೆ"

ಅವಧೂತರ ಪರೀಕ್ಷಾರ್ಥವಾಗಿ ಬಂದ ಆ ನಿಂದಕನು ತೆಪ್ಪಗಾದನು. ಇಲ್ಲಿ ತನ್ನ ಆಟ ನಡೆಯುವದಿಲ್ಲೆಂದು ಅವನು ಸ್ವಸ್ಥಳಕ್ಕೆ ಹೊರಟು ಹೋದನು. ಅವನು ಹೋದ ಬಳಿಕ ಆ ಮಹಾತ್ಮರು ಸದ್ಭಕ್ತರನ್ನು ಕುರಿತು—"ಅಪ್ಪಗಳಿರಾ, ನೋಡಿ ದಿರಾ, ಜನಗಳ ಸ್ಥಿತಿಯನ್ನು! ಈಗ ಸಂತತಿಯನ್ನು ಬೇಡಬಂದ ಗೃಹಸ್ಥನು ಸಜ್ಜ ನರ ನಿಂದಕನಾಗಿರುವನು. ಇವನಿಗೆ ಸಾಧುಗಳಲ್ಲಿಯೂ, ದೇವರಲ್ಲಿಯೂ ವಿಶ್ವಾಸ ವಿರುವದಿಲ್ಲ. ನೋಡಿರಿ! ದೇವರು ಎಷ್ಟು ದಯಾಳುವಿರುವನು, ಇಂಥವರಿಗೂ ಕೂಡ ಮೋಕ್ಷವನ್ನು ಕೊಟ್ಟುಬಿಡುವನು. ನಿಂದಾರೂಪದಿಂದಾದರೂ ಇವರು ಸಜ್ಜನರಲ್ಲಿ ಮನಸ್ಸನ್ನಿಡುವದರಿಂದ ಭಗವಂತನು ಇವರ ಮೇಲೆ ಪ್ರೀತನಾಗುವನು. ಇದಕ್ಕೆ ವಿರೋಧ ಭಕ್ತಿಯೆಂದೆನ್ನುವರು. ಹಿಂದಕ್ಕೆ ಶಿಶುಪಾಲಾದಿಗಳು ಈ ವಿರೋಧ ಭಕ್ತಿ ಯಿಂದಲೇ ಭಗವಂತನಿಗೆ ಪ್ರೀತ್ಯಾಸ್ಪದರಾದರು. ಎಂದು ನುಡಿದು ಭಕ್ತಿಯ ಲಕ್ಷಣ ಗಳನ್ನು ಹೇಳಿದರು. ಅದನ್ನು ಕೇಳಿ ಅಲ್ಲಿ ಕೂಡಿದ ಭಾವಿಕರೆಲ್ಲರೂ ಸಂತೋಷ ಹೊಂದಿದರು.

ಈ ರೀತಿಯಾಗಿ ಅವಧೂತರು ಯಾವದಾದರೊಂದು ಪ್ರಸಂಗವನ್ನು ನಿಮಿತ್ತ

ಮಾಡಿ ಜನರಿಗೆ ಸದ್ಬೋಧವ ಮಾಡುತ್ತಿರಲು, ದರ್ಶನಾರ್ಥಿಗಳಾಗಿ ಬರತಕ್ಕವರ ಸಂಖ್ಯೆಯು ಹೆಚ್ಚಾಯಿತು. ಹಲವರಲ್ಲಿ ಸದ್ಭಾವನೆಯೂ ಬೆಳೆಯಿತು. ಈ ಸದ್ಭಾವನೆಯು ದ್ಯೋತಕವೋ ಎಂಬಂತೆ ಎಷ್ಟೋ ಜನರ ಮನಃಕಾಮನೆಗಳು ಪೂರ್ಣವಾಗತೊಡಗಿದವು. ರೋಗಾತುರರು ರೋಗವಿಮುಕ್ತರಾದರು. ಧನಾರ್ಥಿಗಳು ಸಧನರಾಗಿ ಬಡತನವನ್ನು ನೀಗಲಾಡಿದರು. ಎಷ್ಟೋ ಜನರು ಮಕ್ಕಳನ್ನು ಪಡೆದು ಅವಧೂತರಲ್ಲಿ ತುಂಬಾ ಅನುರಕ್ತರಾದರು. ಕೆಲ ಕಾಲ ಅವಧೂತರು ಕಾಮಧೇನು ಕಲ್ಪವೃಕ್ಷಗಳಂತೆ ಭಾವಿಕರಿಗೆ ಇಚ್ಛಿತ ಫಲಗಳನ್ನು ಕೊಟ್ಟರು. ಕಲಿಕಾಲವಿದ್ದರೂ ಜನರು ಅವಧೂತರ ಆಶ್ರಯದಿಂದ ಸುಖ ಸಂಪತ್ತನ್ನು ಹೊಂದಿ ನಲಿದಾಡತೊಡಗಿದರು.

---

## ೬ನೆಯ ಪ್ರಕರಣ.

## ಅವತಾರ ಮಾಹಾತ್ಮ್ಯ.

ಲೋಕದಲ್ಲಿ ಎಷ್ಟೋ ಜನ ಸತ್ಪುರುಷರು ಅವತರಿಸುವರು. ಅವರೆಲ್ಲರೂ ಜನರಲ್ಲಿ ಸದ್ಧರ್ಮ, ಆಸ್ತಿಕ ಭಾವನೆ, ಸದಾಚಾರ, ವಿವೇಕ ಮೊದಲಾದವುಗಳನ್ನು ಹುಟ್ಟಿಸುವದಕ್ಕೋಸ್ಕರವಾಗಿಯೇ ಪ್ರಯತ್ನಪಡುತ್ತಿರುವರು. ಲೋಕಹಿತಚಿಂತನವೇ ಸಾಧುಗಳ ಕರ್ತವ್ಯವಾಗಿರುವದು. ಹೀಗಿದ್ದು, ಎಷ್ಟೋ ಜನ ಸತ್ಪುರುಷರು ಧರ್ಮ ವಿರೋಧವಾಗಿ ನಡೆಯುತ್ತಿರುವರೆಂಬದು ಕಂಡು ಬರುವದು. ಕೆಲವರು ಸದಾಚಾರ ರತರಾಗಿ ಸನಾತನ ಧರ್ಮದ ಅಭಿಮಾನಿಗಳಾದರೆ ಬೇರೆ ಕೆಲವರು ಧರ್ಮಾಚರಣೆಗಳನ್ನು ಕಟ್ಟಿಟ್ಟು ಮನಬಂದಂತೆ ಆಚರಿಸ ತೊಡಗುವರು. ಆದರೆ ಧರ್ಮ ಪ್ರವರ್ತಕರಾದ ಸಾಧುಗಳು ಹೀಗೇಕೆ ಮಾಡುತ್ತಿರುವರೆಂಬದರ ರಹಸ್ಯವನ್ನು ತಿಳಿಯದೆ ಅವರನ್ನು ದೂಷಿಸುವದು ಅನ್ಯಾಯವು.

ಸಾಧುತ್ವದ ಪರೀಕ್ಷೆಗೆ ಬಹಿರಂಗಕ್ಕಿಂತಲೂ, ಅಂತರಂಗವು ಪ್ರಾಮುಖ್ಯವಾಗಿರುವದರಿಂದ ಅಂತರಂಗದ ವಿಶುದ್ಧತೆಯುಳ್ಳವರೇ ಸಾಧುಗಳೆನಿಸುವರು. ಮನುಷ್ಯನು ಸತ್ಕರ್ಮಾಚರಣೆಗಳನ್ನು ಮಾಡಿ ಪಡೆಯತಕ್ಕ ಫಲವೇನಂದರೆ ಅಂತರಂಗದ ಶುದ್ಧೀಕರಣವೆಂದು ಹೇಳಲಾಗುವದು. ಇದನ್ನು ಪಡೆಯುವದಕ್ಕೆ ಪ್ರಯತ್ನ ಮಾಡದೆ

ಅಂದರೆ ಅಂತರಂಗದ ವಿಶುದ್ಧತೆಯನ್ನು ಕಾಯ್ದುಕೊಳ್ಳದೆ ಯಾವ ಕರ್ಮಾಚರಣೆಗಳನ್ನು ಆಚರಣಮಾಡಿದರೂ ಅದರಿಂದ ಕವಡಿಯಷ್ಟು ಪ್ರಯೋಜನವಾಗುವದಿಲ್ಲ. ಈ ತತ್ವವನ್ನೇ ತೋರಿಸಿಕೊಡುವದಕ್ಕೋಸ್ಕರವಾಗಿ ಸಜ್ಜನರು ಅಂತರಂಗದ ವಿಶುದ್ಧತೆಗೆ ಬಹಿರಂಗದ ಯಾವ ಕರ್ಮಾಚರಣೆಗಳು ಬಾಧೆಯನ್ನುಂಟುಮಾಡಲಾರವೆಂದು ತಮ್ಮ ಆಚರಣೆಗಳಿಂದ ತೋರಿಸುವರು. ಇಂಥಸಾಧುಗಳ ಆಚರಣೆಯಿಂದ ಡಾಂಭಿಕ ಕರ್ಮಠರು ಬೋಧತಕ್ಕೊಳ್ಳಬಹುದಾಗಿದೆ. ಹೀಗೆಬೋಧವ ಹೊಂದುವದನ್ನು ತ್ಯಜಿಸಿ ಇಂಥಸಾಧುಗಳು ಹೀಗೆ ಹೀಗೆ ಧರ್ಮಾಚರಣೆಗಳ ವಿರುದ್ಧ ನಡೆದರೆಂದು ಒಟಗುಟ್ಟುತ್ತ ಕೂಡ್ರುವದರಲ್ಲಿ ತಥ್ಯಾಂಶವೂ ಇಲ್ಲ. ಲಾಭವೂ ಇಲ್ಲ. ಪ್ರಸ್ತುತದ ನಮ್ಮ ಅವಧೂತರು ಬ್ರಾಹ್ಮಣ ವರ್ಣದವರಿದ್ದು, ಅವರು ಬ್ರಾಹ್ಮಣ ಧರ್ಮದ ಬಹಿಃಕರ್ಮಗಳನ್ನು ಯಥಾಸ್ಥಿತವಾಗಿ ಮಾಡಲಿಲ್ಲೆಂದು ಕೆಲವರು ಆಕ್ಷೇಪಿಸಬಹುದು. ಆದರೆ ಅವರನ್ನು ಪ್ರತ್ಯಕ್ಷ ನೋಡಿದವರಿಗಾಗಲಿ, ಇಲ್ಲವೆ ಅವರ ಚರಿತ್ರವನ್ನು ಮನಃಪೂರ್ವಕ ಓದಿದವರಿಗಾಗಲಿ ಈ ಬಗೆಯ ಆಕ್ಷೇಪವು ಉಳಿಯಲಾರದು. ಯಾಕಂದರೆ ಡಾಂಭಿಕ ಕರ್ಮಠತನದಿಂದ ಯಾವ ಪ್ರಯೋಜನವೂ ಆಗದೆಂಬದನ್ನು ಆ ಮಹಾತ್ಮರು ಕರ್ಮತ್ಯಾಗದಿಂದ ತೋರಿಸುವರೆಂಬದನ್ನು ಅವರು ಮನಗಾಣುವರು. ಸದ್ಭಾವನೆಯಿಂದ ಮಾಡಿದ ಕರ್ಮಗಳು ಕ್ರಿಯಾಸಿದ್ಧಿಯನ್ನುಂಟುಮಾಡುವವೆಂದು ಕೆಲಜನ ಅವತಾರಿಕ ಸಜ್ಜನರು ತೋರಿಸಿ ಕೊಟ್ಟರೆ, ಡಾಂಭಿಕ ಕರ್ಮಗಳಿಂದ ಏನೂ ಪ್ರಯೋಜನವಾಗದೆಂಬದನ್ನು ನಮ್ಮ ಅವಧೂತರಂಥ ಸತ್ಪುರುಷರು ನಿದರ್ಶನಕ್ಕೆ ತಂದು ಕೊಟ್ಟಿರುವರು. ಒಟ್ಟಿನಮೇಲೆ ಹೇಳತಕ್ಕದ್ದೆಂದರೆ ಸಜ್ಜನರು ಅನಾಚಾರಿಗಳೆಂದು ತಿರಸ್ಕರಿಸುವದು ಸರ್ವಥಾ ಅಯೋಗ್ಯವು; ಯಾಕಂದರೆ ಅವರು ಮಾಡುವ ಪ್ರತಿಯೊಂದು ಕಾರ್ಯಗಳು ಜನತೆಗೆ ಒಂದೊಂದು ಬಗೆಯಿಂದ ಸದ್ಬೋಧವನ್ನು ಮಾಡುತ್ತಲಿವೆ. ಇರಲಿ.

ಒಬ್ಬ ಬ್ರಾಹ್ಮಣನು ಶ್ರೀ ಕ್ಷೇತ್ರ ನರಸಿಂಹವಾಡಿಯಲ್ಲಿ ಮೂರು ವರುಷಗಳ ವರೆಗೆ ಏಕ ನಿಷ್ಠೆಯಿಂದ ಅನುಷ್ಠಾನ ಮಾಡಿದನು. ಆಗ ಆತನ ಭಕ್ತಿಗೆ ಮೆಚ್ಚಿದ ಶ್ರೀ ದತ್ತಮಹಾರಾಜರು ಆತನಿಗೆ ಕೊಲ್ಲಾಪುರಕ್ಕೆ ಶ್ರೀ ಕೃಷ್ಣಾವಧೂತರ ಸನ್ನಿಧಿಗೆ ಹೋಗಬೇಕೆಂದು ಆಜ್ಞೆಯನ್ನಿತ್ತರು. ಬ್ರಾಹ್ಮಣನು ಕರ್ಮಠನಿದ್ದು ಸಾತ್ವಿಕನಿದ್ದನು. ಆತನಿಗೆ ಕರ್ಮಗಳ ಮೇಲೆ ಅಭಿಮಾನ ಬಹಳವಿತ್ತು. ಆದರೂ ಆತನು ಭಗವದಾಜ್ಞೆಯನ್ನು ತಿರಸ್ಕರಿಸುವಷ್ಟು ಲಂಡನಿದ್ದಿಲ್ಲ. ಈ ಮೊದಲೇ ಅವನು ಕೃಷ್ಣಾವಧೂತರನ್ನು ಬಲ್ಲವನಾಗಿದ್ದನು. ಆದರೆ ಅವನಲ್ಲಿ ಅವರ ವಿಷಯ್ಕ

ವಾಗಿ ಭಕ್ತಿ ಶ್ರದ್ಧೆಗಳು ಮಾತ್ರ ಉತ್ಪನ್ನವಾಗಿದ್ದಿಲ್ಲ; ಇದಕ್ಕೆ ಅವನ ಅತಿ ಕರ್ಮಠತನವೇ ಕಾರಣವಾಗಿತ್ತು. ಇಂಥ ಆ ಬ್ರಾಹ್ಮಣನಿಗೆ ಈಗ ಶ್ರೀ ದತ್ತಮಹಾರಾಜರ ಅಪ್ಪಣೆಯ ಪ್ರಕಾರ ಕೊಲ್ಹಾಪುರಕ್ಕೆ ಆ ಮಹಾತ್ಮರ ಸನ್ನಿಧಿಗೆ ಹೋಗಬೇಕಾದ ಪ್ರಸಂಗವು ಬಂದಿತು. ಅವನು ತನ್ನ ಅನಿವಾರವಾದ ರೋಗ ನಿವಾರಣಾರ್ಥವಾಗಿ ಶ್ರೀ ಕೃಷ್ಣಾವಧೂತರ ಸನ್ನಿಧಿಯನ್ನು ಸೇರಬೇಕಾಯಿತು; ಅವನು ತನ್ನ ಅನುಷ್ಠಾನವನ್ನು ಪೂರ್ಣ ಪಡಿಸಿಕೊಂಡು ಶ್ರೀ ದತ್ತನಿಗೆ ಪೊಡಮಟ್ಟು ಕರವೀರ ಕ್ಷೇತ್ರಕ್ಕೆ ನಡೆದನು. ವೇಶ್ಯಾಗೃಹವಾಸಿಗಳಾದ ಶ್ರೀ ಅವಧೂತರು ಮಂಚದ ಮೇಲೆ ಕುಳಿತುಕೊಂಡಿರಲು, ಬ್ರಾಹ್ಮಣನು ಹೋಗಿ ನಮಸ್ಕರಿಸಿದನು. ಬ್ರಾಹ್ಮಣನು ಬಂದದ್ದಕ್ಕೆ ಅವಧೂತರು ಏನೂ ಮಾತಾಡಲಿಲ್ಲ. ಹೀಗೆ ತಾನು ಬಂದರೂ ಅವಧೂತರು ಮಾತಾಡಲಿಲ್ಲವೆಂದು ಬ್ರಾಹ್ಮಣನು ಮನಸ್ಸಿನಲ್ಲಿ ಖಿನ್ನನಾಗದೆ ಊರಲ್ಲಿ ಮಧುಕರಿಯನ್ನು ಬೇಡಿ ಕ್ಷುಧಾ ಶಾಂತಿಯನ್ನು ಮಾಡಿಕೊಂಡು ಪ್ರತಿನಿತ್ಯ ಅವಧೂತರ ಬಳಿಗೆ ಬಂದು ಅವರ ಸೇವೆ ಮಾಡಹತ್ತಿದನು. ಒಂದು ತಿಂಗಳು ಕಾಲ ಕ್ರಮಿಸಿತು. ಬ್ರಾಹ್ಮಣನ ಸೇವೆಯು ಯಥಾಪ್ರಕಾರ ನಡೆದೇ ಇತ್ತು, ಈ ಅವಧಿಯಲ್ಲಿ ಅವನಲ್ಲಿ ಆ ಮಹಾತ್ಮರ ವಿಷಯವಾಗಿದ್ದ ಅಶ್ರದ್ಧೆಯು ಮೆಲ್ಲಮೆಲ್ಲನೆ ತೊಲಗಿ ಹೋಯಿತು. ನಿಕಟ ಸಾನ್ನಿಧ್ಯದಲ್ಲಿ ಪ್ರೇಮವಾಗಲಿ,ಭಕ್ತಿಯಾಗಲಿ,ಹೆಚ್ಚುತ್ತಹೋದರೆ ಅಲ್ಲಿದೈವೀ ವೈಭವವಿರುತ್ತದೆಂದು ಹೇಳಬಹುದು. ಎಲ್ಲಿ ನಿಕಟಸಾನ್ನಿಧ್ಯದಿಂದ ಭಕ್ತಿಪ್ರೇಮಗಳು ಉದಯಿಸದೆ ತಿರಸ್ಕಾರ-ಉದಾಸೀನತೆಗಳು ಉತ್ಪನ್ನವಾಗುವವೋ ಅಲ್ಲಿ ಆಸುರೀ ವೈಭವವಿರುತ್ತದೆಂದು ತಿಳಿಯಬೇಕು. ಈ ನಿಯಮವು ಮಹಾಪುರುಷರಿಗಷ್ಟೇ ಹತ್ತುತ್ತದೆಂದು ಹೇಳಲಾಗುವದಿಲ್ಲ. ಸಾಂಸಾರಿಕರಿಗೂ ಹತ್ತುತ್ತದೆ. ಆಸುರೀ ಸಂಪತ್ತಿನ ಎಷ್ಟೋ ಮನೆತನಗಳಲ್ಲಿ ಕಡೆತನಕ ಕಲಹಗಳು ತಪ್ಪುವದಿಲ್ಲ. ಎಲ್ಲಿಸ ರ್ವದಾ ಕಲಹಗಳಿರುವವೋ ಅಲ್ಲಿ ಪ್ರೇಮವಾಗಲಿ, ಭಕ್ತಿಯಾಗಲಿ, ಸೌಖ್ಯವಾಗಲಿ, ಇರುವದಿಲ್ಲೆಂಬದುಸ್ವಾಭಾವಿಕವು. ಇರಲಿ.

ಪವಿತ್ರ ಪ್ರೇಮವು ಬೆಳೆಯಹತ್ತಿದು ಭಾವನೆಯು ತೊಲಗಹತ್ತಿದ್ದರಿಂದ ಬ್ರಾಹ್ಮಣನು ಅವಧೂತರ ವಿಷಯವಾಗಿ ಸಮಾಧಾನವನ್ನು ತಾಳಿದನು. ಅವನು ಬರಬರುತ್ತ ಹೆಚ್ಚೆಚ್ಚು ಆಸ್ಥೆಯಿಂದ ಅವರ ಸೇವೆಯನ್ನು ಮಾಡಲಾರಂಭಿಸಿದನು. ಆಗ ಅವಧೂತರು ಒಂದುದಿನ ಏಕಾಂತದಲ್ಲಿ ಬ್ರಾಹ್ಮಣನನ್ನು ಕುರಿತು—"ಬ್ರಾಹ್ಮಣನೇ, ಈಗ ನಿನ್ನ ಮನಸ್ಸಿನಸ್ಥಿತಿಯು ಹ್ಯಾಗಿರುತ್ತದೆ? ಶ್ರೀದತ್ತಮಹಾರಾಜರು ಕುಲಹೀನನ ಕಡೆಗೆ ನಿನ್ನನ್ನು ಕಳಿಸಿದಂತಾಯಿತೋ. ಹ್ಯಾಗೆ" ಎಂದು ಕೇಳಲು ಬ್ರಾಹ್ಮಣನು

ನುಡಿದನೇನಂದರೆ—"ಮಹಾರಾಜ, ನಾನು ಚಾಂಡಾಲನು; ತಿಳಿಯದೆ ನಿಮ್ಮ ನಿಂದೆ ಮಾಡಿ ಪಾಪಕ್ಕೆ ಗುರಿಯಾದೆನು. ಸಜ್ಜನರ ರಹಸ್ಯವನ್ನು ತಿಳಿಯದ ನನ್ನಿಂದ ಇಂಥ ಮಹತ್ ಪಾಪವು ಸಂಘಟಿಸಿದ್ದು ಸ್ವಾಭಾವಿಕವಾಗಿದೆ. ನನ್ನಂಥ ಅಜ್ಞರು ಇನ್ನೂ ಇಂಥ ಪಾಪ ಮಾಡುತ್ತಲೇ ಇರಬಹುದು. ಆದರೆ ತಮ್ಮ ಸನ್ನಿಧಿಯು ನನಗೆ ದೊರೆ ತದ್ದರಿಂದ ಆ ನನ್ನ ಪಾಪಮತಿಯು ನನ್ನನ್ನು ಬಿಟ್ಟು ಹೋಯಿತು. ಈಗ ನನ್ನ ಹೃದಯದಲ್ಲಿ ಯಾವ ಬಗೆಯ ಜ್ಞಾನಜ್ಯೋತಿಯು ಉತ್ಪನ್ನವಾಗಿದೆಯೆಂಬದು ಸರ್ವಜ್ಞರಾದ ತಮಗೆ ವಿದಿತವೇ ಇರುವದು. ಯಾವುದನ್ನೂ ಲೇಪಿಸಿಕೊಳ್ಳದ ಪವಿತ್ರ ವಸ್ತುಗಳು ಎಲ್ಲಿದ್ದರೂ ಪವಿತ್ರವಾಗಿಯೇ ಇರುವವೆಂಬ ಅನುಭವವು ನನಗೆ ಪೂರ್ಣವಾಗಿ ಬಂದು ಹೋಗಿರುವದು. ಅಂದಬಳಿಕ ನಾನು ಈಗ ತಮಗೆ ಏನು ಉತ್ತರ ಕೊಡಲಿ? ಬಾಯಿಂದ ಉತ್ತರ ಹೇಳುವ ಕಾರಣವೇ ಉಳಿದಿರುವದಿಲ್ಲ."

ಈ ಪ್ರಕಾರವಾಗಿ ಬ್ರಾಹ್ಮಣನು ನುಡಿಯಲು ಅವಧೂತರು ಕುಂಬಾ ಸಂತೋಷ ಪಟ್ಟರು. ಮತ್ತು ಆತನನ್ನು ಕುರಿತು—ಧರ್ಮೋಪದೇಶವ ಮಾಡಿದರು—"ಬ್ರಾಹ್ಮಣೋತ್ತಮಾ, ಮನುಷ್ಯನಿಗೆ ಎರಡು ಅಂಗಗಳು; ಒಂದನೆಯದು ಅಂತರಂಗ, ಎರಡನೆಯದು ಬಹಿರಂಗ; ಅಂತರಂಗವು ತನ್ನನ್ನು ತಾರಿಸುವದು; ಬಹಿರಂಗವು ಪರರನ್ನುದ್ಧರಿಸುವದು. ಇದರ ಸ್ಪಷ್ಟೀಕರಣವನ್ನು ಸ್ವಲ್ಪ ಮಾಡುತ್ತೇನೆ ಕೇಳು. ಅಂತರಂಗವು ತನ್ನನ್ನು ತಾರಿಸುವದೆಂದರೆ ಅಂತರಂಗದಲ್ಲಿ ಶುದ್ಧ ಭಾವನೆ-ಪವಿತ್ರತೆಗಳು ಉಳಿದರೆ ಮನುಷ್ಯನು ಸಹಜವಾಗಿ ಉದ್ಧೃತನಾಗುವನು. ಅಂತರಂಗದಲ್ಲಿ ಈ ಬಗೆಯ ಪವಿತ್ರತೆ ಇದ್ದು, ಬಹಿರಂಗದಲ್ಲಿ ಸದಾಚಾರ ಸಂಪನ್ನನಾದರೆ ಆ ಬಹಿರಂಗದ ಅವನ ಆ ಆಚರಣೆಯು ಜನರಲ್ಲಿ ಸತ್ಕರ್ಮಾಭಿಲಾಷೆಯನ್ನು ಹೆಚ್ಚಿಸಿ ಲೋಕಕ್ಕೆ ಕಲ್ಯಾಣಕರವಾಗುವದು. ಅಂತರಂಗದಲ್ಲಿ ಪವಿತ್ರತೆಯಿಲ್ಲದೆ ಬಹಿರಂಗದ ಸದಾಚರಣೆಯು ಸದಾಚರಣೆಯೆನಿಸದು; ಅದರಿಂದ ಲೋಕ ಕಲ್ಯಾಣವಾಗಲಿ, ವ್ಯಕ್ತಿಯ ಕಲ್ಯಾಣವಾಗಲಿ ಸಾಧಿಸದು. ಆದ್ದರಿಂದ ಅಶುದ್ಧ ಅಂತರಂಗವುಳ್ಳವನ ಸತ್ಕರ್ಮಾಚರಣೆಗಳು ನಿಷಿದ್ಧವೆಂದು ತಿಳಿಯಬೇಕು. ಸಾಧುಗಳಾಗಲಿ, ಅವತಾರಿಕರಾಗಲಿ ಇದೇ ಮಾತನ್ನೇ ಜನತೆಯ ತಿಳಿವಳಿಕೆಯಲ್ಲಿ ತಂದು ಕೊಡುವದಕ್ಕೋಸ್ಕರ ಯತ್ನಿಸುತ್ತಿರುತ್ತಾರೆ. ಆದ್ದರಿಂದ ನೀನು ಈ ಮಾತಿನ ವಿಚಾರವನ್ನು ಸರಿಯಾಗಿ ಮಾಡಿಕೊಂಡು ಆಚರಿಸಿದೆಯೆಂದರೆ ಸಹಜವಾಗಿ ಭವಸಾಗರವನ್ನು ದಾಟುವಿ."

ಶ್ರೀ ಕೃಷ್ಣಾವಧೂತರ ಈ ಬೋಧವು ಬ್ರಾಹ್ಮಣನ ಮೇಲೆ ಚನ್ನಾಗಿ ಪರಿಣಮಿಸಿತು. ವಿಷಯಲಾಲಸೆಯಿಂದ ಅವನು ಶ್ರೀ ದತ್ತಗುರುವಿಗೆ ಶರಣು ಹೋಗಿದ್ದು,

ಈಗ ಅವಧೂತರ ಸಂಗದಿಂದ ಅವನಲ್ಲಿ ಪೂರ್ಣ ಉಪರತಿಯುಂಟಾಯಿತು. ಅವನು ಅವರ ಪರವಶ್ಯನಾಗಿ ಅವರ ಸನ್ನಿಧಿಯಲ್ಲಿಯೇ ಇರುವ ಇಚ್ಛೆಯನ್ನು ಪ್ರಕಟ ಮಾಡಿದನು. ಅವಧೂತರು ಅವನಲ್ಲುಂಟಾದ ವಿರಕ್ತಿಯನ್ನು ನೋಡಿ ತುಂಬಾ ಸಂತೋಷಪಟ್ಟು, ಅವನಿಗೆ ಮತ್ತೆ ಕೆಲವು ಉಪದೇಶಗಳನ್ನು ಮಾಡಿ ಸಂಸಾರವ್ನು ಮಾಡಿಕೊಂಡಿರುವಂತೆ ಪ್ರೇರಿಸಿದರು. ಬ್ರಾಹ್ಮಣನು ಬ್ರಹ್ಮಾನಂದ ಮಗ್ನನಾಗಿ ಗುರುಗಳ ಅಪ್ಪಣೆಯಂತೆ ಸಂಸಾರವ ಮಾಡಿ ಅವತಾರಿಕರ ರಹಸ್ಯವನ್ನು ಜನತೆಗೆ ಬೋಧಿಸಿದನು.

ಪ್ರಿಯ ವಾಚಕರೇ, ಅವತಾರಿಕರ ಮಹತ್ವವು ತಿಳಿಯಲಶಕ್ಯವಿರುವದು. ಜಗದ್ಧಿತಕರ್ತನಾದ ಪರಮಾತ್ಮನು, ಯಾವ ರೂಪದಿಂದ ಯಾವ ಕಾಲಕ್ಕೆ ಪ್ರಕಟನಾಗುವನೋ ಆ ಕಾಲಕ್ಕ ಆ ರೂಪವನ್ನೇ ಒಡೆದು ಕಾಣುವಂತೆ ಮಾಡುವನು. ಅರ್ವಾಚೀನ ಕಾಲದಲ್ಲಿ ಅವತರಿಸಿದ ಹಲವು ಜನ ಸತ್ಪುರುಷರ ಚರಿತ್ರಗಳಿಂದ ಈ ಮಾತು ಸ್ಪಷ್ಟವಾಗಿ ಅನುಭವಕ್ಕೆ ಬರುವದು. ಈಶ್ವರಾಂಶರಾದ ಚಿದಂಬರದೀಕ್ಷಿತರು ಅವತರಿಸಿದಾಗ, ಪಂಢರಪುರದ ವಿಠ್ಠಲ ಹಾಗು ವೇಂಕಟಗಿರಿಯ ವೇಂಕಟೇಶ ಇವರು ತಮಗೆ ಶರಣು ಬಂದ ಭಕ್ತರನ್ನು ಶ್ರೀ ದೀಕ್ಷಿತರ ಕಡೆಗೆ ಕಳಿಸಿದರು ಇದರಂತೆ ಪ್ರತಿಯೊಬ್ಬ ಅವತಾರಿಕರ ಚರಿತ್ರದಲ್ಲಿಯೂ ಇಂಥ ಸಂಗತಿಗಳು ಕಂಡು ಬರುವವು. ಆದ್ದರಿಂದ ಪ್ರಚಲಿತ ಅವತಾರವನ್ನು ಬೆಳಕಿಗೆ ತಂದು ತದ್ವಾರಾ ಭಕ್ತರ ಹಿತವನ್ನು ಸಾಧಿಸುವದು ಪರಮೇಶ್ವರನಿಗೆ ಇಷ್ಟವಾಗಿರುತ್ತದೆಂಬದು ಕಂಡು ಬರುವದು. ಹೊಸ ಹೊಸ ಅವತಾರಗಳು ಆಗುತ್ತ ಹೋದಂತೆ ಗತಾವತಾರಗಳ ಮಹತ್ವವು ಕಡಿಮೆಯಾಗುತ್ತದೆಂದು ಯಾರೂ ತಿಳಿಯಲಾಗದು. ಯಾಕೆಂದರೆ ಎಲ್ಲ ಅವತಾರಗಳಲ್ಲಿ ಪರಮೇಶ್ವರನ ನಾಮರೂಪಗಳಲ್ಲಷ್ಟೇ ಭೇದವು; ಹೊರತು ಮೂಲ ವಸ್ತುವಿನಲ್ಲಿ ಭೇದವಿರುವದಿಲ್ಲ. ಒಬ್ಬನೇ ಅನಂತ ವೇಷಗಳನ್ನು ಧರಿಸಿದರೆ, ಆ ವೇಷಧಾರಕನು ತನ್ನ ಎಲ್ಲ ವೇಷಗಳ ವಿಷಯವಾಗಿ ಹ್ಯಾಗೆ ಅಭಿಮಾನವ ತಾಳುವನೋ ಹಾಗೆ ಪರಮಾತ್ಮನು ತನ್ನ ಎಲ್ಲ ಅವತಾರಗಳ ಮಹತ್ವವನ್ನು ಕಾಯ್ದುಕೊಳ್ಳುವನು.

## ೭ನೆಯ ಪ್ರಕರಣ.

### ಸಂಶಯಾತ್ಮಾ ವಿನಶ್ಯತಿ.

ಕರವೀರಪುರದಲ್ಲಿ ಒಬ್ಬ ಸ್ತ್ರೀಯಿದ್ದಳು. ಆಕೆಯು ಯಾವದೋ ಒಂದು ಕಾಮನಾ ಸಿದ್ಧ್ಯರ್ಥವಾಗಿ ಶ್ರೀಮಾರುತಿಯ ಉಪಾಸನೆಯನ್ನು ಮಾಡುತ್ತಿದ್ದಳು. ಅವಳು ಆ ಊರಲ್ಲಿರುವ ಮಾರುತಿಯ ಗುಡಿಗೆ ಪ್ರತಿನಿತ್ಯ ಹೋಗುತ್ತಿದ್ದಳು. ಮತ್ತು ಪ್ರದಕ್ಷಿಣ ನಮಸ್ಕಾರಗಳನ್ನು ಹಾಕಿ ತಿರುಗಿ ಮನೆಗೆ ಬರುತ್ತಿದ್ದಳು. ಹೀಗೆ ಎಷ್ಟೋ ಕಾಲದ ವರೆಗೆ ಮಾಡಿದರೂ ಅವಳಿಗೆ ಕಾಮನಾ ಸಿದ್ಧಿಯಾಗದೆ ಹೋಯಿತು. ಒಂದು ದಿನ ಅವಳು ಮಾರುತಿಯ ದರುಶನಕ್ಕೆ ಹೋದಾಗ ಒಬ್ಬ ಗೃಹಸ್ಥನು ಆಕೆಯನ್ನು ಕುರಿತು ನುಡಿದನೇನಂದರೆ—"ತಾಯಿ! ದಿನಾಲು ಈ ಕಲ್ಲು ದೇವರಿಗೆ ನಡೆಕೊಂಡು ವೃಥಾ ಆಯಾಸಕ್ಕೆ ಗುರಿಯಾಗುವದಕ್ಕಿಂತ ಇದೇ ಊರಲ್ಲಿರುವ ದತ್ತನ ಅವತಾರಿಕರಾದ ಶ್ರೀ ಕೃಷ್ಣಾವಧೂತರ ದರುಶನ ತಕ್ಕೊಳ್ಳಬಾರದೆ? ಆ ಮಹಾತ್ಮರು ಶರಣಾಗತರಿಗೆ ಕಾಮಧೇನು-ಕಲ್ಪವೃಕ್ಷದಂತಿರುತ್ತಾರೆ."

ಈ ಮೇರೆಗೆ ಗೃಹಸ್ಥನು ಆಡಿದ ಮಾತನ್ನು ಕೇಳಿ ಆ ಸ್ತ್ರೀಯು ತಿರಸ್ಕಾರದಿಂದ "ಇಂಥ ಅವಧೂತ-ಗಿವಧೂತರನ್ನು ನಾನು ನಂಬುವದಿಲ್ಲ; ಅವರಲ್ಲೇನು ಹುರುಳಿದೆ? ಎಂದು ಪ್ರತ್ಯುತ್ತರ ಕೊಟ್ಟು ಮನೆಗೆ ಹೊರಟು ಹೋದಳು. ಆದರೆ ಅವಳಿಗೆ ಆ ದಿನ ದಾರಿಯಲ್ಲಿಯೇ ಅವಧೂತರ ಭೆಟ್ಟಿಯಾಯಿತು. ಅವಳು ಅವರನ್ನು ಎಷ್ಟು ನಿಂದಿಸುತ್ತಿದ್ದರೂ ಪ್ರತ್ಯಕ್ಷ ಅವರ ಭೆಟ್ಟಿಯಾದ ಕೂಡಲೆ ಅಲ್ಲಿಂದ ಸುಮ್ಮನೆ ಹೋಗಲಿಕ್ಕಾಗಲಿಲ್ಲ. ಕೆಲಕೆಲವರ ಸ್ವಭಾವವು ಹೀಗೆ ಅಧೀರವಿರುತ್ತದೆ, ಅವರು ಯಾವದೊಂದು ವ್ಯಕ್ತಿಯ ವಿಷಯಕ್ಕಾಗಲಿ, ಅಥವಾ ಯಾರೊಬ್ಬ ಸತ್ಪುರುಷರ ವಿಷಯಕ್ಕಾಗಲಿ ಹಿಂದಿನಿಂದ ಬೇಕಾದಷ್ಟು ನಿಂದೆಯನ್ನು ಮಾಡುವರು. ಕುಚೇಷ್ಟೆಯನ್ನೆಬ್ಬಿಸುವರು. ಆದರೆ ಆ ವ್ಯಕ್ತಿಯಾಗಲಿ, ಸತ್ಪುರುಷರಾಗಲಿ ಸಮ್ಮುಖದಲ್ಲಿ ಬಂದರೆ ಒಂದು ತುಟಿ ಎರಡು ಮಾಡದೆ ತೆಪ್ಪಗಾಗುವರು. ಇಷ್ಟೇ ಅಲ್ಲ; ಅವರೊಡನೆ ಸ್ನೇಹಭಾವವನ್ನಾಗಲಿ, ಭಕ್ತಿಭಾವವನ್ನಾಗಲಿ ತೋರ್ಪಡಿಸ ಹೋಗುವರು. ಇದರಂತೆ ಪ್ರಸ್ತುತದ ಸ್ತ್ರೀಯಾದರೂ ಅವಧೂತರನ್ನು ನೋಡಿ ಅಧೀರಭಾವದಿಂದ ಅವರ ಅಡಿದಾವರೆಗಳಿಗೆ ಪೊಡಮಟ್ಟಳು. ಆದರೆ ಅವಳ ಅಂತ

ರಂಗವನ್ನು ಒಲ್ಲ ಆ ಮಹಾತ್ಮರು ಮುಗುಳು ನಗೆ ನಕ್ಕು ನುಡಿದರೇನಂದರೆ "ಅವ್ವಾ, ಹುರುಳಿಲ್ಲದವನಾದ ನನಗೆ ಯಾಕೆ ನಮಸ್ಕಾರ ಮಾಡಿದೆ? ಶ್ರೀ ಮಾರುತಿಯ ಭಕ್ತಳಾದ ನೀನು ಮನುಷ್ಯನಾದ ನನಗೆ ತಲೆಬಾಗಬಹುದೇ? ನಮ್ಮ ನಿಂದೆಯಿಂದ ನಿನ್ನ ನಾಲಿಗೆಯು ಸಮಾಧಾನವನ್ನು ಹೊಂದುತ್ತಿದ್ದರೆ ನಮಗೂ ಸಮಾಧಾನವಾಗುವದು. ಎದುರಿಗೆ ಬಂದಾಗ ವಿನಯ ತೋರಿಸುವದು, ಹಿಂದಿನಿಂದ ಜರೆದಾಡುವದು, ಇದು ಅತ್ಯಂತ ಕ್ಷುದ್ರವು; ಯಾರನ್ನಾದರೂ ಸ್ತೋತ್ರ ಮಾಡುವದಕ್ಕೂ ನಿಶ್ಚಯ ಬುದ್ಧಿ ಬೇಕು. ಜರೆಯಲಿಕ್ಕಾದರೂ ನಿಶ್ಚಯಬುದ್ಧಿ ಬೇಕು. ನಿಶ್ಚಯ ಬುದ್ಧಿಯಿಲ್ಲದ ಸ್ತೋತ್ರದಿಂದಾಗಲಿ, ನಿಂದೆಯಿಂದಾಗಲಿ ಏನೂ ಫಲವಿಲ್ಲ "ಸಂಶಯಾತ್ಮಾ ವಿನಶ್ಯತಿ" ಎಂದು ಹೇಳಿರುವದರಿಂದ ಕೊನೆಗೆ ನಾಶಪಂಥವನ್ನು ಹಿಡಿಯುವರು. ಅದ್ದರಿಂದ ವ್ಯರ್ಥವಾಗಿ ನಿನ್ನ ನಾಶವನ್ನು ನೀನೇ ಮಾಡಿಕೊಳ್ಳಬೇಡ; ಸ್ತೋತ್ರ ಮಾಡುವದರಲ್ಲಿ ನಿಶ್ಚಯವನ್ನು ತಾಳುವದು ಸುಲಭವು; ಆದರೆ ನಿಂದೆ ಮಾಡುವದರಲ್ಲಿ ನಿಶ್ಚಯವನ್ನು ತಾಳುವದು ಕಠಿಣವಿರುತ್ತದೆ ಅನಾಯಾಸವಾಗಿ ನಿನಗೆ ನಿಂದೆಯ ಮಹಾ ಫಲವು ದೊರೆಯುವ ಯೋಗ ಬಂದಿರಲು ನಿಶ್ಚಯವಿಲ್ಲದೆ ಅದಕ್ಕೆ ಯಾಕೆ ಹೊರತಾಗುತ್ತೀ?

ಈ ರೀತಿಯಾಗಿ ನುಡಿದು ಅವಧೂತರು ತಮ್ಮ ಹಾದಿಯನ್ನು ಹಿಡಿದು ನಡೆದರು. ಇತ್ತ ಆ ಸ್ತ್ರೀಯು ವಿಚಾರಕ್ಕೊಳಗಾದಳು. ಅವಳಿಗೆ ಆ ಮಹಾತ್ಮರಲ್ಲಿ ಒಮ್ಮೆ ಭಕ್ತಿ ಹುಟ್ಟುತ್ತಿತ್ತು; ಮತ್ತೊಮ್ಮೆ ಅವರ ವೇಶ್ಯಾಗೃಹನಿವಾಸವನ್ನು ತಿಳಿದು ತಿರಸ್ಕಾರವುತ್ಪನ್ನವಾಗುತ್ತಿತ್ತು. ಹೀಗೆ ಸಂದೇಹದಲ್ಲಿ ಮುಳುಗಿದ ಅವಳು ಮನೆಗೆ ಬಂದಳು. ಅವಳ ಮನಸ್ಸು ಬಹಳ ಚಂಚಲವಾಗಿತ್ತು. ಮಾರುತಿಯ ಸೇವೆಯನ್ನು ಅವಳು ಬಹಳ ದಿವಸಗಳಿಂದ ಮಾಡುತ್ತ ಬಂದಿದ್ದರೂ ಇನ್ನೂ ಕಾಮನಾಸಿದ್ಧಿಯಾಗದ್ದರಿಂದ, ಮಾರುತಿಯ ಸೇವೆಯ ವಿಷಯವಾಗಿ ಅವಳಲ್ಲಿ ಆಗಲೇ ಅನುಮಾನ ಹುಟ್ಟಿತ್ತು. ಅದರಲ್ಲಿ ಅವಧೂತರ ವಿಷಯಕವಾದ ಅನುಮಾನವೊಂದು ಬೆರೆತುಕೊಳ್ಳಲು ಅವಳಿಗೆ ಒಂದು ಬಗೆಯ ಭ್ರಾಂತಿಯು ಬಂದು ಹೋಯಿತು. ಮಾರುತಿಯ ಸೇವೆಗೂ ಅವಳ ಮನಸ್ಸು ಇಷ್ಟಪಡದಾಯಿತು; ಅವಧೂತರ ಬಳಿಗೆ ಹೋಗುವದಕ್ಕೂ ಒಪ್ಪಿಕೊಳ್ಳದಾಯಿತು. ಹೀಗಾಗಿ ಅವಳು ಅತೋಭ್ರಷ್ಟ-ತತೋಭ್ರಷ್ಟಳಾಗಲು, ಜನರು ಆಕೆಯ ಈ ದೈನ್ಯಾವಸ್ಥೆಯನ್ನು ಅವಧೂತರ ಮುಂದೆ ಹೇಳತೊಡಗಿದರು. ಆಗ ಕರುಣಾಳುಗಳಾದ ಅವಧೂತರು ಆಕೆಯನ್ನು ತಮ್ಮೆಡೆಗೆ ಕರೆಯಿಸಿಕೊಂಡು ಅನುಗ್ರಹಿಸಿದರು. ಅದರಿಂದ ಅವಳಿಗೆ

ಸುಬುದ್ಧಿಯುತ್ಪನ್ನವಾಯಿತು. ಅವಳ ಮನಃಕಾಮನೆಯೂ ಪೂರ್ತಿಯಾಯಿತು. ಅಂದಿನಿಂದ ಅವಳು ನಿಸ್ಸಂಶಯದಿಂದ ಅವಧೂತರ ಸೇವೆಯಲ್ಲಿ ನಿರತಳಾದಳು.

ಹೀಗಿರುತ್ತಿರಲು, ತಾರಾಬಾಯಿಯ ಮನೆಯಲ್ಲಿ ಇನ್ನೊಬ್ಬ ಹೆಣ್ಣುಮಗಳು ಅಂದರೆ ತಾರಾಬಾಯಿಯ ಆಪ್ತ ಸಂಬಂಧಿಕಳು ಇರುತ್ತಿದ್ದಳು. ಆಕೆಯು ಅವಧೂತರನ್ನು ಕಂಡರೆ ಸೇರುತ್ತಿದ್ದಿಲ್ಲ. ಅವರ ಅಮಾನುಷ ಕೃತ್ಯಗಳೂ, ಭವಿಷ್ಯ ಕಥನ ಮೊದಲಾದವುಗಳೂ ಆಕೆಗೆ ಭೂತ-ಪ್ರೇತಗಳ ಚೇಷ್ಟೆಗಳಾಗಿ ತೋರುತ್ತಿದ್ದವು. ಮೊದ ಮೊದಲು ಅವಳು ಅಂಜ ಅಂಜುತ್ತ ನಿಂದಿಸುತ್ತಿದ್ದಳು. ಬರ ಬರುತ್ತ ಅವಳು ಅವಧೂತರ ವಿಷಯಕವಾಗಿದ್ದ ತನ್ನ ದೋಷೈಕ ದೃಷ್ಟಿಯನ್ನು ಹೆಚ್ಚು ವಿಸ್ತೃತವಾಗಮಾಡಿದಳು. ಮನೆಗೆ ಬರಹೋಗುವವರ ಮುಂದೆ ಅವಳು ಅವಧೂತರನ್ನು ನಿಂದಿಸುತ್ತಿದ್ದಳು. ಅವರು ಆ ಸ್ತ್ರೀಯ ಮೂರ್ಖತನಕ್ಕೆ ನಕ್ಕು ತಮ್ಮ ದಾರಿಯಿಂದ ಹೋಗುತ್ತಿದ್ದರು ಅವಧೂತರೂ ಆಕೆಯ ಉಸಾಬರಿಗೆ ಹೋಗುತ್ತಿದ್ದಿಲ್ಲ. ಹೀಗೆ ನಿಂದೆಗೆ ಆಸ್ಪದವು ಸಿಕ್ಕದ್ದರಿಂದ ಆ ಸ್ತ್ರೀಯು ತೀರ ಸೊಕ್ಕಿಗೆ ಬಂದಳು. ಅವಧೂತರ ಸಮಕ್ಷಮವಾಗಿಯೇ ನಿಂದೆಯನ್ನಾರಂಭಿಸಿದಳು. ತಾರಾಬಾಯಿಯ ಉಪದೇಶವು ನಾಟದಾಯಿತು. ಆಗ ಅವಧೂತರು— "ಈಕೆಗೆ ಪ್ರಾಯಶ್ಚಿತ್ತಮಾಡಬೇಕೆ"ಂದು ಯೋಚಿಸಿದರು. ಅವರು ಒಂದುದಿನ ಆ ಸ್ತ್ರೀಯನ್ನು ಕುರಿತು—"ತಂಗೀ, ದಿನಾಲು ನಮ್ಮ ನಿಂದೆಯನ್ನು ಮಾಡುವಿಯಲ್ಲ; ಇದರಿಂದ ನಿನಗಾವ ಪ್ರಯೋಜನವೆಂದು ತಿಳಿದಿರುವಿ? ನಿನ್ನ ನಿಂದೆಯಿಂದ ನಮಗೇನೂ ಅಸಮಾಧಾನವಿಲ್ಲ. ಆದರೂ ನಿನ್ನ ಹಿತಕ್ಕಾಗಿ ಹೇಳುತ್ತೇನೆ. ಇತಃಪರ ನಿಂದೆಯ ಮಾತುಗಳನ್ನಾಡಿದೆಯೆಂದರೆ ಬಂಧನಕ್ಕೊಳಗಾಗುವಿ" ಎಂದು ನುಡಿದರು. ಅದಕ್ಕೆ ಆ ಸ್ತ್ರೀಯು ನಿರಪರಾಧಿಯಾಗಿರುವ ನನಗೇತರ ಬಂಧನವದು? ಇಂಥ ಬೆದರಿಕೆಯನ್ನು ಯಾರ ಮುಂದೆ ಹೇಳುವಿರಿ? ಎಂದು ನುಡಿದಳು. ಅವಧೂತರು ಆಗ ಸುಮ್ಮನಾದರು.

ಮುಂದೆ ಕೆಲವು ದಿವಸಗಳು ಕ್ರಮಿಸುತ್ತಿರಲು ಆ ಸ್ತ್ರೀಯ ಮೇಲೆ ಕಳವಿನ ಆರೋಪವು ಬಂದು ಪೋಲೀಸರು ಅವಳನ್ನು ದಸ್ತಗೀರಮಾಡಿಕೊಂಡು ಚಾವಡಿಗೆ ನಡೆದರು. ಅಲ್ಲಿ ಅವರು ಆಕೆಯನ್ನು ಮೈಮುರೀ ಥಳಿಸಿದರು. ಆಗ ಆಕೆಯ ಗರ್ವವು ಇಳಿದು ಹೋಯಿತು. ಅವಳು ದೀನಳಾದಳು. ಅವಧೂತರನ್ನು ನಿಂದಿಸಿದ ಫಲವು ದೊರೆಯಿತೆಂದು ತಿಳಿದು ಅವಳು ಪಶ್ಚಾತ್ತಾಪಕ್ಕೆ ಗುರಿಯಾದಳು. ಇಷ್ಟೇ ಅಲ್ಲ, ಮನಸ್ಸಿನಲ್ಲಿ ಅವಧೂತರನ್ನು ಪ್ರಾರ್ಥಿಸಲಾರಂಭಿಸಿದಳು. ಕ್ಷಮೆ

ಯನ್ನು ಯಾಚಿಸಿದಳು. ಇತಃಪರ ನಿಂದೆಯನ್ನು ಮಾಡುವದಿಲ್ಲೆಂದು ಬೇಡಿಕೊಂಡಳು. ಮತ್ತು ನಾನು ಮೂರ್ಖಳು; ತಿಳಿಯದೆ ಮೋಸಹೋದೆನು. ಅವಧೂತ ಮಹಾರಾಯಾ ನೀನು ನಿಜವಾಗಿಯೂ ದೊಡ್ಡವನಿರುತ್ತೀ; ನಿನ್ನ ಮೇಲೆ ನಾನು ವೃಥಾ ಸಂಶಯಗೊಂಡು ಪಾಪಿಯಾದೆನು. ಆ ಪಾಪದ ಪ್ರಾಯಶ್ಚಿತ್ತವು ನನಗೆ ಚನ್ನಾಗಿ ಬಂದುಹೋಯಿತು. ಈ ಬಾಧೆಯಿಂದ ನನ್ನನ್ನು ಮುಕ್ತಳನ್ನಾಗಮಾಡಲು, ನೀನೇ ಸಮರ್ಥನು.'' ಎಂದು ಪ್ರಾರ್ಥಿಸಿದಳು. ಅವಳ ಈ ಮನೋಮಯ ಪ್ರಾರ್ಥನೆಯು ಮುಗಿಯಲು, ಅವಧೂತರು ಸದಯಾಂತಃಕರುಣೆಗಳಾದರು. ಕೂಡಲೆ ಈಶ್ವರೀ ಮಾಯೆಯಿಂದ ಆಕೆಯನ್ನು ಬಿಟ್ಟುಬಿಡುವ ಸುಬುದ್ಧಿಯು ಪೋಲೀಸರಿಗುಂಟಾಯಿತು. ಅವರು ಆಕೆಯನ್ನು ಬಿಟ್ಟುಬಿಟ್ಟರು. ತನ್ನ ಪ್ರಾರ್ಥನೆಗೆ ಅವಧೂತ ಮಹಾರಾಜರು ಪ್ರಸನ್ನರಾದರೆಂದು ಅವಳು ಮನದಲ್ಲಿ ಅವರನ್ನು ನೆನೆಯುತ್ತ ಮನೆಗೆ ಬಂದಳು. ಮನೆಗೆ ಬರುವಷ್ಟರಲ್ಲಿ ಅವಧೂತರು ಕಟ್ಟೆಯಮೇಲೆ ಕುಳಿತುಕೊಂಡಿದ್ದರು. ಅವಳು ಬಂದವಳೇ ಅವರ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಆಗ ಅವಧೂತರು ನಕ್ಕು—''ಯಾಕೆ, ಪೆಟ್ಟುತಿಂದ ಮೇಲೆ ನಿನಗೆ ಬುದ್ಧಿಬಂದಿತೋ? ನಾನು ನಿನಗೆ ಈ ಮೊದಲೇ ಹೇಳಿಲ್ಲವೆ? ಆದದ್ದಾಯಿತು, ಇನ್ನು ಮೇಲಾದರೂ ವೃಥಾಸಂಶಯತಾಳಿ, ದುಃಖಕ್ಕೊಳಗಾಗಬೇಡ'' ನೀನು ಇಲ್ಲಿ ಮನೆಯಲ್ಲಿಯೇ ಇದ್ದು, ಇಷ್ಟು ಸಂಶಯಕ್ಕೊಳಗಾದದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನಿನ್ನಂತೆಯೇ ಹಿಂದಕ್ಕೆ ಒಬ್ಬ ಮೂರ್ಖನು ಸಂಶಯ ತಳೆದುಕೊಂಡಿದ್ದನು. ಅದನ್ನು ಹೇಳುತ್ತೇನೆ ಕೇಳು.

ಒಬ್ಬನು ದಾರಿಯನ್ನು ಹಿಡಿದು ಹೋಗುವಾಗ ಬಿಸಿಲಿನಿಂದ ಬಳಲಿ ಕಂಗೆಟ್ಟನು. ಅಷ್ಟರಲ್ಲಿ ಅವನಿಗೆ ದೂರದಲ್ಲಿ ಒಂದು ಗಿಡವು ಕಾಣಿಸಿತು. ಅವನು ಲಗಬಗೆಯಿಂದ ದಾರೀ ನಡೆದು ಆ ಗಿಡದ ಆಶ್ರಯವನ್ನು ಮಾಡಿದನು. ಕರ್ಮ-ಧರ್ಮ ಸಂಯೋಗದಿಂದಲೋ ಅಥವಾ ಅವನ ಸುದೈವದಿಂದಲೋ ಆ ಗಿಡವು ಸಾಮಾನ್ಯ ಗಿಡವಾಗಿರದೆ ಕಲ್ಪವೃಕ್ಷವಾಗಿತ್ತು. ಆ ಗಿಡದ ನೆರಳು ಬಹು ಸೊಗಸಾಗಿದ್ದಿತು. ತಾನು ಕುಳಿತದ್ದು ಕಲ್ಪವೃಕ್ಷವೆಂಬುದು ಪಾಪ ಅವನಿಗೆ ಹ್ಯಾಗೆ ಗೊತ್ತಾಗಬೇಕು? ಅವನಿಗೆ ಆ ವೃಕ್ಷದ ನೆರಳಿನಿಂದ ಬಹಳ ಆನಂದವಾಯಿತು. ಆಗ ಅವನು ಸ್ವಾಭಾವಿಕವಾಗಿ ಮನಸ್ಸಿನಲ್ಲಿ ''ಆಹಾ! ಈ ಸ್ಥಳವು ಎಷ್ಟು ರಮ್ಯವಾಗಿದೆಯಲ್ಲ? ಹಾಸುವದಕ್ಕೊಂದು ಕಂಬಳಿಯಿದ್ದರೆ ಸುಖವಾಗಿ ನಿದ್ದೆ ಮಾಡುತ್ತಿದ್ದೆನು'' ಎಂದು ನುಡಿದನು. ಹೀಗೆ ಅವನಲ್ಲಿ ಕಂಬಳಿಯ ಇಚ್ಛೆಯುತ್ಪನ್ನವಾಗಲು, ಆ ಕಲ್ಪವೃಕ್ಷದ ಪ್ರಭಾವ

ದಿಂದ ಅವನು ಕುಳಿತಲ್ಲಿ ಕಂಬಳಿಯು ಹಾಸಿಗೆಯು ಸಿದ್ಧವಾಯಿತು. ಅದನ್ನು ಕಂಡು ಅವನು ಕೌತುಕಪಟ್ಟು—ಕಂಬಳಿಯಾದರೆ ಚನ್ನಾಗಿ ನಿದ್ದೆ ಬರುವದಿಲ್ಲ; ಗಾದಿಯಾದರೆ ಬಹಳ ಸೊಗಸಾಗುವದು ಎಂದನು. ಅವನ ಇಚ್ಛೆಯಂತೆ ತತ್‍ಕ್ಷಣದಲ್ಲಿ ಗಾದಿಯು ಸಿದ್ಧವಾಯಿತು. ಈಗ ಅವನು ಮತ್ತಿಷ್ಟು ಕೌತುಕಪಟ್ಟು—ಬರಿಯ ಗಾದಿಯಕ್ಕಿಂತ ಒಂದು ಪಲ್ಲಂಗವಾದರೆ ಬಹಳ ಸುಖವಾಗುವದು ಎಂದು ಕಲ್ಪಿಸಿದನು. ಕಲ್ಪವೃಕ್ಷವು ಬೇಡಿದ್ದನ್ನು ಕೊಡುವದಷ್ಟೇ; ಅದ್ದರಿಂದ ಅವನ ಬಯಕೆಯಂತೆ ಒಂದು ಸುಂದರವಾದ ಪಲ್ಲಂಗವೂ ಸಿದ್ಧವಾಯಿತು; ಈ ಮೇರೆಗೆ ರಮ್ಯವೂ ಏಕಾಂತವೂ ಆದ ಸ್ಥಳದಲ್ಲಿ ಗಾದಿ-ಪಲ್ಲಂಗಗಳು ಸಿದ್ಧವಾಗಲು ಆತನ ವಿಷಯ ಸುಖ ಬುದ್ಧಿಯು ಜಿಗಿತಿತು. ಆಗ ಅವನು "ಇಂಥ ಹೃದ್ಯ ತಲ್ಪದ ಮೇಲೆ ಪವಡಿಸಲು ಓರ್ವ ಸುಂದರ ಯುವತಿಯು ಜೊತೆಗೆ ಇದ್ದರೆ ಎಷ್ಟು ಸುಖವಾಗಬಹುದಲ್ಲ" ಎಂದು ನುಡಿದನು. ಕೂಡಲೇ ಓರ್ವ ಸುಂದರ ಯುವತಿಯು ಒಯ್ಯಾರವನ್ನು ತೋರ್ಪಡಿಸುತ್ತ ಅವನೆದುರಿಗೆ ನಿಂತಳು. ಮುಂದಿನ ಸಂಗತಿಯನ್ನೇನು ಹೇಳಲಿ? ಅವನು ಪ್ರಾರಬ್ಧವಶಾತ್ತಾಗಿ ದೊರೆತ ಆ ವಿಷಯ ಸೌಖ್ಯದ ಉಪಭೋಗವನ್ನು ಯಥೇಷ್ಟವಾಗಿ ಕಕ್ಕೊಳ್ಳಬಹುದಾಗಿತ್ತು. ಆದರೆ ಅವನ ದುರ್ದೈವವು ಹಾಗೆ ಮಾಡಗೊಡಲಿಲ್ಲ. ಬಯಸಿ ಬಯಸಿದಂತೆ ಇಷ್ಟೆಲ್ಲ ಅನುಕೂಲತೆಗಳು ಒದಗುತ್ತಿ ಕೊನೆಗೆ ಸುಂದರ ಯುವತಿಯು ಕೂಡಾ ಎದುರಿಗೆ ಬಂದು ನಿಂತದ್ದರಿಂದ ಅವನಲ್ಲಿ ಒಂದಾದ ಸಂಶಯವುಂಟಾಯಿತು. ಇವಳೇನು ಸ್ತ್ರೀಯಿರುವಳೋ ಅಥವಾ ಭೂತವಾಗಿರುವಳೋ? ಒಂದು ವೇಳೆ ಇಷ್ಟೆಲ್ಲ ಆಟವು ಈ ಭೂತದಿಂದಲೇ ಆಗಿದ್ದರೂ ಆಗಿರಬಹುದು. ಎಂದು ಸಂಶಯಕೊಳ್ಳಹಗಾದನು. ಭೂತಕಲ್ಪನೆಯು ಅವನಲ್ಲಿ ಬರಲು ಆ ಸ್ತ್ರೀಯು ಬದಲು ಭೂತವು ಅವನ ದೃಷ್ಟಿಗೆ ಬಿದ್ದಿತು. ಆಗ ತು ಅವನು ಅಂಜಿ ಇದು ಎಲ್ಲಿ ತನ್ನನ್ನು ಮುರಿದು ನುಂಗುವದೋ ಎಂದು ಆಲೋಚಿಸ ಹತ್ತಿದನು. ಅವನ ಮನಸ್ಸಿನಲ್ಲಿ ಆಲೋಚನೆಯು ಬರುವದೊಂದೇ ತಡ; ಆ ಭೂತವು ಅವನನ್ನು ಮುರಿದು ನುಂಗಿ ಬಿಟ್ಟಿತು. ಹೇಳತಕ್ಕ ತಾತ್ಪರ್ಯವಿಷ್ಟೇ; ಆ ಮೂರ್ಖನು ಸಂಶಯಗೊಳ್ಳದೆ ಹಾಗೇ ಒಳ್ಳೇ ಕಲ್ಪನೆಗಳನ್ನು ಮಾಡುತ್ತ ಹೋಗಿದ್ದರೆ ಅವನಿಗೆ ಅನಂತ ವಿಷಯೋಪಭೋಗವು ದೊರೆಕುತ್ತಿತ್ತು. ಆದರೆ ನಡುವೇ ಸಂಶಯ ತಕ್ಕೊಂಡದ್ದರಿಂದ "ಸಂಶಯಾತ್ಮಾ ವಿನಶ್ಯತಿ" ಎಂಬ ವಚನದಂತೆ ವಿನಾಶಪಂಥವನ್ನು ಹಿಡಿದನು.

ಈ ಮೇರೆಗೆ ಅವಧೂತರು ಮಾತನಾಡಿ ಸುಮ್ಮನಾಗಲು ಆ ಸ್ತ್ರೀಯು ಪರಮ ಅನುರಾಗದಿಂದ ಅವರ ಕ್ಷಮೆಯನ್ನು ಬೇಡಿಕೊಂಡು ಅವರ ಭಜನೆಯಲ್ಲಿ

ಆಸಕ್ತಳಾದಳು. ಅಂದಿನಿಂದವಳು ಪರಮಭಕ್ತಿಯಿಂದ ಆ ಮಹಾತ್ಮರ ಸೇವೆ ಮಾಡಿ ತಾರಾಬಾಯಿಯಂತೆ ವಿರಕ್ತಿಯನ್ನು ಹೊಂದಿ ಜನ್ಮ ಸಾಫಲ್ಯಮಾಡಿಕೊಂಡಳು.

## ೮ನೆಯ ಪ್ರಕರಣ.

### ಯೋಗಾಬಾಯಿ.

ಭಗವನ್ಮಾಯೆಯು ಅಶಕ್ಯ್ಯವಿರುತ್ತದೆ. ಜ್ಞಾನಿಗಳ ಹೊರತು ಮಿಕ್ಕವರಿಗೆ ಈ ಮಾಯೆಯು ಅಂತವೇ ಹತ್ತುವಹಾಗಿಲ್ಲ ಮಾಯಾವಶರಾದ ಸಮಸ್ತ ಪ್ರಾಣಿಮಾತ್ರರು ತಮ್ಮಂತೆಯೇ ಜಗತ್ತು ಇರಬೇಕೆಂದು ಇಚ್ಛಿಸುತ್ತಾರೆ. ಈ ಇಚ್ಛೆಯಿಂದಲೇ ಸೃಷ್ಟಿಯಲ್ಲಿ ಮತಭೇದವು ಒಡೆದು ಕಾಣಲು ಆಸ್ಪದವಾಗಿರುತ್ತದೆ. ಮಾಯೆಯ ಪ್ರಭಾವದಿಂದ ಎಲ್ಲರೂ ಮೋಹವಶರಾಗಿ ತಮಗೆ ತಿಳಿದದ್ದೇ ಸತ್ಯವೆಂದೂ, ತಾವು ನಡೆಯುವದೇ ಧರ್ಮವೆಂದೂ ಪ್ರತಿಪಾದಿಸುತ್ತಿರುವರು. ಲೋಕವು ಭಿನ್ನ-ಭಿನ್ನ ಪ್ರಕೃತಿಯವರಿಂದ ತುಂಬಿ ಹೋಗಿರುವದರಿಂದ ಪ್ರಕೃತಿ ಭೇದದಂತೆ ಸ್ವಭಾವ ಭೇದವಿರುವದು ಸ್ವಾಭಾವಿಕವಾಗಿರುವದು. ಆದ್ದರಿಂದ ಪ್ರತಿಯೊಬ್ಬನ ಸ್ವಮತ ಪ್ರತಿಪಾದನವು ಬೇರೆಬೇರೆಯಾಗಿರುವದು ಆಶ್ಚರ್ಯವಲ್ಲ. ಲೋಕದವರ ಈ ಕೂಗಾಟನ್ನು ಕೇಳಿ ಜ್ಞಾನಿಗಳು ನಗುತ್ತಿರುವರು. ಯಾಕೆಂದರೆ ಅವರಿಗೆ ಸೃಷ್ಟಿಯ ಸ್ವರೂಪವು ಗೊತ್ತಿರುವದು. ಮಾಯೆಯು ಬಟ್ಟ ಬ್ಯಾಲೆಂಬದು ಅವರ ಅನುಭವದಲ್ಲಿ ನಿಂತ ಮಾತಾಗಿರುವದು. ಈಜುವ ಕಲೆಯಲ್ಲಿ ಅತಿ ನಿಷ್ಣಾತನಾದವನು ಹ್ಯಾಗೆ ನಿರ್ಭಯದಿಂದ ಸಮುದ್ರದಲ್ಲಿ ಈಸಾಡುವನೋ ಹಾಗೆ ಅವರು ಭವಾಬ್ಧಿಯ ಅಂಜಿಕೆಯಿಲ್ಲದೆ ಸ್ವೇಚ್ಛೆಯಿಂದಿರುವರು. ಅದರಂತೆ ಅಜ್ಞಾನಗ್ರಸ್ತ ಪ್ರಾಣಿಗಳಿಗೆ ಮಾಡಲಿಕ್ಕೆ ಶಕ್ಯವಲ್ಲ. ಒಂದು ವೇಳೆ ಅಜ್ಞಾನ ಪ್ರಾಣಿಗಳೂ ಜ್ಞಾನಿಗಳಂತೆ ಸ್ವೇಚ್ಛಾಚಾರಿಗಳಾದರೆ ಗುಟುಕು ನೀರು ಕುಡಿಯುವ ಹೊತ್ತು ಕಟ್ಟಿ ಇಟ್ಟಿರುವದೆಂತಲೇ ತಿಳಿಯಬೇಕು. ಮುಖ್ಯವಾಗಿ ಹೇಳತಕ್ಕ ತಾತ್ಪರ್ಯವೇನೆಂದರೆ—ಜ್ಞಾನಿಗಳ ಗುಣದೋಷಗಳನ್ನೆಣಿಸುವದು ಅಜ್ಞಾನಿಗಳ ಅಧಿಕಾರಕ್ಕೆ ಮೀರಿದ್ದಾಗಿರುವದು. ಆದ್ದರಿಂದ ಅವರು ಭಗವನ್ಮಾಯೆಯು ತಿಳಿಯುವದಿಲ್ಲೆಂದು ಮೌನವಾಗಿರುವದೇ ಲೇಸು.

ಆದರೆ ಲೋಕ ವಾಡಿಕೆಯು ಇದರ ವಿರುದ್ಧವಿರುತ್ತದೆ. ಅಜ್ಞಾನಿಗಳು ತಮ್ಮ ಎಲೆಯಲ್ಲಿ ಕತ್ತೆ ಸತ್ತು ಬಿದ್ದರೂ ಜ್ಞಾನಿಗಳ ಗುಣದೋಷಗಳನ್ನು ಎಣಿಸದೆ ಬಿಡುವದಿಲ್ಲ. ಈ ಮಾತು ತ್ರಿಕಾಲದಲ್ಲಿಯೂ ಅಬಾಧಿತವಿರುವದು. ಇಂಥವನೊಬ್ಬ ಜ್ಞಾನಿಯು ಜನರ ನಿಂದೆಗೆ ಗುರಿಯಾಗಲಿಲ್ಲವೆಂದು ಧೈರ್ಯದಿಂದ ಹೇಳಲಿಕ್ಕೆ ಬರುವದಿಲ್ಲ. ಅಂದರೆ ಒಂದಿಲ್ಲೊಂದು ಬಗೆಯ ನಿಂದಕರು ಎಲ್ಲ ಜ್ಞಾನಿಗಳಿಗೂ ಇರುವರೆಂದು ಹೇಳಬಹುದು. ವಸ್ತುಸ್ಥಿತಿಯು ಹೀಗಿರಲು, ಕೃಷ್ಣಾವಧೂತರಂಥ ಸ್ವೈರವರ್ತನದ ಸಾಧುಗಳಿಗೆ ನಿಂದಕರಿರುವದು ಆಶ್ಚರ್ಯವಲ್ಲ. ದೀಪದ ಬುಡದಲ್ಲಿ ಕತ್ತಲು ಇರುವಂತೆ ಅವಧೂತರು ಹುಟ್ಟಿದ ವಂಶದಲ್ಲಿಯೇ ಅವಧೂತರ ವಿಷಯಕವಾದ ಅಜ್ಞಾನಾಂಧಕಾರವು ತುಂಬಿಕೊಂಡಿತ್ತು. ಅವಧೂತರ ಮನೆಯವರು ಅವರನ್ನು ಬಹಳವಾಗಿ ತಿರಸ್ಕರಿಸುತ್ತಿದ್ದರು. ಜನರ ನಿಂದೆಯನ್ನೂ ಮನೆಯವರ ನಿಂದೆಯನ್ನೂ ಕೇಳಿ ಕೇಳಿ ಅವಧೂತರ ತಂಗಿಯಾದ ಯೋಗಾಬಾಯಿಯೆಂಬವಳು, ಮನಸ್ಸಿನಲ್ಲಿ ಬಹಳವಾಗಿ ವ್ಯಥೆಪಡುತ್ತಲಿದ್ದಳು. ಅವಳು ತನ್ನ ಮನದಲ್ಲಿ "ನಮ್ಮ ಅಣ್ಣಗೆ ಏನಾಗಿದ್ದೀತು? ಹುಚ್ಚು ಹಿಡಿದವರಂತೆ ಸ್ವೇಚ್ಛಾಚಾರಿಯಾಗಿರುವನು. ಜನರೂ ಮನಬಂದಂತೆ ಆಡಿಕೊಳ್ಳುವರು. ಹೀಗೆ ಕುಲಗೆಟ್ಟು ಪಾತರದವರ ಮನೆಯಿರುವದಕ್ಕಿಂತ ಮನೆಯಲ್ಲಿದ್ದು, ಲಗ್ನ ಮುಹೂರ್ತಗಳನ್ನು ಮಾಡಿಕೊಂಡು ಸುಖವಾಗಿ ಪ್ರಪಂಚ ಮಾಡಿದ್ದರೆ ನನ್ನ ತವರುಮನೆಗೆ ಎಷ್ಟು ಭೂಷಣವಿತ್ತು? ಅವನ ಹಣೇಬರಹವು; ಉಪಾಯವಿಲ್ಲ" ಎಂದು ಚಿಂತಿಸಿ ನಿಟ್ಟುಸಿರು ಬಿಡುತ್ತಿದ್ದಳು. ಹೀಗೆ ಅವಳು ದಿನಾಲು ವ್ಯಥೆಪಡುತ್ತಿರಲು, ಒಂದು ದಿನ ಅವಳು ಕೊಲ್ಹಾಪುರಕ್ಕೆ ಹೋಗಿ ತಮ್ಮ ಅಣ್ಣನನ್ನು ಕಂಡು ಬಳಿತಾಗಿ ಛೀ ಹಾಕಬೇಕೆಂದು ನಿಶ್ಚಯಿಸಿದಳು. ಆದರಂತೆ ಅವಳು ಕರವೀರವನ್ನು ಸೇರಿ ತಾರಾಬಾಯಿಯ ಮನೆಗೆ ಹೋದಳು. ಎಂದೂ ಬಾರದೆ ಇದ್ದ ತಂಗಿಯು ಈ ದಿನ ಅಕಸ್ಮಾತ್ತಾಗಿ ಬರಲು, ಅವಧೂತರು ಆದರದಿಂದ—ಯೋಗಾಬಾಯಿ ಇತ್ತ ಬಾ, ಇಲ್ಲಿ ಕುಳಿತುಕೋ ಎಂದು ನುಡಿದರು. ಅವಧೂತರು ಹೀಗೆ ಪ್ರೇಮದಿಂದ ಕರೆಯುತ್ತಿರಲು, ಯೋಗಾಬಾಯಿಯ ಸಿಟ್ಟು ಅವಸಾನಗೆಟ್ಟಿತು. ಅವಳು ಅವಧೂತರ ಸಮ್ಮುಖದಲ್ಲಿ ಕುಳಿತು—ವಷಟ್ಕಾರಗಳಿಗೆ ಆರಂಭಿಸಿದಳು— "ಅಣ್ಣಾ, ಇಲ್ಲ ಮರೆತೆನು ಕುಲಕಂಟಕಾ, ನೀನು ಯಾವ ವಂಶದಲ್ಲಿ ಹುಟ್ಟಿರುವೆಯೆಂಬದನ್ನು ಸ್ವಲ್ಪಾದರೂ ಸ್ಮರಿಸುವಿಯಾ? ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ನೀನು ಕುಲಮರ್ಯಾದೆಯನ್ನು ಲೆಕ್ಕಿಸದೆ ಇರಬಹುದೋ? ಹೀಗೆ ಜಾತಿ ಕುಲಗಳನ್ನು ತೊರೆದು, ಪಾತರದವಳ ಮನೆಯನ್ನು ಸೇರಿ ಯಾವ ಸೌಭಾಗ್ಯವನ್ನು ಸೂರೆಗೊಂಡೆ?

(ಕಣ್ಣಿಗೆ ನೀರು ತಂದು) ನಿನ್ನ ಈ ಸ್ಥಿತಿಯನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ನಿನ್ನ ನಿಂದೆಯನ್ನು ಕೇಳಿ ನನ್ನ ಜೀವವು ತಲ್ಲಣಿಸುತ್ತದೆ. ಹಾಯ್! ಹಾಯ್! ಅಣ್ಣಾ, ಇನ್ನು ಮೇಲಾದರೂ ಈ ವೇಶ್ಯೆಯ ಮನೆಯನ್ನು ಬಿಟ್ಟು ಜನ್ಮ ಸಾರ್ಥಕ್ಯವಾಗುವ ವಿಚಾರವನ್ನು ನೋಡಿಕೋ''

ಪ್ರಿಯ ವಾಚಕರೇ, ಕೇಳಿದಿರಾ, ಯೋಗಾಯಿಯ ಸದುಪದೇಶವನ್ನು! ಸೂರ್ಯನಿಗೆ ಉಷ್ಣೋಪಚಾರ ಮಾಡ ಹೋದಂತೆಯೂ, ಬೃಹಸ್ಪತಿಗೆ ಭಾಷಣಕೌಶಲ್ಯವನ್ನು ಕಲಿಸ ಹೋದಂತೆಯೂ ಯೋಗಾಯಿಯು ಅವಧೂತರಿಗೆ ಜನ್ಮಸಾರ್ಥಕ್ಯದ ರೀತಿಯನ್ನು ಕಲಿಸ ಹೋದಳು. ಅವಳ ಮಾತು ಮುಗಿಯುವ ವರೆಗೆ ಅವಧೂತರು ಪಿಟ್ಟೆಂದು ಮಾತಾಡಲಿಲ್ಲ. ಗಂಭೀರ ಭಾವದಿಂದ ಆಕೆಯ ವಷಟ್ಕಾರಗಳನ್ನು ಮನಸುಗೊಟ್ಟು ಕೇಳುತ್ತಿದ್ದರು. ಯೋಗಾಬಾಯಿಯು, ಬೈಗಳುಗಳನ್ನು ಮುಗಿಸಿ ಸುಮ್ಮನೆ ಕುಳಿತುಕೊಳ್ಳಲು ಅವಧೂತರು ಒಮ್ಮೆ ನಕ್ಕು ''ತಂಗೀ, ಇದಕ್ಕಾಗಿಯೆ ಬೇಕೆಂತ ಇಲ್ಲಿಗೆ ಬಂದೆಯೇನು? ಬಹಳ ಉತ್ತಮ ಕೆಲಸ ಮಾಡಿದೆ. ನಿನ್ನ ಹಿತಬು ಯನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ಏನು ಮಾಡಲಿ? ದೇವ ನನಗೆ ಜನ್ಮಸಾಫಲ್ಯ ಮಾಡಿಕೊಳ್ಳುವಂಥ ಸದ್ಬುದ್ಧಿಯನ್ನೇ ಕೊಡಲೊಲ್ಲನು.'' ಎಂದು ನುಡಿದು ಆಕೆಯ ಸಂಸಾರದಲ್ಲಿ ಒದಗಿದ ಸುಖದುಃಖಗಳನ್ನೆಲ್ಲ ಒಂದೂ ಉಳಿದಂತೆ ಹೇಳಿದರು. ಯಾರಿಗೂ ತಿಳಿಯದೆ ಇದ್ದಂಥ ಕೆಲವು ಗುಪ್ತ ಸಂಗತಿಗಳನ್ನು ಸಹ ಹೇಳಿಬಿಟ್ಟರು. ಯೋಗಾಬಾಯಿಯು ಬೆಚ್ಚಿಬಿದ್ದಳು. ತನ್ನ ಅಣ್ಣನು ಮನುಷ್ಯನಾಗಿರದೆ ಸಾಕ್ಷಾತ್ ಪರಮೇಶ್ವರನೇ ಮನುಷ್ಯರೂಪದಿಂದ ನಟಿಸುವನೆಂಬುದು ಅವಳಿಗೆ ಮನವರಿಕೆಯಾಯಿತು. ಅಣ್ಣನಿಗೂ ತನಗೂ ಭೆಟ್ಟಿಯಾಗದೆ ಎಷ್ಟೋ ವರುಷಗಳು ಕಳೆದು ಹೋಗಿರಲು, ತನ್ನ ಮನೆತನದ ಗುಪ್ತಸಂಗತಿಗಳನ್ನು ಇದ್ದಕ್ಕಿದ್ದಹಾಗೆ ಹೇಳುವದೆಂದರೆ ಮನುಷ್ಯಮಾತ್ರರಿಗೆ ಶಕ್ಯವೇ? ಎಂಬ ವಿಚಾರಗಳು ತಟ್ಟನೆ ಅವಳಲ್ಲಿ ಒಡಮೂಡಿದವು. ಆಗ ಅವಳು ಪಶ್ಚಾತ್ತಾಪಕ್ಕೆ ಗುರಿಯಾದಳು. ತನ್ನ ಮೂರ್ಖತನಕ್ಕೆ ಹಳಿದುಕೊಳ್ಳಹತ್ತಿದಳು. ಅವಳು ಅವಧೂತರ ಚರಣಗಳನ್ನು ಗಟ್ಟಿಯಾಗಿ ಹಿಡಿದು ನುಡಿದಳೇನಂದರೆ—''ಅಣ್ಣಾ, ನಾನು ಚಾಂಡಾಲಿನಿಯು; ಸುಮ್ಮನೆ ನಿನ್ನನ್ನು ನಿಂದಿಸಿದೆನು. ನೀನು ಪ್ರತ್ಯಕ್ಷ ಪರಮೇಶ್ವರನೇ ಇರುತ್ತೀ; ಮೂರ್ಖಳಾದ ನಾನು ನಿನಗೆ ಬುದ್ಧಿ ಕಲಿಸಬಂದೆನು. ನನ್ನ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊ! ಈ ದೀನಳ ಸಹಸ್ರ ಅಪರಾಧಗಳನ್ನು ಕ್ಷಮಿಸು.''

ಯೋಗಾಬಾಯಿಗೆ ಈ ರೀತಿಯನಾಗಿ ಸದ್ಬುದ್ಧಿಯು ಹುಟ್ಟಲು ಅವಧೂತರು ಆಕೆಯನ್ನು ಕುರಿತು—ಯೋಗೀ, ಈಶ್ವರೀ ಮಾಯೆಯು ಎಷ್ಟು ಆಗಾಧವಿದೆ ನೋಡು. ಒಂದು ಕ್ಷಣಹೊತ್ತಿನ ಮೊದಲು ನೀನು ನನ್ನನ್ನು ಬೈಯುತ್ತಿದ್ದಿ, ಆದರೆ ಅದೇ ನೀನು ಈಗ ನನ್ನನ್ನು ಸ್ತುತಿಸ ಹತ್ತಿರುವಿ. ಈ ನಿಂದಾ-ಸ್ತುತಿಗಳೆರಡೂ ನನಗೆ ಸಂಬಂಧಿಸಿರುವದಿಲ್ಲ. ಇದರಲ್ಲಿ ಯಾರು ಯಾರಿಗೆ ಕ್ಷಮೆ ಮಾಡಬೇಕು. ನನಗಾಗಲಿ, ನಿನಗಾಗಲಿ ಏನು ಸ್ವಾತಂತ್ರ್ಯವಿದೆ ಹೇಳು; ಸೂತ್ರಧಾರಕನಾದ ಈಶ್ವರನು ಪ್ರೇರಿಸಿದಂತೆ ಸಕಲ ಕಾರ್ಯಗಳು ಆಗುತ್ತಿರುತ್ತವೆ. ತಂಗೀ, ನಾನು ಪಾತರದವಳ ಮನೆಯಲ್ಲಿದ್ದದ್ದಕ್ಕೆ ಜನರು ನನಗೆ ಭ್ರಷ್ಟನೂ-ವಿಷಯ ಲಂಪಟನೂ ಎಂದೂ ಅನ್ನುತ್ತಿರಬಹುದು. ಹಾಗೆ ಜನರಿಂದ ಅನ್ನಿಸಿಕೊಳ್ಳಬೇಕೆಂತಲೇ ಈಶ್ವರ ಪ್ರೇರಣೆಯಿಂದ ಇಲ್ಲಿರುವೆನು. ಲೋಕದಲ್ಲಿ ಅಜ್ಞಾನವು ತುಂಬಿಕೊಂಡದ್ದರಿಂದ ಆ ಅಜ್ಞಾನಕೂಪದಲ್ಲಿ ಬಿದ್ದ ಮಾನವರು ಯಾವದನ್ನೂ ತಿಳಿಯದೆ ಮನಬಂದಂತೆ ಕಲ್ಪಿಸುವರು. ಆದಕ್ಕೆ ಯಾರೇನು ಮಾಡುವರು? ತಂಗೀ, ಬ್ರಹ್ಮಸ್ವರೂಪದಲ್ಲಿ ಜ್ಞಾನಿಗಳು-ಅಜ್ಞಾನಿಗಳು ಎಂಬ ಭೇದವೇ ಇಲ್ಲ. ಮಾಯೆಯಲ್ಲಿ ಮಾತ್ರ ಈ ಭೇದವಿರುತ್ತದೆ. ನಿನಗೆ ಈಶ್ವರಕೃಪೆಯಿಂದ ಮಾಯೆಯ ಸ್ವರೂಪವು ಮುಂದೆ ಅನುಭವಕ್ಕೆ ಬರುವದು. ಆದಕ್ಕೆ ನೀನು ಪಾತ್ರಳೂ ಇರುತ್ತೀ; ಇರಲಿ; ಈಗ ಆ ವಿಷಯದಲ್ಲಿ ನಿನಗೆ ಹೆಚ್ಚು ಹೇಳುವದು ಅವಶ್ಯವಿಲ್ಲ ಎಂದು ನುಡಿದರು.

ಅವಧೂತರ ಈ ಅಧ್ಯಾತ್ಮಪರ ಭಾಷಣವನ್ನು ಕೇಳಿ ಯೋಗಾಬಾಯಿಯು ಸಂತುಷ್ಟಳಾದಳು. ಆಕೆಯು ಅತ್ಯಂತ ಭಕ್ತಿಯಿಂದ ಅವಧೂತರ ಸೇವೆಯನ್ನು ಮಾಡಲಾರಂಭಿಸಿದಳು. ಅವಧೂತರ ಐಶ್ವರ ತೇಜಸ್ಸು ಅನುಭವಕ್ಕೆ ಬಂದಹಾಗೆಲ್ಲ ಅವಳಲ್ಲಿ ವೈರಾಗ್ಯವು ಅಂಕುರಿಸಿತು. ಮನೆ ಮಾರುಗಳನ್ನು ತೊರೆದು ಅವಧೂತರ ಸನ್ನಿಧಿಯಲ್ಲಿಯೇ ಇರಬೇಕೆಂದು ಅವಳಿಗೆ ಉತ್ಕಟೇಚ್ಛೆಯುಂಟಾಯಿತು. ಆದರೆ ಅವಧೂತರು ಆಕೆಗೆ ಜ್ಞಾನೋಪದೇಶವಮಾಡಿ ಅವಳ ಅಜ್ಞಾನವನ್ನು ಕತ್ತರಿಸಿ ಪುನಃ ಅವಳನ್ನು ಸಂಸಾರಕ್ಕೆ ಕಳುಹಿದರು. ಆಕೆಯು ಸದಾ ಅವಧೂತರನ್ನು ಚಿಂತಿಸುತ್ತಿದ್ದು, ಭೋಗ ತೀರಿದ ಮೇಲೆ ಪರಬ್ರಹ್ಮದಲ್ಲಿ ಐಕ್ಯಳಾದಳು. ಆ ಮಹಾತ್ಮರ ಬೆನ್ನಿಲೆ ಬಿದ್ದ ಆ ಯೋಗಾಬಾಯಿಯು ಧನ್ಯಳೆನಿಸಿಕೊಂಡಳು.

## ೯ನೆಯ ಪ್ರಕರಣ.

### ಸಮಕಾಲೀನ ಸ್ಥಿತಿ.

ಶ್ರೀ ಅವಧೂತರ ಅವತಾರವು ಪ್ರಕಟವಾದಕಾಲದ ಪರಿಸ್ಥಿತಿಯು ಅವರ ಕೆಲವು ಚರಿತ್ರಗಳಿಂದ ವಿಶದವಾಗಿ ತಿಳಿದು ಬರುತ್ತದೆ. ಕಾಮನಾಪರ ಭಕ್ತರು ಎಂದಿನಿಂದಲೂ ಇದ್ದವರಾದುದರಿಂದ ಅವಧೂತರು ಯಾರ ಯಾರ ಯಾವ ಯಾವ ಕಾಮನೆಗಳನ್ನು ಪೂರ್ಣಪಡಿಸಿರುವರೋ ಆ ಆ ಕಾಮನೆಗಳಿಂದಲೇ ಪರಿಸ್ಥಿತಿಯನ್ನು ಊಹಿಸಲು ಶಕ್ಯವಾಗಿದೆ. ಈಗಿನ ಕಾಲದಲ್ಲಿ ನೌಕರಿಯ ಹುಚ್ಚು ಎಷ್ಟು ಹೆಚ್ಚಿರುವದೆಂಬದು ಪ್ರತ್ಯಕ್ಷಗೋಚರಿಸುವ ವಿಷಯವಾಗಿದೆಯಷ್ಟೇ; ಅವಧೂತರ ಕಾಲದಲ್ಲಾದರೂ ನೌಕರಿಯ ಅಭಿಲಾಷೆಯನ್ನು ಬಹು ಜನರು ಮಾಡುತ್ತಿದ್ದರು. ದೇಶವು ಕಂಗಾಲಸ್ಥಿತಿಗೆ ಬರಹತ್ತಿದಾಗಲೇ ಹೊಟ್ಟೇ ಹರಿಯುವದಕ್ಕಾಗಿ ದಾಸ್ಯವೃತ್ತಿಯನ್ನು ಕೈಕೊಳ್ಳಬೇಕೆಂದು ಜನರಲ್ಲಿ ಪ್ರವೃತ್ತಿಯುಂಟಾಗುತ್ತದೆ. ಅವಧೂತರ ಕಡೆಗೆ ಒಮ್ಮೆ ಒಬ್ಬ ತರುಣನು ಬಂದನು. ಅವನು ಅತ್ಯಂತ ದರಿದ್ರನು. ಸರಕಾರಿಯ ನೌಕರಿಯ ಹೊರತು ಹೊಟ್ಟೆಸಾಗುವದಿಲ್ಲೆಂದು ಅವನು ಖಂಡಿತವಾಗಿ ತಿಳಿದುಕೊಂಡಿದ್ದನು. ಆದ್ದರಿಂದ ನೌಕರಿಯ ವಿಷಯವಾಗಿ ಶಕ್ತಿಮೀರಿ ಪ್ರಯತ್ನಮಾಡಿದನು. ಆದರೆ ಅವನಿಗೆ ಅದು ಸಿಗದಾಯಿತು. ದೇಶವು ಇನ್ನು ನಿಕೃಷ್ಟಾವಸ್ಥೆಗೆ ಹೋಗಬೇಕಾದ ಯೋಗವಿದ್ದಾಗ ಯಾವ ತರುಣನಿಗೂ ಪರದಾಸ್ಯಪಂಕದಲ್ಲಿ ಬಿದ್ದು, ಆಯುಷ್ಯವನ್ನು ಹಾಳುಮಾಡಿಕೊಳ್ಳಬಾರದೆಂಬ ಸುಬುದ್ಧಿಯು ಉತ್ಪನ್ನವಾಗುವದಿಲ್ಲ. ಪರದಾಸ್ಯವೇ ಅವರಿಗೆ ಪರಮಾಮೃತವಾಗಿ ಭಾಸವಾಗುವದು. ಅದರಂತೆ ರಾಮಚಂದ್ರನೆಂಬ ಆ ತರುಣನಿಗೂ ನೌಕರಿಯ ಭೂತವು ಬಡಿದುಕೊಂಡದ್ದರಲ್ಲಿ ಆಶ್ಚರ್ಯವಿಲ್ಲ. ಅವನು ಅವಧೂತರಿಗೆ ಶರಣುಹೋಗಿ ಎಲ್ಲಿಯಾದರೂ ನೌಕರಿಯು ದೊರೆಯುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಬ್ರಾಹ್ಮಣನ ದಾರಿದ್ರ್ಯವನ್ನು ನೋಡಿ ಅವಧೂತರು ಕಳವಳಗೊಂಡರು. ಅವನು ಮತ್ತೇನನ್ನಾದರೂ ಕೇಳಿಕೊಂಡಿದ್ದರೆ ಅವನ ಕೋಟಿಕಲ್ಯಾಣವಾಗುತ್ತಿತ್ತು. ಆದರೆ ಅವನ ದುರ್ದೈವವು ಹಾಗೆ ಮಾಡಗೊಡಲಿಲ್ಲ. ಅವನು ಕ್ಷುದ್ರ ನೌಕರಿ

ಯನ್ನು ಬೇಡಿಕೊಂಡನು. ಅವಧೂತರು ಬೇಡಿಕೆಯಂತೆ ಫಲಕೊಡುವ ಕಲ್ಪತರು ವಿನೋದಾದಿಯಲ್ಲಿದ್ದದರಿಂದ ಅವನನ್ನು ಕುರಿತು—"ತಮ್ಮಾ, ನಿನಗೆ ನೌಕರಿಯು ಬೇಕೆ? ನಾಳಿಲ್ಲ ನಾಡದು ನಿನಗೆ ಹುಕುಮು ದೊರೆಯುವದು ಚಿಂತಿಸಬೇಡ" ಎಂದು ಹೇಳಿದರು. ರಾಮಚಂದ್ರನು ಪರಮಸಂತೋಷದಿಂದ ಮನೆಗೆ ತೆರಳಿದನು. ಶ್ರೀ ಅವಧೂತರ ವಚನದಂತೆ ಆತನಿಗೆ ಶಾಳಾಖಾತೆಯಲ್ಲಿ ನೌಕರಿಯು ದೊರೆತ ಬಗ್ಗೆ ಅಧಿಕಾರಿಗಳಿಂದ ಹುಕುಮು ಬಂದಿತು. ಆತನು ಅವಧೂತರನ್ನು ಕೊಂಡಾಡುತ್ತ ಒಂದು ಹಳ್ಳಿಯ ಶಾಲೆಯಲ್ಲಿ ಶಿಕ್ಷಕನಾಗಿ ನಡೆದನು. ಮುಖ್ಯವಾಗಿ ನೆನಪಿಡತಕ್ಕ ಸಂಗತಿಯೆಂದರೆ ರಾಮಚಂದ್ರನಿಗೆ ನೌಕರಿಯನ್ನು ಕೊಡಿಸಿ ತಮ್ಮ ಐಶ್ವರ ತೇಜಸ್ಸನ್ನು ಅವಧೂತರು ಪ್ರಕಟಗೊಳಿಸಿದರು. ಆದರೆ ರಾಮಚಂದ್ರನು ನೌಕರಿಯನ್ನಲ್ಲದೆ ಮತ್ತೊಂದನ್ನು ಬೇಡಿಕೊಂಡು ವ್ಯಕ್ತಿಯ ಸ್ವತಂತ್ರಜೀವನದ ಮಹತ್ವವನ್ನು ತೋರಿಸಿಕೊಡಲಿಲ್ಲ. ರಾಮಚಂದ್ರನಂತೆ ಎಷ್ಟೋ ಜನರು ಅವಧೂತರಿಗೆ ಶರಣು ಬಂದು ನೌಕರಿಯನ್ನು ಸಂಪಾದಿಸಿದರು. ಆದ್ದರಿಂದ ಆ ಕಾಲಕ್ಕೆ ನೌಕರಿಯು ಸಿಗುವದು ದುರ್ಲಭವಿದ್ದರೂ ಜನರು ಹಲವು ಪ್ರಯತ್ನಗಳಿಂದ ನೌಕರಿಯಲ್ಲಿ ಸೇರಿ ತಮ್ಮ ಅವನತಿಯನ್ನು ಸಾಧಿಸಿಕೊಳ್ಳಲು ಹವಣಿಸುತ್ತಿದ್ದರೆಂಬದು ಸಿದ್ಧವಾಗುತ್ತದೆ.

ಅವಧೂತರ ಕಾಲದಲ್ಲಿ ರಾಮಚಂದ್ರನಂಥ ಅಲ್ಪ ಸಂತೋಷಿಗಳ ಪ್ರಮಾಣವು ಹೆಚ್ಚಿದ್ದರೂ ಮಹತ್ವಾಕಾಂಕ್ಷಿಯ ಕೆಲಜನರೂ ಇದ್ದರು. ಒಂದು ದಿನ ಒಬ್ಬ ಗೃಹಸ್ಥನು ಅವರ ಬಳಿಗೆ ಬಂದು "ನಾನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಜಪಾನಕ್ಕೆ ಹೋಗಬೇಕೆಂದು ಮಾಡಿದ್ದೇನೆ. ಬಡವನಾದ ನನಗೆ ದ್ರವ್ಯಾನುಕೂಲತೆಯಿಲ್ಲದ್ದರಿಂದ ಸನ್ನಿಧಿಗೆ ಬಂದಿದ್ದೇನೆ" ಎಂದು ನುಡಿದನು. ಅವನ ಮಾತು ಕೇಳಿ ಅವಧೂತರು ನಕ್ಕರು; ಮತ್ತು ಆತನನ್ನು ಕುರಿತು—"ತಮ್ಮಾ ನಾನು ಶ್ರೀಮಂತನಲ್ಲ, ಸಂಸ್ಥಾನಿಕನಲ್ಲ, ಕೇವಲ ಪರಾನ್ನಪುಷ್ಟನು. ಇಂಥ ನನ್ನಲ್ಲಿ ದ್ರವ್ಯ ಕೇಳಬಂದರೆ ಹ್ಯಾಗೆ ಸಿಕ್ಕೀತು? ಆದರೂ ಚಿಂತೆಯಿಲ್ಲ. ನಿನ್ನ ಹಿತಕ್ಕೋಸ್ಕರ ಒಂದು ಸಂಗತಿಯನ್ನು ಹೇಳುತ್ತೇನೆ ಕೇಳು. ನೀನು ಈಶ್ವರನ ಸ್ಮರಣೆ ಮಾಡಿ ಇಂಥ ದಿನ ಜಪಾನಕ್ಕೆ ಹೊರಡು ದ್ರವ್ಯವೆಲ್ಲಿಂದು ಅನುಮಾನ ಮಾಡಬೇಡ; ನೀನು ಹೊರಡುವ ಆ ಮುಹೂರ್ತಪ್ರಭಾವದಿಂದ ಪರಮೇಶ್ವರನು ನಿನಗೆ ಅನುಕೂಲ ಮಾಡಿ ಕೊಡುವನು" ಎಂದು ಹೇಳಿದರು. ಗುರುವಚನದಲ್ಲಿ ವಿಶ್ವಾಸವನ್ನಿಟ್ಟು ಆ ಗೃಹಸ್ಥನು ಮುಹೂರ್ತಕ್ಕೆ ಸರಿಯಾಗಿ ಜಪಾನಕ್ಕೆ ಹೊಂಟನು. ದಾರಿಯಲ್ಲಿ ಅವನಿಗೆ ಒಬ್ಬ

ಶ್ರೀಮಂತನ ಜೊತೆ ಸಿಕ್ಕು ಸಿರಾಯಾಸದಿಂದ ಅವನು ಬಿಏಆನವನ್ನು ಸೇರಿದನು. ಮತ್ತು ಅಲ್ಲಿಯೂ ಪ್ರಯಾಸವಿಲ್ಲದೆ ವಿದ್ಯಾಭ್ಯಾಸ ಮುಗಿಸಿಕೊಂಡು ಸ್ವದೇಶಕ್ಕೆ ಬಂದನು. ಮತ್ತು ಕಲಕತ್ತೆಯಲ್ಲಿ ಸರಕಾರೀ ನೌಕರಿಯೊಂದನ್ನು ಹಿಡಿದು, ಉಪಜೀವಿಸಹತ್ತಿದನು.

ಈ ಮೇಲೆ ಉಲ್ಲೇಖಿಸಿದ ಉದಾಹರಣೆಗಳಿಂದ ಅವಧೂತರ ಸಮಕಾಲೀನ ಪರಿಸ್ಥಿತಿಯು ಕೇವಲ ಸರಕಾರೀ ನೌಕರಿಗೆ ಪ್ರಾಧಾನ್ಯತೆಯನ್ನು ಕೊಟ್ಟಿತ್ತೆಂಬದು ಸ್ಪಷ್ಟವಾಗುತ್ತದೆ. ಹೀಗೆ ನೌಕರಿಯ ಹುಚ್ಚಿನಿಂದ ಜನರು ಒಂದು ಕಡೆಗೆ ಲೌಕಿಕದಲ್ಲಿ ಅವನತಿಯನ್ನು ಹೊಂದುತ್ತಿದ್ದರೆ ಮತ್ತೊಂದು ಕಡೆಗೆ ವಿಷಯೋಪಭೋಗದ ಹುಚ್ಚಿನಿಂದ ಆಧ್ಯಾತ್ಮಿಕ ವಿಷಯದಲ್ಲಿ ಅವನತಿಯನ್ನು ಹೊಂದುತ್ತಿದ್ದರು. ಅವಧೂತರ ಭಕ್ತರಲ್ಲಿ ಕಾಮುಕರಾದವರೇ ವಿಶೇಷವಾಗಿದ್ದರು. ಪರಮಾತ್ಮನು ಸಗುಣರೂಪದಿಂದ ಪ್ರಕಟನಾಗಿರುವಾಗ ಮೋಕ್ಷ ಸಾಮ್ರಾಜ್ಯವನ್ನು ಸೂರೆಗೊಳ್ಳಬೇಕೆಂಬ ಇಚ್ಛೆಯು ಯಾರಿಗೂ ಹುಟ್ಟಲಿಲ್ಲ ಇಲ್ಲವೆನ್ನಲಿಕ್ಕೆ ಯೋಗಾಬಾಯಿಯಂಥ ಕೇವಲ ಕೈಬೆರಳಿನಿಂದೆಣಿಸುವಷ್ಟು ಜನರು ಮಾತ್ರ ಆಧ್ಯಾತ್ಮವಿಷಯ ಪ್ರಿಯರಾದರು.

ಹೀಗೆ ಭಕ್ತರಾದವರ ಸ್ಥಿತಿಯು ಇರುತ್ತಿರಲು ಸದ್ಭಕ್ತರಾಗದವರು ತಮ್ಮ ಸ್ವಭಾವಕ್ಕನುಸರಿಸಿ ಅವಧೂತರ ಮೇಲೆ ಎಷ್ಟೋ ಕುಶಬ್ದಗಳನ್ನು ಹೊರಿಸುತ್ತಿದ್ದರು. ಕಲಿಕಾಲವು ಕೆಟ್ಟದೂ, ಆಶಾಪ್ರಾಧಾನ್ಯವಾದದ್ದೂ ಎಂದು ತಿಳಿದೇ ಆ ಮಹಾತ್ಮರು ಪರಮಭಕ್ತಳಾದ ತಾರಾಬಾಯಿಯ ಮನೆಯನ್ನು ತಮ್ಮ ವಾಸಕ್ಕಾಗಿ ಗೊತ್ತುಮಾಡಿಕೊಂಡಿದ್ದರು. ಯಾಕೆಂದರೆ ಸಾಧುತ್ವದ ದೈವೀ ತೇಜಸ್ಸು ಬೈಲಿಗೆ ಬೀಳಲು ಭಾವಿಕರೂ ಅಭಾವಿಕರೂ ಅದನ್ನು ಮುತ್ತುವರು. ಉಜ್ವಲವಾದ ಕೆಂಡವಿದ್ದರೆ ಅದರ ಕಡೆಗೆ ಎಲ್ಲರ ಲಕ್ಷವು ಸ್ವಾಭಾವಿಕವಾಗಿಯೇ ಹೋಗುವದು ಆದರೆ ಅದೇ ಕೆಂಡವು ಬೂದಿಯಿಂದ ಮುಚ್ಚಲ್ಪಟ್ಟಿದ್ದರೆ ಅದರ ಕಡೆಗೆ ಯಾರ ಲಕ್ಷವೂ ಹೋಗುವದಿಲ್ಲ. ಅದರಂತೆ ಜನರದೃಷ್ಟಿಗೆ ಪ್ರತಿಬಂಧವಾಗುವಂಥ ಯಾವದಾದರೊಂದು ಮಾಲಿನ್ಯಭಾವವುಳ್ಳ ಹೊದಿಕೆಯು ಸಜ್ಜನರ ಮೇಲೆ ಇದ್ದರೆ ಅಭಾವಿಕರ ದೃಷ್ಟಿಯು ಅವರ ಕಡೆಗೆ ಪ್ರೇಮದಿಂದ ತಿರುಗುವದಿಲ್ಲ. ವಿಪರೀತಸ್ಥಿತಿಯಲ್ಲಿ ತಿರುಗುವದ. ಇದೇ ಕಾರಣದಿಂದಲೇ ಅವಧೂತರು ವಾರಾಂಗನೆಯ ನೆರೆಯನ್ನು ಬಯಸಿದ್ದರು.

ವಿಷಯ ಲೋಲುಪರಾದ ಜನರು, ಅವಧೂತರು ವಿಷಯಲೋಲುಪರೆಂದು ಕೂಗಹತ್ತಿದ್ದನ್ನು ನೋಡಿದರೆ ಅವರ ಕ್ಷುದ್ರತನವು ಎಷ್ಟೆಂಬದು ವ್ಯಕ್ತವಾಗುತ್ತದೆ. ಯಾವ ಮಹಾತ್ಮರು ಬ್ರಹ್ಮಾನಂದದಲ್ಲಿ ಸರ್ವದಾ ನಿಮಗ್ನರಾಗಿರುವರೋ ಮತ್ತು ಯಾರು ಜಗತ್ತು ಮಿಥ್ಯವೆಂದು ತಮ್ಮ ಶಿಷ್ಯರಿಗೆ ಸದುಪದೇಶ ಮಾಡುತ್ತಲಿರುವರೋ ಮತ್ತು ಯಾವ ಮಹಾತ್ಮರು ಅನಂತ ದೈವೀಲೀಲೆಗಳನ್ನು ತೋರ್ಪಡಿಸಿ ಪ್ರತ್ಯಕ್ಷ ದತ್ತಾವತಾರವೆಂದೆನಿಸಿಕೊಂಡರೋ, ಮತ್ತು ಯಾರು ರಾಗದ್ವೇಷಾದಿಗಳಿಂದ ವರ್ಜಿತರಾಗಿ ಅರಿಷಡ್ವರ್ಗವೆಂಬ ದುರ್ಗದ ಮೇಲೆ ವಿಜಯಧ್ವಜವನ್ನು ನಿಲ್ಲಿಸಿದ್ದರೋ ಅಂಥ ಮಹಾತ್ಮರು ಕ್ಷುದ್ರ ಸ್ತ್ರೀಸುಖಕ್ಕೆ ಮೆಚ್ಚಿದ್ದರೆನ್ನುವದು ಕೇವಲ ಕುತ್ಸಿತ ವಿಚಾರವಾಗಿ ಪರಿಣಮಿಸುತ್ತದೆ. ಅಭಾವಿಕರ ಈ ಕುತ್ಸಿತತನವು ಸಜ್ಜನರಿಗೆ ಪಥ್ಯವಾಗಿಯೇ ಪರಿಣಮಿಸುತ್ತದೆ. ಯಾಕಂದರೆ ಜನಸಮ್ಮರ್ದವು ಹೆಚ್ಚಾಗಿ ಅಪಾತ್ರರಿಗೂ ಫಲಕೊಡುವ ಪ್ರಸಂಗವು ಅವರಿಗೆ ತಪ್ಪುವದು. ಯಾರು ಆಸ್ತಿಕರಿರುವರೋ ಮತ್ತು ಯಾರ ಪದರಿನಲ್ಲಿ ಸಜ್ಜನರನ್ನು ಗುರ್ತಿಸುವಷ್ಟು ಪುಣ್ಯಾಂಶವು ಇರುವದೋ ಅವರಷ್ಟೇ ಮಾತ್ರ ಸಜ್ಜನರ ಪ್ರಭಾವವನ್ನು ತಿಳಿಯುವರು; ಮತ್ತು ಅನುಗ್ರಹಕ್ಕೆ ಪಾತ್ರರಾಗುವರು.

ಅವಧೂತರು ಡಾಂಭಿಕ ಕರ್ಮಠತನಕ್ಕೆ ಸೇರುತ್ತಿದ್ದಿಲ್ಲ. ಅವರ ಕಾಲದಲ್ಲಿ ಡಾಂಭಿಕ ಕರ್ಮಠರ ಸಂಖ್ಯೆಯು ಹೆಚ್ಚಾಗಿತ್ತು. ಆದ್ದರಿಂದ ಅವರು ಭಕ್ತಿಪ್ರಧಾನವಾದ ಪಂಥವನ್ನು ಹಿಡಿದು ಕರ್ಮವನ್ನು ತಿರಸ್ಕರಿಸಿದರು.

# ೧೧ನೆಯ ಪ್ರಕರಣ.

## ದಿನಚರ್ಯೆಯೂ-ಗೋಮಾತೆಯ ಮಹತ್ವವೂ.

ಶ್ರೀ ಕೃಷ್ಣಾವಧೂತರು ಕರ್ಮಕಾಂಡವನ್ನು ಕಟ್ಟಿ ಇಟ್ಟಿದ್ದರೂ ಗಾಯತ್ರಿಯ ಸೇವೆಯಲ್ಲಿ ಬಲು ಉತ್ಸುಕತೆಯುಳ್ಳವರಾಗಿದ್ದರು. ಅವರು ಮನೆಯಲ್ಲಿ ಒಂದು ಆಕಳನ್ನು ಸಾಕಿದ್ದರು. ಪ್ರತಿನಿತ್ಯ ಅದರ ಸೇವೆಯನ್ನು ತಾವೇ ಕೈಮುಟ್ಟ ಮಾಡುತ್ತಿದ್ದರು. ಗೋಮಯ-ಗೋಮೂತ್ರಗಳನ್ನೂ ಗೋಕ್ಷೀರಗಳನ್ನೂ ಬಹು ಆಸ್ಥೆಯಿಂದ ಸೇವಿಸುತ್ತಿದ್ದರು, ದಿನಾಲು ಬ್ರಾಹ್ಮ್ಯ ಮುಹೂರ್ತದಲ್ಲಿ ಏಳುವರು. ಅವರ ಮೊದಲನೆಯ ಕೆಲಸವೆಂದರೆ ಗಾಯತ್ರಿಯ ಸಮಾಚಾರವು. ಅವರು ಮೊದಲು ಕೊಟ್ಟಿಗೆಗೆ ಹೋಗಿ ಆಕಳಕಾಲೊಳಗಿನ ಕಸ ಗೂಡಿಸಿ ಹಕ್ಕಿಯನ್ನು ಜಳಜಳ ಮಾಡುತ್ತಿದ್ದರು. ಬಳಿಕ ಅದರ ಮೈ ತಿಕ್ಕಿ ನವಣಿ-ಹೊಟ್ಟು-ಕಣಿಕೆಮೊದಲಾದ ಆಹಾರಪದಾರ್ಥಗಳಿಂದ ಅದನ್ನು ತೃಪ್ತಿಗೊಳಿಸುತ್ತಿದ್ದರು. ಬಳಿಕ ತಮ್ಮ ಪ್ರಾತರ್ವಿಧಿಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಅವರಿಗೆ ಅನುಷ್ಠಾನವೆಂದರೆ ಗೋಮಾತೆಯ ಸೇವೆಯೇ ಆಗಿತ್ತು. ತಮ್ಮ ಬಳಿಗೆ ಬಂದವರಿಗೆ ಅವರು ಗಾಯತ್ರಿಯ ಮಹತ್ವವನ್ನು ವಿಶದವಾಗಿ ಹೇಳುತ್ತಿದ್ದರು. ಆಕಳವು ಪರಮ ಪೂಜ್ಯವೆಂದೂ ಅದರ ಸೇವೆ ಮಾಡಿದರೆ ಸಮಸ್ತ ದೇವತೆಗಳ ಸೇವೆ ಮಾಡಿದ ಹಾಗಾಗುವದೆಂದೂ ಹೇಳುತ್ತಿದ್ದರು. ಮತ್ತು ಚಮ್ಮೊಮ್ಮೆ ಭಕ್ತರನ್ನು ಕುರಿತು—ಅಪ್ಪಗಳಿರಾ, ಆಕಳವು ಸಾಮಾನ್ಯವೆಂದು ತಿಳಿಯಬೇಡಿರಿ. ಅದು ಪ್ರತ್ಯಕ್ಷ ಕಾಮಧೇನುವೇ ಸರಿ. ಅದರ ಪ್ರತಿಯೊಂದು ಅವಯವಗಳಲ್ಲಿ ದೇವತೆಗಳ ವಾಸವಿರುವದು. ಈಗ ದುರ್ಜನರು ಆಕಳಗಳನ್ನು ಎಗ್ಗಿಲ್ಲದೆ ಸಂಹರಿಸುತ್ತಿರುವರು. ಇವರನ್ನು ರಾಕ್ಷಸರೆಂದೇ ಕರೆಯಬಹುದು. ಯಾಕೆಂದರೆ ಕ್ಷೀರ-ದಧಿ-ಘೃತ ಮೊದಲಾದ ಅಮೃತೋಪಮ ಪದಾರ್ಥಗಳನ್ನು ಒದಗಿಸುವ, ಹಾಗು ಕೃಷಿಗೆ ಮೂಲ ಕಾರಣವಾದ ಎತ್ತುಗಳನ್ನು ಒದಗಿಸಿಕೊಡುವ ಲೋಕೋಪಕಾರಿಯಾದ ಆಕಳವನ್ನು ಕ್ರೂರತನದಿಂದ ಸಂಹರಿಸುವದು ಮನುಷ್ಯಕೃತಿಯಾಗಿರುವದಿಲ್ಲ. ಆದ್ದರಿಂದ ಸುಜನರೇ, ಆಕಳ ಹಿಂಸೆಯನ್ನು ಕಣ್ಣಿನಿಂದ ನೋಡಬೇಡಿರಿ, ನಿಮ್ಮ ಮನೆಯೊಳಗಿನ ಆಕಳನ್ನು ಕಟಕರ ಮನೆಗೆ

ಕೊಡಬೇಡಿರಿ. ಗೋಸಂಹಾರವು ಭಯಂಕರ ದ್ರೋಹವಿರುವದು. ಗೋಸಂರಕ್ಷಣವು ಧರ್ಮದ ಒಂದು ಅಂಗವಾಗಿರುವದು. ಹಾಲುಬಹಳ ಹಿಂಡುವವೆಂದು ಲೋಕದವರು ಎಮ್ಮೆಗಳನ್ನು ಆದರಿಸಿ ಆಕಳಕ್ಕೆ ಬಡಿದಂಟುಗಳನ್ನು ಹಾಕುವರು; ಧರ್ಮದೃಷ್ಟಿಯಿಂದ ನೋಡಿದರೆ ಇದು ರತ್ನವನ್ನು ತಿರಸ್ಕರಿಸಿ ಕಾಜನ್ನು ಸಂದುಕದಲ್ಲಿರಿಸಿದಂತಾಗುತ್ತದೆ. ಶ್ರೇಯಃಕಾಂಕ್ಷಿಗಳು ಪಾಪಪುಣ್ಯಗಳನ್ನು ತಿಳಿದು ಆಚರಿಸಬೇಕು. ಗೋವಿಗೆ ಸಮನಾದದ್ದು ಸಿಗುವದು ದುರ್ಲಭವು. ಅದು ಕೇವಲ ಸಾಧುವಾದ ಪ್ರಾಣಿಯು; ಮೂವತ್ತು ಮೂರುಕೋಟಿ ದೇವತೆಗಳು ಆಕಳ ಶರೀರದಲ್ಲಿ ವಾಸಿಸುತ್ತಿರುವರು. ಆದ್ದರಿಂದ ಆಕಳಸಂರಕ್ಷಣವನ್ನು ಮಾಡುವದು ಪುಣ್ಯಕರವಿರುತ್ತದೆ" ಎಂದು ಬೋಧಿಸುತ್ತಿದ್ದರು. ಆ ಮಹಾತ್ಮರ ಸದುಪದೇಶದಿಂದ ಎಷ್ಟೋ ಜನರು ಆಕಳ ಮಹತ್ವವನ್ನು ತಿಳಿದು ಅದರ ಸೇವೆಯಲ್ಲಿ ನಿರತರಾದರು.

ಮಹಾತ್ಮರಾದ ಕೃಷ್ಣಾವಧೂತರು ಪ್ರತಿನಿತ್ಯ ಬಹುಭಕ್ತಿಪೂರ್ವಕವಾಗಿ ಗೋಮೂತ್ರವನ್ನು ಸೇವಿಸುತ್ತಿದ್ದರು; ಜನ್ಮತಃ ಪವಿತ್ರತಮರಾದ ಆ ಮಹಾನುಭಾವರು ಕೇವಲ ಲೋಕಕ್ಕೆ ಧರ್ಮವನ್ನು ತೋರಿಸುವದಕ್ಕಾಗಿ ಈ ರೀತಿಯಾದ ಗಾಯಿತ್ರಿಯ ಉಪಾಸನೆಯಲ್ಲಿ ತೊಡಗಿದ್ದರು. ದೇಹವು ಪರಿಶುದ್ಧವಾಗಲಿಕ್ಕೆ ಅಂದರೆ ದೋಷರಹಿತವಾಗಲಿಕ್ಕೆ ಪಂಚಗವ್ಯಸೇವನೆಯನ್ನು ಮಾಡಬೇಕೆಂದು ಧರ್ಮಶಾಸ್ತ್ರಕಾರರ ವಚನವಿರುವದು.. ಒಂದು ವಿವಕ್ಷಿತಪ್ರಮಾಣದಿಂದ ದಿನಾಲು ಗೋಮೂತ್ರವನ್ನು ಪ್ರಾಶನಮಾಡಿದರೆ ಮನುಷ್ಯನ ಆರೋಗ್ಯಸಂಪತ್ತು ಹೆಚ್ಚುವದೆಂದು ಭಿಷಗ್ವರ್ಯರು ಹೇಳುವರು. ಆದ್ದರಿಂದ ಗೋರಸವು ಮನುಷ್ಯಮಾತ್ರರಿಗೆ ಸರ್ವಪ್ರಕಾರಗಳಿಂದಲೂ ಕ್ಷೇಮಕರವಾದದ್ದೆಂದು ಹೇಳಲಾಗುವದು. ಪ್ರಸ್ತುತಕಾಲದಲ್ಲಿ ಆಕಳುಗಳ ಅಭಾವವಾಗಿರುವದರಿಂದ ಗೋರಸವು ದೊರೆಯದಂತಾಗಿರುವದು, ಈ ಗೋರಸವು ಹ್ಯಾಗೆ ಅಭಾವವಾಗುತ್ತ ನಡೆಯಿತೋ ಹಾಗೆ ನಮ್ಮ ಜನರ ಬುದ್ಧಿಮತ್ತತೆಯಾದರೂ ಕಳೆಗುಂದಹತ್ತಿರುವದು; ದೇಹಾರೋಗ್ಯವು ತೊಲಗಹತ್ತಿರುವದು; ಇದು ದೇಶದ ದುರ್ದೈವವೆಂದೇ ಹೇಳಲಾಗುವದು. ಕೃಷ್ಣಾವಧೂತರ ಕಾಲದಲ್ಲಿ ಗೋಸಂಹಾರವು ವಿಶೇಷವಾಗಿ ಆಗಹತ್ತಿತ್ತು. ಜನರೆಲ್ಲರೂ ಧರ್ಮಲಂಡತನದಿಂದ ಗಾಯಿತ್ರಿಯಮೇಲೆ ನಿರ್ದಯರಾಗಿದ್ದರು. ಆಕಳಗಳನ್ನು ಮಾರಿಕೊಂಡರೆ ತಾಯಿಯನ್ನು ಮಾರಿಕೊಂಡಷ್ಟು ದೋಷಬರುವದೆಂಬ ವೃದ್ಧವಚನಗಳನ್ನು ಮರೆತುಬಿಟ್ಟಿದ್ದರು. ಉಚ್ಚವರ್ಣದವರೂ ಧರ್ಮಜ್ಞರೂ ಆದ ಬ್ರಾಹ್ಮಣರು ಸಹದ್ರವ್ಯದ ಆಶೆಗಾಗಿ ಆಕಳುಗಳನ್ನು ಮಾರಿಕೊಳ್ಳಹತ್ತಿದ್ದರು.

ಹೀಗೆಸರ್ವತ್ರದಲ್ಲಿ ಗಾಯಿತ್ರಿಯ ವಿಷಯದಲ್ಲಿ ಅನಾದರವುಂಟಾದದ್ದನ್ನು ನೋಡಿ ಅವಧೂತವರ್ಯರು ಗೋಪೂಜೆಯವ್ರತವನ್ನು ಕೈಕೊಂಡರು. ಮಹಾತ್ಮರಾದವರು ಎಷ್ಟುಬೋಧಿಸಿದರೇನು ಎಷ್ಟುಸದಾಚರಣೆಗಳನ್ನು ಆಚರಿಸಿ ತೋರಿಸಿದರೇನು? ಕಲಿಕಾಲದ ಮೂಲಕವಾಗಿಯೋ ಅಥವಾ ಮತ್ತಾವ ಕಾರಣದ ಮೂಲಕವಾಗಿಯೋ ಜನರಚಿತ್ತಗಳು ಸ್ಥಿರವಾದ ಸ್ವಾಸ್ಥ್ಯವನ್ನು ಹೊಂದುವದಿಲ್ಲ; ಬಹುಬೇಗ ಚಾಂಚಲ್ಯವನ್ನು ಹೊಂದುತ್ತವೆ. ಕಬ್ಬಿಣವು ಬೆಂಕಿಯಲ್ಲಿರುವಾಗ ಕೆಂಪಗೆ ಹೊಳೆಯುತ್ತಿರುತ್ತದೆ. ಮತ್ತು ಮೃದುವಿರುತ್ತದೆ. ಆದರೆ ಅದೇಕಬ್ಬಿಣವು ಬೆಂಕಿಯಿಂದ ಕಡೆಗೆಬರಲು ತನ್ನಹೊಳಪನ್ನು ಕಳೆದುಕೊಂಡು ಎಟ್ಟಿತನವನ್ನು ಪುನಃ ತಂದುಕೊಳ್ಳುವದು, ಇದರಂತೆಯೇ ಅಸಜ್ಜನರಸ್ಥಿತಿಯಿರುತ್ತದೆ, ಅವರು ದೊಡ್ಡವರ ಬಳಿಯಲ್ಲಿದ್ದಾಗ ಮಾತ್ರ ಅವರ ಮಾತಿನಂತೆ ನಡೆಯುವಸಂಕಲ್ಪವ ಮಾಡುತ್ತಾರೆ; ಅವರ ಸನ್ನಿಧಿಯು ತಪ್ಪಿತೆಂದರೆ ಅವರ ಸಂಕಲ್ಪವು ಭ್ರಷ್ಟವಾಗುತ್ತದೆ. ಒಟ್ಟಿಗೆ ಹೇಳತಕ್ಕ ಮುಖ್ಯಾಂಶವೇನೆಂದರೆ--ಅವಧೂತರ ಕಾಲದಲ್ಲಿ ಗೋಹತ್ಯೆಯು ವಿಶೇಷವಾಗಿ ನಡೆಯುತ್ತಿರುವದು ದೃಷ್ಟಿಗೆ ಬಿದ್ದದ್ದರಿಂದಲೇ ಅವರು ಗೋಮಾತೆಯ ಮಹತ್ವವನ್ನು ಜನರಿಗೆ ಬೋಧಿಸ ತೊಡಗಿದ್ದರು.

ಪ್ರಿಯ ವಾಚಕರೇ, ಶ್ರೀ ಕೃಷ್ಣಾವಧೂತರು ನೊನ್ನೆ-ಮೊನ್ನೆಯವರು; ಅವರು ಮಾಡಿದ ಉಪದೇಶವು ಇನ್ನೂ ಬಿಸಿ ಬಿಸಿಯಾಗಿರುವದು. ಅವರ ಉಪದೇಶವನ್ನು ಕಿಂಬಹುನಾ ಸನಾತನಧರ್ಮವನ್ನು ಮರೆಯುವದು ಹಿಂದುಗಳೆನಿಸುವ ನಮ್ಮ ಕರ್ತವ್ಯವಲ್ಲ. ಗೋಪುತ್ರರು ಕಷ್ಟಪಟ್ಟ ಹೊಲದಲ್ಲಿಯ ಧಾನ್ಯವನ್ನು ತಿಂದು ಜೀವಿಸುವವರಾದ ನಮ್ಮಲ್ಲಿ ಎಷ್ಟು ಜನರು ಗೋವಿಗೆ ಅನ್ಯಥಾಬಗೆಯುವವರಿಲ್ಲ? ಹಾಯ್! ಹಾಯ್! ಅವರ ಆ ನೀಚತನವನ್ನು ಲೆಕ್ಕಣಿಕೆಯಿಂದ ಬಣ್ಣಿಸಲಿಕ್ಕಾಗದು! ಬಹು ದಿವಸಗಳವರೆಗೆ ಹಾಲುಮೊಸರು ಮೊದಲಾದವುಗಳನ್ನು ಒದಗಿಸಿ ಹಲವು ಕರು-ಮರಿಗಳನ್ನು ಕೊಟ್ಟು ಅನಂತ ಉಪಕಾರಮಾಡಿದ ಆಕಳವು ಮುಪ್ಪನ್ನುಹೊಂದಲು ಕೃತಘ್ನನಾದ ಮನೆಯ ಯಜಮಾನನು ಅದನ್ನು ನಾಲ್ಕುರೂಪಾಯಿಗಳ ಆಶೆಯಿಂದ ಕಟುಗರಿಗೆ ವಿಕ್ರಯಿಸಿಬಿಡುವನು! ಯಾವಗೋಮಾತೆಯಿಂದ ಹಿಂದುವಾಸಿಗಳಾದ ನಮ್ಮ ಬುದ್ಧಿಮತ್ತತೆಯೂ ದೇಹಾರೋಗ್ಯವೂ ಹೆಚ್ಚಬೇಕಾಗಿದೆಯೋ ಅಂಥ ಆ ಗೋಮಾತೆಯ ಸಮುದಾಯವನ್ನು ಕಟುಕರಮನೆಗೆ ಕಳುಹಿಸುವ ನಮ್ಮ ದೇಶಬಾಂಧವರಿಗೆ ಧಿಃಕಾರವಿರಲಿ!

ಕೃಷ್ಣಾವಧೂತರು ಗೋಮಾತೆಯ ಉಪಾಸನೆಯನ್ನು ಅತ್ಯಂತನಿಷ್ಠೆಯಿಂದ

ಮಾಡಿ ಉಪಾಸನಾ ಧರ್ಮವನ್ನು ಜಗತ್ತಿಗೆ ತೋರಿಸಿಕೊಟ್ಟರು. ಮನುಷ್ಯನು ಯಾವ ಉಪಾಸನೆಯಲ್ಲಿ ಮೊದಲು ರತನಾಗುವನೋ ಅದರಲ್ಲಿಯೇ ಅವನ ಪ್ರೀತಿಯು ಕೊನೆವರೆಗೂ ಉಳಿಯಬೇಕೆಂಬದೇ ಸಜ್ಜನರ ಆಶಯವು; ಹೀಗೆಮಾಡದೆ ಚಂಚಲಚಿತ್ತನಾಗಿ ಹಲವು ಕಡೆಗೆ ಹಂಬಲಿಸುವವನಿಗೆ ಯಾವಉಪಾಸನೆಯೂ ಸಿದ್ಧಿಸುವದಿಲ್ಲ "ಅರ್ಚಕಸ್ಯ ತಪೋಬಲಂ" ಎಂಬಂತೆ ಉಪಾಸಕನ ನಿಷ್ಠೆಯಂತೆ ಉಪಾಸ್ಯದೈವತದಲ್ಲಿ ಶಕ್ತಿಯು ಪ್ರಕಟವಾಗುತ್ತದೆ. ಇದನ್ನೇ ನಮ್ಮ ಅವಧೂತವರ್ಯರು ಆಕಳ ಉಪಾಸನೆಯಿಂದ ಸಿದ್ಧಮಾಡಿತೋರಿಸಿದರು. ದೊಡ್ಡವರಿಗೆ ಯಾವದು ತಾನೆ ಅಶಕ್ಯವೆಂದು ಹಲವರು ಆಕ್ಷೇಪಿಸಬಹುದು. ಇಲ್ಲಿ ದೊಡ್ಡವರು ಸಣ್ಣವರು ಎಂಬ ಪ್ರಶ್ನೆಯಿರುವದಿಲ್ಲ. ನಿಷ್ಠೆಯಪ್ರಶ್ನೆಯಿರುತ್ತದೆ ನಿಷ್ಠಾವಂತನು ಸಿದ್ಧಿಯನ್ನು ಪಡೆಯದೆ ಇರಲಾರನೆಂಬ ಮಾತನ್ನು ನಮ್ಮ ಅವಧೂತವರ್ಯರು ಪುನಃ ಪುನಃ ಹೇಳುತ್ತಿದ್ದರು.

ಈ ಮೇರೆಗೆ ಅವಧೂತರು ತಮ್ಮ ಬಳಿಗೆಬಂದ ಭಕ್ತರಿಗೆ ಸದ್ಬೋಧಮಾಡುತ್ತ ಗೋಸೇವೆಯಲ್ಲಿ ಕಾಲಕಳೆಯುತ್ತಿರಲು ಅಸಂಖ್ಯ ಜನರು ಕಾಮನಾಪರರಾಗಿ ಅವರ ಬಳಿಗೆ ಬರತೊಡಗಿದರು. ಆ ಮಹಾತ್ಮರಾದರೂ ಅವರವರ ಭಕ್ತಿಯಂತೆ ಕಾಮನೆಗಳನ್ನು ಪೂರೈಸುತ್ತಿದ್ದರು; ರೋಗಿಗಳು—ಮಹಾರೋಗಿಗಳು, ಕ್ಷಯರೋಗದವರು, ಜಗತ್ತಿನಲ್ಲಿ ಎಷ್ಟು ಬಗೆಯ ರೋಗಿಗಳಿರುವರೋ ಅಷ್ಟು ಬಗೆಯ ರೋಗಿಗಳೆಲ್ಲರೂ ಅವಧೂತರಿಗೆ ಶರಣು ಬರುತ್ತಿದ್ದರು. ರೋಗಗಳು ಅನಂತವಾಗಿದ್ದರೂ ಅವುಗಳ ಪರಿಹಾರಕ್ಕೆ ಮಹಾತ್ಮರ ಅಮೃತದೃಷ್ಟಿಯೊಂದೇ ಔಷಧವಾಗಿತ್ತು. ಹಿಂಡುಗಟ್ಟಿಬರುವ ಕಾಮನಾಪರ ಭಕ್ತರನ್ನು ನೋಡಿ ಅವಧೂತರು ಒಮ್ಮೊಮ್ಮೆ ಹೀಗೆ ಉದ್ಗಾರವನ್ನು ತೆಗೆಯುತ್ತಿದ್ದರು—"ಕಲಿಯುಗವು; ಜನರಿಗೆ ವಿಷಯ ಸುಖಬುದ್ಧಿಯೇ ಹೆಚ್ಚು; ಜನ್ಮವುಅಸ್ಥಿರವು, ಜನ್ಮವಿರುವಾಗ ಭಗವತ್‌ಸೇವೆ ಮಾಡಿ ಧನ್ಯರಾಗಬೇಕೆಂಬ ಬುದ್ಧಿ ಹುಟ್ಟುವದಿಲ್ಲ; ಇಂದಿಲ್ಲ ನಾಳೆಗಾದರೂ ಲೋಪಹೊಂದುವ ದೇಹಕ್ಕೆ ಸೌಖ್ಯವಾಗಬೇಕು ಮಾನ ಮರ್ಯಾದೆಗಳು ಸಿಗಬೇಕು ಎಂಬ ಇಚ್ಛೆಯು ಹುಟ್ಟುವದು. ಇದಕ್ಕೆ ಅಜ್ಞಾನವೇ ಕಾರಣವು. ಈ ಅಜ್ಞಾನವು ಹೋದ ಹೊರತು ಅವರಿಗೆ ಭಗವತ್ಕೃಪೆಯಾಗುವದಿಲ್ಲ; ಭಗವತ್‌ಕೃಪೆಯಾದ ಹೊರತು ಅಜ್ಞಾನವು ತೊಲಗುವದಿಲ್ಲ. ಹೀಗಾಗಿ ಪ್ರಾಣಿಗಳ ಉದ್ಧಾರಕ್ಕೆ ಯೋಗವು ಬರುವದೇ ದುಸ್ತರವಾಗಿದೆ. ನಮ್ಮ ಬಳಿಗೆ ಯಾರು ಬಂದರೂ ಐಹಿಕಸಂಬಂಧವಾದ ಸುಖ-ದುಃಖಗಳ ರಗಳೆಯನ್ನು ತಕ್ಕೊಂಡೇ ಬರುವರು. ಒಬ್ಬರಾದರೂ

''ನಾನು ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಜನ್ಮವ ಧರಿಸಿ ಈ ನರಜನ್ಮಕ್ಕೆ ಪ್ರಾಪ್ತನಾಗಿದ್ದೇನೆ. ಪುಣ್ಯವಶಾತ್ ದೊರೆತ ಈ ನರಜನ್ಮದಲ್ಲಿ ಉದ್ಧಾರದ ಮಾರ್ಗವನ್ನು ಕಂಡುಕೊಳ್ಳಬೇಕು.'' ಎಂಬ ಪಶ್ಚಾತ್ತಾಪವು ಕಂಡುಬರುವದಿಲ್ಲ; ಪಶ್ಚಾತ್ತಾಪವು ಉಂಟಾದರೆ ವೈರಾಗ್ಯೋತ್ಪತ್ತಿಯು; ಮೂಲತಃ ಅದೇ ಇಲ್ಲದ ಬಳಿಕ ಪುರುಷಾರ್ಥವೆಲ್ಲಿಯದು?'

ಪ್ರಿಯಪಾಠಕರೇ, ದೊಡ್ಡವರ ಈ ಉದ್ಗಾರವು ನಿಜವಿರುತ್ತದೆ; ಸಾಂಸಾರಿಕರಾದ ನಾವು ಸಜ್ಜನರ ಬಳಿಗೆ ಹೋದರೆ ಮಿಥ್ಯಗಳಾದ ವಿಷಯ ಸುಖಗಳನ್ನೇ ಕೇಳಿಕೊಳ್ಳುವೆವಲ್ಲದೆ' ಶಾಶ್ವತಸುಖದ ದಾರಿಯನ್ನು ಕೇಳಿಕೊಳ್ಳುವದಿಲ್ಲ. ದೊಡ್ಡವರು ಪ್ರಾಣಿಗಳಿಗೆ ಶಾಶ್ವತ ಸುಖವನ್ನು ಒದಗಿಸಿಕೊಡಲು ಹುಟ್ಟಿ ಬಂದಿರುತ್ತಾರೆಯೇ ಹೊರತು ಅಶಾಶ್ವತ ಸುಖವನ್ನು ಕೊಡುವದಕ್ಕೆ ಹುಟ್ಟಿ ಬಂದಿರುವದಿಲ್ಲ. ಇದನ್ನು ಪೂರ್ಣವಾಗಿ ಮರೆತು ದೊಡ್ಡವರ ಬಳಿಗೆ ಹೋಗುವೆವು. ಆದರೂ ಆ ಮಹಾತ್ಮರು ತಮ್ಮ ದಯಾಬುದ್ಧಿಯಿಂದ ವಿಷಯ ಸುಖವನ್ನು ಒದಗಿಸಿಕೊಟ್ಟಂತೆ ಮಾಡಿ ಪ್ರಾಣಿಗಳನ್ನು ತಮ್ಮ ವಶಕ್ಕೆ ತಕ್ಕೊಳ್ಳುವರು. ಮತ್ತು ಅವರಿಗೆ ಜ್ಞಾನೋಪದೇಶ ಮಾಡಿ ಕ್ರಮೇಣ ಅವರ ಸಂಸಾರಿಕ ವಾಸನೆಯನ್ನು ನಾಶಪಡಿಸುವರು. ಸಜ್ಜನರ ದಿನಚರ್ಯೆಯೆಂದರೆ ಇದೇ ಆಗಿರುತ್ತದೆ. ಯಾಕಂದರೆ ಪ್ರಾಣಿಗಳ ಉದ್ಧಾರ ಮಾಡುವಕಾರ್ಯದ ಹೊರತು ಅವರಿಗೆ ಲೋಕದಲ್ಲಿ ಇನ್ನಾವ ಕಾರ್ಯವೂ ಇರುವದಿಲ್ಲ.

# ೧೧ ನೆಯ ಪ್ರಕರಣ.

## ಭಕ್ತಿಯ ರಹಸ್ಯ.

ಅವಧೂತಶ್ರೇಷ್ಠರು, ಜನರನ್ನು ಭಕ್ತಿಮಾರ್ಗಕ್ಕೆ ಹಚ್ಚುವದಕ್ಕೋಸ್ಕರ ಸರ್ವ ದಾ ಭಕ್ತಿಮಾರ್ಗವನ್ನೇ ಉಪದೇಶಿಸುತ್ತಿದ್ದರು. ಅವರ ಮುಖ್ಯ ಪ್ರೀತಿಯ ಪುಸ್ತಕವೆಂದರೆ ಶ್ರೀ ಸಮರ್ಥ ರಾಮದಾಸರು ಬರೆದ ದಾಸಬೋಧವು; ಅದನ್ನು ಅವರು ತಮ್ಮ ಭಕ್ತಮಂಡಲಿಯಿಂದ ಓದಿಸಿ ಅದರಲ್ಲಿದ್ದ ಭಕ್ತಿ-ಜ್ಞಾನವೈರಾಗ್ಯಗಳ ರಹಸ್ಯವನ್ನು ಬಹು ಸುಗಮವಾಗಿ ತಿಳಿಸಿಕೊಡುತ್ತಿದ್ದರು. ಒಮ್ಮೊಮ್ಮೆ ಭಗವದ್ಭಕ್ತರ ಕಥೆಗಳನ್ನು ಹೇಳಿ ಜನರ ಚಿತ್ತವನ್ನು ಹರಣ ಮಾಡುತ್ತಿದ್ದರು. ಅವರ ಸರಸವಾದ ಭಕ್ತಿಯ ನಿರೂಪಣವನ್ನು ನಮ್ಮ ಪ್ರಿಯ ವಾಚಕರಿಗೋಸ್ಕರ ಇಲ್ಲಿ ವಿವರಿಸುವೆವು.

"ಭಗವಂತನು, ಬ್ರಹ್ಮಾಂಡಕ್ಕೇ ಜನಕನಿರುವನು. ಅವನ ಮಾಯೆಯಿಂದಲೇ ದೃಶ್ಯಸೃಷ್ಟಿಯು ರೂಪಗೊಂಡಿರುತ್ತದೆ; ಸರ್ವತಂತ್ರ ಸ್ವತಂತ್ರನಾದ ಆ ಪರಮಾತ್ಮನ ಸತ್ಯಸ್ವರೂಪವನ್ನು ತಿಳಿಯುವದು ಅರ್ಥಾತ್ ಬ್ರಹ್ಮನಿಷ್ಠ ಸ್ಥಿತಿಯನ್ನು ಹೊಂದುವದು ಮನುಷ್ಯಮಾತ್ರರ ಕರ್ತವ್ಯವಿರುತ್ತದೆ. ಶುದ್ಧ ಸತ್ವಗುಣೋಪೇತನಾದ ಮನುಷ್ಯನಿಂದ ಈ ಕರ್ತವ್ಯವು ಚನ್ನಾಗಿ ಸಾಧಿಸುತ್ತದೆ. ಮಿಕ್ಕವರಿಗೆ ಬ್ರಹ್ಮನಿಷ್ಠಪದವಿಯು ದೊರೆಯುವದು ದುರ್ಲಭವು. ಶುದ್ಧ ಸತ್ವಗುಣವು ಪ್ರಾಪ್ತವಾಗುವದಕ್ಕಾಗಿ ಮನುಷ್ಯಮಾತ್ರರು ಭಗವದಾರಾಧನೆಯನ್ನು ಮಾಡಲೇ ಬೇಕು. ಭಗವಂತನ ಸಗುಣರೂಪವೇ ಆರಾಧ್ಯವಸ್ತುವು; ಆ ವಸ್ತುವಿನಲ್ಲಿ ಅತ್ಯಂತವಾದ ಪ್ರೇಮವನ್ನು ತಾಳುವದೇ ಭಕ್ತಿಯು; ಸಾವಿರಾರು ವರುಷಗಳ ವರೆಗೆ ತಲೆ ಕೆಳಗೆ ಮಾಡಿ ತಪಸ್ಸನ್ನಾಚರಿಸಿದರೂ ದೊರೆಯದ ಪರಮಾತ್ಮನು ಭಕ್ತಿಯಿಂದ ಸುಲಭವಾಗಿ ಕೈವಶನಾಗುತ್ತಾನೆ. ಭಕ್ತಿಗೆ ಒಲಿದ ಆ ಪರಮಾತ್ಮನು ಯಾವ ವಿಧಿ ನಿಷೇಧಗಳನ್ನೂ ನೋಡುವದಿಲ್ಲ. ಗೋಪಿಕಾಸ್ತ್ರೀಯರು ಸಗುಣರೂಪದಿಂದ ಅವತರಿಸಿದ ಕೃಷ್ಣಪರಮಾತ್ಮನಲ್ಲಿ ಅತ್ಯಂತ ಪ್ರೇಮವನ್ನು ತಾಳಿದ್ದರಿಂದ ಅವರ ಜಾರಕರ್ಮವು ಕೂಡಾ ಪವಿತ್ರ ಕರ್ಮವಾಯಿತು. ಮುಖ್ಯವಾಗಿ ಪರಮಾತ್ಮನಲ್ಲಿ ಅನನ್ಯಗತಿಕತ್ವವಿರಬೇಕು. ಇಂಥವನೇ ಪರಮಾತ್ಮನೆಂದು ನಿಶ್ಚಯದಿಂದ ಯಾರಿಗೆ ಬೊಟ್ಟು ಮಾಡಿ ತೋರಿಸಲಿಕ್ಕೆ ಬರುವದೋ ಅವರೇ ಭಕ್ತರು. ಹಾಗೆ ಬಾರದಿದ್ದರೆ ಭಕ್ತರೆಂಬ

ಸಂಜ್ಞೆಯು ಬರುವದಿಲ್ಲ. ಅಪ್ಪಗಳಿರಾ, ಭಕ್ತಿಯ ರಹಸ್ಯವು ಬಹು ಸುಲಭವಿರುತ್ತದೆ. ಸಂಸಾರಿಕರಿಗೆ ತಮ್ಮ ಹೆಂಡರು ಮಕ್ಕಳಮೇಲೆ ಪ್ರೇಮ ಮಾಡಿಗೊತ್ತಿರುತ್ತದೆ. ಮಕ್ಕಳಿಗಾಗಲಿ, ಹೆಂಡತಿಗಾಗಲಿ ಜಡ್ಡಾದರೆ ಅವರ ಪ್ರಾಣಹೋದಂತಾಗುತ್ತದೆ. ಹಗಲು ರಾತ್ರಿಯಲ್ಲಿ ಚಿಂತೆಯಿಂದ ಅವರು ಬಳಲುತ್ತಿರುತ್ತಾರೆ. ಆದರೆ ಈ ರೀತಿಯಾದ ಹಂಬಲವನ್ನು ಅವರು ಭಗವಂತನ ವಿಷಯವಾಗಿ ಹಿಡಿದರೆ ಅವರು ಧನ್ಯರಾಗುವರು. ಪರಮಾತ್ಮನೊಬ್ಬನು ಸತ್ಯವಸ್ತುವಾಗಿರುವನು. ಸತ್ಯವಸ್ತುವಿನ ಮೇಲಿನ ಪ್ರೀತಿಯು ಸತ್ಯ ಫಲವನ್ನೇ ಕೊಡುವದು. ಆದರೆ ಅಸತ್ಯವಸ್ತುಗಳ ಮೇಲಿನ ಪ್ರೀತಿಯು ಸತ್ಯಫಲವನ್ನು ಹ್ಯಾಗೆ ಕೊಟ್ಟೀತು? ಹೆಂಡಿರು ಮಕ್ಕಳು ಅಸತ್ಯವಾದವರು ಅಂದರೆ ನಾಶಪಂಥವನ್ನು ಹಿಡಿಯುವಂಥವರು. ಅಂಥವರ ಮೇಲೆ ಮಾಡಿದ ಪ್ರೇಮವು ಕಡೆಗೆ ದುಃಖವನ್ನೇ ಕೊಡುವದಲ್ಲದೆ ಸುಖವನ್ನು ಕೊಡಲಾರದು. ಈ ವಿಚಾರವನ್ನು ತಿಳಿದು ಯಾವನು ಜಗತ್ತಿನಲ್ಲಿ ಭಗವಂತನ ಅಸ್ತಿತ್ವವನ್ನು ಕಂಡು ಹಿಡಿಯುವನೋ ಅವನು ಭಗವದ್ಭಕ್ತನಾಗುವನು.

ಎಷ್ಟೋ ಜನರು ದೊಡ್ಡದೊಡ್ಡ ಕ್ಷೇತ್ರಗಳಲ್ಲಿ ಅಥವಾ ಸಾಧು-ಸಜ್ಜನರಲ್ಲಿ ಸೇವೆಗಾಗಿ ಇರುವರು. ಜನ್ಮ ಸಾರ್ಥಕ್ಯ ಮಾಡಿಕೊಳ್ಳುವ ಉದ್ದೇಶವೊತ್ತಟ್ಟಿಗಿರಲಿ, ಐಹಿಕ ಕಾಮನೆಗಳನ್ನಾದರೂ ಆ ಸೇವೆಯಿಂದ ಪೂರ್ಣಪಡಿಸಿಕೊಳ್ಳುವಷ್ಟು ದಾರ್ಢ್ಯವು ಅವರಿಗಿರುವದಿಲ್ಲ. ಯಾಕೆಂದರೆ ದೇವರ ಗುರುತು ಇದ್ದರೆ ದೇವರ ಸೇವೆಯು; ಯಜಮಾನನ ಗುರುತಿಲ್ಲದ ಬಳಿಕ ಸೇವಕನಿಂದ ಯಜಮಾನನ ಸೇವೆಯು ಸಂಭವಿಸುವ ಬಗೆಯೆಂತು? ಆದ್ದರಿಂದ ಎಷ್ಟೋ ಜನ ಸೇವಕರು ಚಾಂಚಲ್ಯದಿಂದ ವೃಥಾಯಾಸಪಟ್ಟು ಬರಿಗೈಯಿಂದ ತಿರುಗಿ ಊರಿಗೆ ಹೋಗುತ್ತಾರೆ; ಅಪ್ಪಗಳಿರಾ, ಇದಕ್ಕೆ ಭಕ್ತಿಯನ್ನ ಬಹುದೇ? ಮೂರ್ಖರಾದವರುಮಾತ್ರ ಇದಕ್ಕೆ ಭಕ್ತಿಯೆಂದು ಕರೆಯಬಹುದು. ಎಷ್ಟೋಜನರು ಅನ್ನುವದೇನಂದರೆ--"ನಾನು ಆ ದೇವರ ಸೇವೆಯನ್ನು ಇಷ್ಟುದಿವಸ ಮಾಡಿದೆನು. ಯಾವ ದೇವರಿಂದಲೂ ನನಗೆ ಏನೂ ಪ್ರಯೋಜನವಾಗಲಿಲ್ಲ. ಈಗ ದೇವರಲ್ಲಿ ಏನು ಸತ್ವವಿರುವದು?" ಅಪ್ಪಗಳಿರಾ, ಹೀಗೆ ಅನ್ನುವರೋ ಇಲ್ಲವೋ? ದೇವರ ಸತ್ವ ಪರೀಕ್ಷೆ ಮಾಡಬೇಕಾದರೆ ಉಪಾಸಕನಲ್ಲಿ ಮೊದಲು ಸತ್ವವಿರಬೇಕಷ್ಟೇ; ಉಪಾಸಕನಲ್ಲಿ ಪ್ರೇಮವು ದೃಢವಾಗಿ ಉಳಿದರೆ ದೇವರ ಸತ್ವವು ಹೊರಬೀಳುವದು. ದೇವರು ದುಡ್ಡು ಕೊಟ್ಟರೆ ಒಲಿಯುವದಿಲ್ಲ, ಅನಂತ ವಸ್ತ್ರ ಒಡವೆಗಳನ್ನು ಕೊಟ್ಟರೆ ಒಲಿಯುವದಿಲ್ಲ. ಕೇವಲ ಪ್ರೇಮವನ್ನೊಂದು ಕೊಟ್ಟರೆ ಆತನು ಒಲಿಯುವನು. "ಪತ್ರಂ, ಪುಷ್ಪಂ, ಫಲಂ, ತೋಯಂ ಯೋಮೇ ಭಕ್ತ್ಯಾ

ಪ್ರಯಚ್ಛತಿ'' ಎಂದು ಭಗವಂತನು ಅಂದಿರುತ್ತಾನೆ. ಆ ಭಕ್ತಿಯನ್ನೇ ಎಲ್ಲರೂ ಸಂಪಾದಿಸಬೇಕಾಗಿರುತ್ತದೆ. ಲೋಕದಲ್ಲಿ ಯಾತರದ್ದಾದರೂ ಕೊರತೆಯಿದ್ದರೆ ಅದು ಭಕ್ತಿಯ ವಿಷಯಕನೆಂದೇ ಹೇಳಬಹುದು. ಪುರಾಣಕಾಲದ ಹಾಗು ಅರ್ವಾಚೀನ ಕಾಲದ ಭಗವದ್ಭಕ್ತರು ಹ್ಯಾಗೆ ಆಚರಿಸಿದರೆಂಬದನ್ನು ಪ್ರತಿಯೊಬ್ಬನು ರಹಸ್ಯವಾಗಿ ಅರಿತುಕೊಳ್ಳಬೇಕು ಪ್ರಹ್ಲಾದ, ಧ್ರುವ ಉದ್ಧವಾದಿ ಭಕ್ತರು ಯಾವ ರೀತಿ ಪರಮಾತ್ಮನಲ್ಲಿ ಪ್ರೇಮದಿಂದ ನಡೆದರೋ ಮತ್ತು ಅರ್ವಾಚೀನ ಕಾಲದಲ್ಲಿ ನಾಮದೇವಾದಿ ಭಕ್ತರು ಹ್ಯಾಗೆ ನಡಕೊಂಡರೋ ಎಂಬದನ್ನು ನೋಡಿದರೆ ಭಕ್ತಿಯ ಮರ್ಮವು ಸಹಜವಾಗಿ ಕಂಡುಬರುತ್ತದೆ. ಚಿಕ್ಕಮಗುವು ತಾಯಿಯನ್ನು ಬಿಡದಲೆ ಅಪೇಕ್ಷಿಸುವಂತೆ ಭಕ್ತರಾದವರು ದೇವರನ್ನು ಅಪೇಕ್ಷಿಸುವರು. ಭಕ್ತಿಯ ವಿಷಯದಲ್ಲಿ ಒಂದು ಕಥೆಯು ನೆನಪಾಯಿತು ಹೇಳುತ್ತೇನೆ ಕೇಳಿರಿ.

ಒಂದು ಅಡವಿಯಲ್ಲಿ ಒಂದು ಶಿವಾಲಯವಿತ್ತು. ಒಳಗಿನ ಶಿವಲಿಂಗವು ಬಹು ಭವ್ಯವಾದದ್ದಿತ್ತು. ಸಮೀಪದ ಹಳ್ಳಿಯಲ್ಲಿದ್ದ ಒಬ್ಬ ಬ್ರಾಹ್ಮಣನು ಆ ಶಿವಾಲಯದ ಪೂಜಾರಿಯಾಗಿದ್ದನು. ಅವನು ಆ ದೇವರ ಹೆಸರಿನ ಹೊಲದ ಉತ್ಪನ್ನವನ್ನು ತಿನ್ನುತ್ತಿದ್ದನು. ಆದ್ದರಿಂದ ಅವನು ನಿಮಿತ್ಯಕ್ಕಾಗಿ ಪೂಜೆಮಾಡುತ್ತಿದ್ದನು. ಶಿವಲಿಂಗದ ವಿಷಯಕವಾಗಿ ಪೂಜಾರಿಯಲ್ಲಿ ಭಕ್ತಿಯಿರಲಿಲ್ಲ. ಹೀಗಿರಲು, ಅದೇ ಊರಲ್ಲಿಯ ಒಬ್ಬ ಕುರುಬನು ಒಮ್ಮೆ ಕುರಿಗಳನ್ನು ಮೇಯಿಸಲಿಕ್ಕೆ ಅಡವಿಗೆ ಹೋದಾಗ ಅಕಸ್ಮಾತ್ತಾಗಿ ಆ ಗುಡಿಗೆ ಹೋದನು. ಶಿವಲಿಂಗವನ್ನು ನೋಡಿ ಅವನಿಗೆ ತುಂಬಾ ಸಂತೋಷವಾಯಿತು. ಅವನು ಆ ಶಿವಲಿಂಗವನ್ನೇ ತನ್ನ ಸ್ವಾಮಿಯೆಂದು ಭಾವಿಸಿದನು. ದಿನಾಲು ಅವನು ಕುರಿಗಳನ್ನು ಅಟ್ಟಿಕೊಂಡು ಅದೇ ಅಡವಿಗೆ ಹೋಗಹತ್ತಿದನು; ಮತ್ತು ತಪ್ಪದೆ ದೇವ ದರುಶನವನ್ನು ತಕ್ಕೊಳ್ಳಹತ್ತಿದನು; ಮತ್ತು ಪೂಜಾರಿಯು ಏರಿಸಿಹೋದ ಹೂವು-ಬಿಲ್ವ-ಅಕ್ಷತೆ ಮೊದಲಾದವುಗಳನ್ನು ಕಿತ್ತೊಗೆದು "ಯಾವನವನು? ನಮ್ಮಪ್ಪನ ಮೇಲೆ ಇಷ್ಟು ಹೇರಿದವನು?'' ಎಂದು ನುಡಿಯುತ್ತ ಶಿವಲಿಂಗವನ್ನು ತನ್ನ ಹರಕ ಒಲ್ಲಿಯಿಂದ ಒರಿಸುತ್ತಿದ್ದನು. ಹೀಗಿರಲು, ಒಮ್ಮೆ ಒಂದು ಪ್ರಸಂಗವು ಬಂದಿತು. ಪೂಜಾರಿಯೂ ಕುರುಬನೂ ಒಂದೇ ಸಮಯದಲ್ಲಿ ಗುಡಿಗೆ ಬಂದರು. ಪೂಜಾರಿಯು ಹೂವು ಪತ್ರಿಗಳನ್ನು ದೇವರ ಮೇಲೆ ಏರಿಸಲು, ಕುರುಬನು ಸಿಟ್ಟಿಗೆದ್ದು ಅವನ್ನು ತೆಗೆದೊಗೆದನು. ಆಗ ದೇವರ ವಿಷಯವಾಗಿ ಪೂಜಾರಿ ಹಾಗು ಕುರುಬನಲ್ಲಿ ಬಡಿದಾಟವುಂಟಾಯಿತು. ನನ್ನ ದೇವರೆಂದು ಪೂಜಾರಿಯು ಅನ್ನತೊಡಗಿದನು.

ನನ್ನ ಸ್ವಾಮಿಯೆಂದು ಕುರುಬನು ಅನ್ನತೊಡಗಿದನು. ಇಬ್ಬರೂ ಶಿವಲಿಂಗದ ವಿಷಯಕ್ಕೆ ತಮ್ಮ ಅಭಿಮಾನವನ್ನು ವ್ಯಕ್ತಗೊಳಿಸಲಾರಂಭಿಸಿದರು. ಆಗ ಅವರಿಬ್ಬರ ಪ್ರೇಮ ಪರೀಕ್ಷಾರ್ಥವಾಗಿ ಭಗವಂತನು ಒಂದು ಮಾಯೆಯನ್ನುಂಟುಮಾಡಿದನು, ನಿರಭ್ರವಾದ ಆಕಾಶದಲ್ಲಿ ಮೋಡಗವಿದು ಕಲ್ಲು ಸುರಿದ ಹಾಗೆ ಮಳೆಯು ಸುರಿಯಲಾರಂಭಿಸಿತು. ಗುಡುಗೂ ಮಿಂಚೂ ತಮ್ಮ ಉಗ್ರರೂಪವನ್ನು ಜಗತ್ತಿಗೆ ತೋರಿಸಹತ್ತಿದವು. ಭಯಂಕರವಾದ ಜಲಪ್ರಳಯವೇ ಆಗುವದೋ ಎನ್ನುವಹಾಗೆ ತೋರಿತು. ಮಳೆಯ ಈ ರಭಸಕ್ಕೆ ಶಿವಾಲಯವು ತತ್ತರಿಸಿತು. ಅದು ಜೀರ್ಣವಾಗಿದ್ದುದರಿಂದ ಗೋಡೆಗಳು ಕಡಕೊಂಡು ಬೀಳತೊಡಗಿದವು. ಶಿವಲಿಂಗದ ಮೇಲಿನ ದೊಡ್ಡ ಗೋಪುರವು ಕ್ಷಣದಲ್ಲಿ ಕಡಕೊಂಡು ಬೀಳುವ ಢೌಲು ತೋರಿತು. ಆಗ ಬ್ರಾಹ್ಮಣನು ಗಾಬರಿಯಾದನು. ಇನ್ನೊಂದು ಕ್ಷಣ ಈ ಗುಡಿಯಲ್ಲಿ ನಿಂತರೆ ತನ್ನ ಪ್ರಾಣವು ಉಳಿಯುವದಿಲ್ಲೆಂಬದು ಅವನಿಗೆ ಸ್ಪಷ್ಟವಾಗಿ ಕಂಡು ಬಂದಿತು. ಕೂಡಲೆ ಆತನು ಪೂಜೆಯನ್ನು ಬಿಟ್ಟು ಗುಡಿಯಿಂದ ಕಾಲ್ಕಿಗೆದನು. ಆದರೆ ಕುರುಬನಿಗೆ ತನ್ನ ಸ್ವಾಮಿಯ ಮೇಲೆ ಅಂದರೆ ಶಿವಲಿಂಗದ ಮೇಲೆ ಅತ್ಯಂತ ಪ್ರೇಮವಿದ್ದದರಿಂದ ಅವನು ತಾನು ಸಾಯುವೆನೆಂಬದನ್ನು ಮರೆತುಬಿಟ್ಟನು. 'ಗೋಪುರವು ಬಿದ್ದು ಶಿವಲಿಂಗವು ಭಿನ್ನವಾಗುವದಲ್ಲಾ' ಎಂಬ ಘೋರವಾದ ಚಿಂತೆಯು ಅವನನ್ನು ವ್ಯಾಪಿಸಿತು.' ಆಗ ಅವನು ಗೋಪುರವು ಬಿದ್ದರೆ ತನ್ನ ಮೇಲೆಯೇ ಬೀಳಲಿ ಎಂದು ಶಿವಲಿಂಗಕ್ಕೆ ತೆಕ್ಕೆಬಿದ್ದು ಲಿಂಗವನ್ನು ತನ್ನ ಹೊಟ್ಟೆಯ ಬುಡದಲ್ಲಿ ಸಂರಕ್ಷಿಸಲುಜ್ಜುಗಿಸಿದನು. ಸ್ವದೇಹದ ಮೇಲಿನ ಮಮತೆಯನ್ನು ಬಿಟ್ಟು ಸ್ವಾಮಿಯ ಮೇಲಿನ ಪ್ರೇಮದಿಂದ ಶಿವಲಿಂಗವನ್ನು ಉಳಿಸುವದಕ್ಕಾಗಿ ಕುರುಬನು ಪಟ್ಟ ಸಾಹಸವನ್ನು ನೋಡಿ ಭಗವಂತನಿಗೆ ತುಂಬಾ ಸಂತೋಷವಾಯಿತು. ಆಗ ಅವನು ಪ್ರಸನ್ನನಾಗಿ ತನ್ನ ಆ ನಿಸ್ಸೀಮ ಭಕ್ತನಿಗೆ ದರುಶನ ಕೊಟ್ಟನು. ತತ್ಕ್ಷಣದಲ್ಲಿ ಮಳೆಯೂ ಹೋಯಿತು. ಗುಡುಗೂ ಅಡಗಿತು.

ಅಪ್ಪಗಳಿರಾ, ಭಕ್ತಿಯೆಂದರೆ ಹೀಗಿರುವದು. ತಾನು ಸಂಕಟದಲ್ಲಿ ಬಿದ್ದರೂ ಯಾವನು ತನ್ನ ಸ್ವಾಮಿಯ ರಕ್ಷಣೆಗೆ ಹೆಣಗುವನೋ ಅವನೇ ನಿಜವಾದ ಭಕ್ತನು, ಇಂಥ ಭಕ್ತರಿಗೆ ದೇವರು ಕೈವಾರಿಯಾಗದೆ ಏನು ಮಾಡುವನು? ಆದ್ದರಿಂದ ಸಮಸ್ತರೂ ಡಂಭಾಚಾರದ ಭಕ್ತಿಯನಾಶ್ರಯಿಸದೆ ಅಂತಃಕರಣಪೂರ್ವಕವಾದ ಭಕ್ತಿಯನ್ನು ಆಚರಿಸಬೇಕು.''

## ೧೨ನೆಯ ಪ್ರಕರಣ.

## ಪ್ರಪಂಚ—ಪಾರಮಾರ್ಥ.

ಶ್ರೀ ಸಮರ್ಥ ರಾಮದಾಸರು ಯಾವ ಧೋರಣದಿಂದ ಜನರಿಗೆ ಸದ್ಬೋಧ ಮಾಡುವ ಕ್ರಮವನ್ನಿಟ್ಟುಕೊಂಡಿದ್ದರೋ ಅದೇ ಧೋರಣದಿಂದಲೇ ನಮ್ಮ ಅವಧೂತವರ್ಯರು ಜನರನ್ನು ಬೋಧಿಸುತ್ತಿದ್ದರು. ಅವರ ಬೋಧವು ಬಹು ಸುಲಭವಾಗಿರುವದು. ಆದರೆ ಕಲಿಯುಗದ ವಿಷಯಾಸಕ್ತ ಪ್ರಾಣಿಗಳಿಗೆ ಅದೇ ಜಡವೆನಿಸುವದು. ಅವರು ತಮ್ಮ ಬಳಿಗೆ ಬರುತ್ತಿರುವ ಭಕ್ತರನ್ನು ಕುರಿತು ನುಡಿಯುತ್ತಿದ್ದರೇನಂದರೆ—"ಮಹಾರಾಜ, ಕಲಿಯುಗವು ಕೆಟ್ಟದ್ದೆಂಬದೇನೋ ನಿಜ; ಆದರೆ ಭಗವಂತನ ಪ್ರಾಪ್ತಿಗೆ ಈ ಕಾಲದಲ್ಲಿ ಸುಲಭವಿದ್ದಷ್ಟು ಉಳಿದ ಯುಗಗಳಲ್ಲಿರುವದಿಲ್ಲ. ಈ ಯುಗದಲ್ಲಿ ಭಗವತ್ಪ್ರಾಪ್ತಿಗೆ ಮೂಗು ಹಿಡಿದು ಬಹು ದೀರ್ಘಕಾಲ ತಪಸ್ಸನ್ನಾಚರಿಸುವ ಕಾರಣವಿಲ್ಲ. ತಲೆಕೆಳಗೆ ಕಾಲು ಮೇಲೆಮಾಡಿ ಉಗ್ರ ತಪಸ್ಸನ್ನು ಮಾಡುವ ಕಾರಣವಿಲ್ಲ. ವಾಯು ಭಕ್ಷಣ ಅಥವಾ ತೃಣಪರ್ಣಾದಿಗಳ ಭಕ್ಷಣದಿಂದ ಕಾಲಹರಣ ಮಾಡಲವಶ್ಯವಿಲ್ಲ ಹೆಂಡಿರು-ಮಕ್ಕಳನ್ನು ತ್ಯಜಿಸಿ ಅರಣ್ಯವನ್ನು ಸೇವಿಸುವ ಕಾರಣವಿಲ್ಲ. ಒಟ್ಟಿಗೆ ಕಠಿಣತರಗಳಾದ ಯಾವ ಉಪಾಯಗಳ ಯೋಜನೆಯನ್ನೂ ಮಾಡುವ ಹಾಗಿಲ್ಲ. ಭಗವತ್‌ಕೃಪೆಗೆ, ತಪಸ್ಸು-ಯಜ್ಞಯಾಗಾದಿಗಳೇ ಮುಖ್ಯ ಕಾರಣವಿದ್ದು, ಅವನ್ನೇ ಮಾಡದಿದ್ದರೆ ಭಗವತ್‌ಪ್ರಾಪ್ತಿಯು ಆಗುವ ಬಗೆ ಹ್ಯಾಗೆಂದು ನೀವು ಪ್ರಶ್ನ ಮಾಡಬಹುದು. ಆದರೆ ಇದಕ್ಕೆ ಉತ್ತರವನ್ನು ಹೇಳುತ್ತೇನೆ ಕೇಳಿರಿ. ಕಲಿಯುಗದಲ್ಲಿ ಭಗವಂತನು ಬಹು ಸುಲಭನಾಗಿರುವನು; ಅವನ ಪ್ರಾಪ್ತಿಗೆ ಸಜ್ಜನರ ಕೃಪೆಯೆಂಬದೊಂದೇ ಉಪಾಯವಿರುವದು. ಸಜ್ಜನರ ಕೃಪೆಯಾಗುವದೊಂದೇ ತಡ ತತ್‌ಕ್ಷಣದಲ್ಲಿಯೇ ಭಗವತ್ಪ್ರಾಪ್ತಿಯಾಯಿತೆಂದು ತಿಳಿಯಬೇಕು. ಸಜ್ಜನರಾದರೂ ಅನುಗ್ರಹ ಮಾಡುವದಕ್ಕೆ ದ್ರವ್ಯ ಬೇಡುವದಿಲ್ಲ. ವಿದ್ಯೆ ನೋಡುವದಿಲ್ಲ. ಕರ್ಮಠತನದ ಗೊಡವೆಗೆ ಹೋಗುವದಿಲ್ಲ. ತಮ್ಮ ಮೇಲೆ ಅಖಂಡವಾದ ಪ್ರೇಮವು ಇರುವದೋ ಅಥವಾ ಇಲ್ಲವೋ ಎಂಬದನ್ನು ಮಾತ್ರ

ಪರೀಕ್ಷಿಸುವರು. ಯಾವನು ಸಜ್ಜನರ ಮೇಲೆ ಅಖಂಡ ಪ್ರೇಮವ ತಾಳಿ ಅವರ ಆ ಪರೀಕ್ಷೆಯಲ್ಲಿ ಉತ್ತೀರ್ಣನಾಗುವನೋ ಅವನ ಮೇಲೆ ಸಜ್ಜನರ ಅನುಗ್ರಹವು ತಡ ವಿಲ್ಲದೆ ಆಗುವದು. ಆದ್ದರಿಂದ ನಾವು ಸಜ್ಜನರು ಯಾರೆಂಬದನ್ನು ಗುರ್ತಿಸಿ ಅವರಲ್ಲಿ ಪೂರ್ಣ ವಿಶ್ವಾಸವನ್ನಿಡಬೇಕು. ಸಜ್ಜನರ ಅನುಗ್ರಹವೇ ಪ್ರಾಣಿಗಳಿಗೆ ಪರಮ ಅರ್ಥವು. ಈ ಶ್ರೇಷ್ಠವಾದ ಅರ್ಥವನ್ನು ಸಂಪಾದಿಸಿದ ಬಳಿಕ ಬ್ರಹ್ಮಾಂ ಡವು ತಿರುಗಿಬಿದ್ದರೂ ಜೀವನು ಅಂಜುವದಿಲ್ಲ.

ಸಜ್ಜನರು ನಮ್ಮಹಾಗೆಯೇ ಮನುಷ್ಯರಿರುತ್ತಾರೆ; ಅವರಿಗೆ ಮಾನುಷವಾದ ಎಲ್ಲ ಅವಯವಗಳೂ ಇರುತ್ತವೆ. ಮನುಷ್ಯರ ದೇಹವಿಕಾರಗಳೆಲ್ಲವೂ ಅವರಿಗಿರುತ್ತವೆ. ಆದರೆ ಮನುಷ್ಯನಿಗಿರುವ ಮನೋವಿಕಾರವು ಮಾತ್ರ ಅವರಲ್ಲಿರುವದಿಲ್ಲ. ಸಜ್ಜನ ರಿಗೂ ನಮಗೂ ಇಷ್ಟೇ ಭೇದವು. ಯಾರಲ್ಲಿ ಮನೋವಿಕಾರಗಳು ಅಂದರೆ ಸುಖ ದುಃಖಗಳ ಹಂಬಲ, ಮಾನಾಪಮಾನಗಳ ಗೊಂದಲ, ನಿಂದಾ ಸ್ತುತಿಗಳ ಆಡಂಬರ, ಪ್ರಾಣಿಗಳಲ್ಲಿ ವಿಷಮಬುದ್ಧಿ ಮುಂತಾದವುಗಳು ಕಂಡು ಬರುವದಿಲ್ಲವೋ ಅವರೇ ಸಜ್ಜನರೆಂದು ಗುರ್ತಿಸಬೇಕು. ಸಜ್ಜನರಿಗೆ ಜಗತ್ತು ಬ್ರಹ್ಮಮಯವಾಗಿ ತೋರು ವದು. ಇಂಥ ಸಜ್ಜನರ ಚರಣಗಳಲ್ಲಿ ಚಿತ್ತವನ್ನಿಟ್ಟು ಯಾವನು ಪ್ರಪಂಚ ಮಾಡು ವನೋ ಅವನಿಗೆ ಆ ಪ್ರಪಂಚವು ಬಾಧಕವಾಗಲಾರದು

ಪ್ರಪಂಚವೆಂದರೆ ಹತ್ತು ಮಂದಿಯ ಗೋಣು ಮುರಿದು ಅಗಣಿತ ದ್ರವ್ಯ ತಂದು ಸ್ತ್ರೀಪುತ್ರಾದಿಕರೊಡನೆ ವಿಷಯಸುಖದಲ್ಲಿ ಮುಣುಗಿ ಏಳುವದೆಂದು ಎಷ್ಟೋ ಜನರು ಭಾವಿಸುತ್ತಿರುವರು. ಅಪ್ಪಗಳಿರಾ, ಇಂಥವರ ಸಂಸಾರಕ್ಕೆ ಧಿಃಕ್ಕಾರವು. ಅದು ಸಂಸಾರವಲ್ಲ; ಅಸಾರವು; ಯಾವನು ಮಂದಿಯ ಗೋಣು ಮುರಿಯುವ ದುಷ್ಕೃತ್ಯಕ್ಕೆ ಒಳಗಾಗದೆ ನ್ಯಾಯದಿಂದ ಪ್ರಾಪ್ತವಾದದ್ದರಲ್ಲಿ ಸಂತುಷ್ಟನಾಗಿ ಅತಿಥಿ-ಅಭ್ಯಾಗತರನ್ನು ಸತ್ಕರಿಸುತ್ತ ಸಜ್ಜನರ ಚರಣಕಮಲಗಳನ್ನು ಭಜಿಸುತ್ತಿರು ವನೋ ಅವನು ಮಾತ್ರ ನಿಜವಾದ ಸಂಸಾರಿಕನು. ಅವನಿಗೆ ಸಂಸಾರವು ಸಿಕ್ಕಿರುವ ದೆಂದು ತಿಳಿಯಬೇಕು.

ಇಂಥಪ್ರಪಂಚವನ್ನು ಮನುಷ್ಯನು ಅವಶ್ಯವಾಗಿ ಮಾಡಬೇಕು. ಇದ ರಿಂದ ಆತನಮನಸ್ಸು ಸಹಜವಾಗಿ ಸ್ಥಿತಪ್ರಜ್ಞಸ್ಥಿತಿಯನ್ನು ಹೊಂದುವದು. ವಿಷ ಯಸೇವನೆಯಲ್ಲಿ ನಿಯಮಿತತನ ಉಳಿಯುವದರಿಂದ ಅವನ ವಿಷಯಸೇವನೇಚ್ಛೆ ಯು ಕಾಲಕ್ರಮದಿಂದ ಕಡಿಮೆಯಾಗುವದು. ವಿಕಾರಗಳ ಪ್ರಾದುರ್ಭಾವವು ಅಳಿದು ಹೋಗುವದು. ಗೃಹಸ್ಥಾಶ್ರಮದ ಯೋಜನೆಯು ಮನುಷ್ಯನು ಧನ್ಯನಾಗುವ

ದಕ್ಕೋಸ್ಕರವಾಗಿಯೇ ಇರುತ್ತದೆ. ಆದರೆ ನಾವು ಆ ಆಶ್ರಮದಿಂದ ಧನ್ಯತೆಯನ್ನು ಪಡೆಯದೆ ಅಧಃಪತನವನ್ನು ಹೊಂದುತ್ತಿರುವೆವು. ಪ್ರಪಂಚವು ಪಾರಮಾರ್ಥಕ್ಕೆ ಸಹಾಯಕಾರಿಯಾಗಿರುತ್ತದೆ. ಇದನ್ನರಿತು ಯಾವನು ಪ್ರಪಂಚಮಾಡುವನೋ ಅವನು ಧನ್ಯನಾಗುವನು. ಮಹಾರಾಜ, ಈಗಿನಕಾಲದ ಸಾಂಸಾರಿಕರನ್ನು ನೋಡಿದರೆ ಮೈಗೆಮುಳ್ಳು ಬರುತ್ತದೆ, ಅವರಿಂದ ಎಷ್ಟು ಅನ್ಯಾಯಗಳು ಆಗುತ್ತಿರುತ್ತವೆಂಬದನ್ನು ನಿಮ್ಮಮುಂದೆ ಬಾಯಿಬಿಚ್ಚಿ ಹೇಳಬೇಕೆನ್ನುವಹಾಗಿಲ್ಲ; ಕೆಲವರ ಪ್ರಪಂಚವು ಹೀಗೆ ಪಾಪದ ಪ್ರತ್ಯಕ್ಷಮೂರ್ತಿಯಾಗಿರುತ್ತದೆ. ಇನ್ನು ಕೆಲವರು ನಿಜವಾದ ವಿರಕ್ತಿಯಿಲ್ಲದೆ ಯಾವದೋಒಂದು ತಾಮಸವೃತ್ತಿಯ ವಿಚಾರವನ್ನು ಮನದಲ್ಲಿ ತಂದು ಪ್ರಪಂಚವನ್ನು ತ್ಯಜಿಸಿ ಲೋಕದ ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಇವೆರಡು ಮಾರ್ಗಗಳು ನಿಜವಾದ ಪಾರಮಾರ್ಥಸಾಧನೆಗೆ ಬಾಧಕಗಳಿರುತ್ತವೆ. ಬುದ್ಧಿವಂತರಾದವರು ಇಂಥ ಅವಿವೇಕ ಸ್ಥಿತಿಯನ್ನು ತಂದುಕೊಳ್ಳಬಾರದು.

ಕಲಿಕಾಲದ ಮೂಲಕ ಜನರಿಗೆ ಪ್ರಪಂಚದ ರಹಸ್ಯವು ತಿಳಿಯದಾಗಿದೆ ಸಜ್ಜನರು ಉಪಾಧಿರಹಿತರಾಗಿದ್ದರೂ ಅಜ್ಞಾನಿಗಳಿಗೆ ಮಾರ್ಗವನ್ನು ತೋರಿಸುವದಕ್ಕಾಗಿಯೇ ಸಾಂಸಾರಿಕರ ವೇಷವನ್ನು ತಂದುಕೊಳ್ಳುವರು; ಪ್ರಪಂಚದಲ್ಲಿದ್ದು, ಪಾರಮಾರ್ಥವನ್ನು ಹ್ಯಾಗೆಸಾಧಿಸಬೇಕೆಂಬ ಗುರುಮಂತ್ರವನ್ನು ಅವರು ಜಗತ್ತಿಗೇ ಉಪದೇಶಮಾಡುವರು, ಅವರ ಈ ಉಪದೇಶವು ಕದ್ದುಮುಚ್ಚಿಯಾಗಿರದೆ ವಿಶ್ವದ ಜನರೆಲ್ಲರೂ ಕಣ್ಣುತೆರೆದು ನೋಡುವಂತೆ ಡಾಣಾಡಂಗುರವಾಗಿ ಇರುವದು. ಆದರೆ ಜನರು ಸಜ್ಜನರ ಸಂಸಾರವನ್ನು ಕಣ್ಣೆತ್ತಿ ನೋಡುವದಿಲ್ಲ; ಅವರು ಪ್ರಪಂಚಮಾಡುತ್ತಿದ್ದರೂ ಹ್ಯಾಗೆ ಸದಾನಂದವೃತ್ತಿಯಲ್ಲಿರುವರೆಂಬದನ್ನು ಪರೀಕ್ಷಿಸಿ ನೋಡುವದಿಲ್ಲ. ಕಣ್ಣುಗಳಿದ್ದೂ ಕುರುಡರಾಗುವರು. ಕಿವಿಗಳಿದ್ದೂ ಕಿವುಡರಾಗುವರು. ಹೀಗೆ ಮಾಡಿದರೆ ಯಾರಿಗೆ ಹಾನಿಯು? ಇದರಿಂದ ಸಜ್ಜನರಿಗೆ ಹಾನಿಯಿಲ್ಲವಷ್ಟೇ; ಯಾರು ಸಜ್ಜನರ ಪ್ರಪಂಚವನ್ನು ನೋಡಿ ತಮ್ಮ ವೃತ್ತಿಯನ್ನು ಸುಧಾರಿಸಿಕೊಳ್ಳುವದಿಲ್ಲವೋ ಅವರಿಗೇ ಹಾನಿಯು! ಅಪ್ಪಗಳಿರಾ, ಹಾಗೆ ಮಾಡಬೇಡಿರಿ. ಸಜ್ಜನರ ಪ್ರಪಂಚವನ್ನು ಕಣ್ಣೆತ್ತಿ ನೋಡಿರಿ! ತುಕಾರಾಮಾದಿ ಸಾಧುವರ್ಯರ ಸಂಸಾರದ ಸಂಗತಿಗಳನ್ನು ಕೇಳಿದರೆ ನಿಮಗೆ ಏನು ಬೋಧವಾಗುವದು? ಸಜ್ಜನರು ಸಿಕ್ಕಷ್ಟರಲ್ಲಿಯೇ ಸಂತುಷ್ಟರಾಗುವರು. ಯಾವಾಗಲೂ ಅವರು ಪರಮಾತ್ಮನನ್ನೇ ನಂಬಿರುವರು. ಪ್ರಾಣಿಗಳಿಗೆ ಹಿಂಸೆಕೊಟ್ಟು ತಮ್ಮ ವಿಷಯ ಸುಖವನ್ನು ಹೆಚ್ಚಿಸಿಕೊಳ್ಳಬೇಕೆಂಬ ಹಂಬಲವು ಅವರಿಗಿರುವದಿಲ್ಲ. ಯಾಕಂದರೆ ದೇಹವು ನಾಶವಂತವಿದ್ದು,

ಇದರಿಂದ ಆತ್ಮನಿಗೆ ಸುಖವಿಲ್ಲೆಂಬದು ಅವರಿಗೆ ಗೊತ್ತಿರುತ್ತದೆ, ಇರಲಿ; ಸಜ್ಜನರ ಸಂಪಾದನೆಯಲ್ಲಿ ಅನ್ಯಾಯವು ಎಂದೂ ಕಂಡು ಬರುವದಿಲ್ಲ. ಪ್ರಾಣಿಮಾತ್ರರಲ್ಲಿ ಅವರು ಸರ್ವದಾ ಪ್ರೇಮವನ್ನು ತಾಳುವರು. ದುಶ್ಚಿತ್ತವು ಅವರ ಸನಿಯಕ್ಕೆ ಸಹ ಸುಳಿಯಲಾರದು.

ಸಜ್ಜನರ ಸಂಸಾರವು ಈ ಎಲ್ಲ ಲಕ್ಷಣಗಳಿಂದ ಕೂಡಿರುವದು. ಇಂಥ ಪ್ರಪಂಚವು ಪಾರಮಾರ್ಥಕ್ಕೆ ಹ್ಯಾಗೆ ಬಾಧಕವಾಗುವದು? ಕುಂಬಾರಹುಳವು ಸಗಣಿಯಲ್ಲಿದ್ದರೂ ನಿರ್ಲಿಪ್ತವಿರುವಂತೆಯೂ ಕಮಲಪತ್ರವು ನೀರಲ್ಲಿದ್ದರೂ ನೀರನ್ನು ಮೈಗೆ ಹಚ್ಚಿಕೊಳ್ಳದಂತೆಯೂ ಇಂಥ ಪ್ರಪಂಚಿಕನು ಪ್ರಪಂಚದಲ್ಲಿದ್ದರೂ ನಿರುಪಾಧಿಕನಾಗಿರುವನು. ಅವನು ಯಾವಾಗಲೂ ಬ್ರಹ್ಮಾನಂದವನ್ನೇ ಅನುಭವಿಸುವನು. ಈ ಮಹತ್ತರವಾದ ಲಾಭವನ್ನು ಬಿಟ್ಟು ಪ್ರಪಂಚ-ಪಾರಮಾರ್ಥಗಳೆರಡೂ ಒಂದಕ್ಕೊಂದು ವಿರುದ್ಧವಿರುವವೆಂದು ಭ್ರಾಮಕ ಕಲ್ಪನೆಯನ್ನು ತಾಳುವದು ಮೌಢ್ಯತನವೆನಿಸುವದು. ಸಜ್ಜನರು ತಾವು ಪ್ರಾಪಂಚಿಕರಾಗಿರುವದಲ್ಲದೆ ತಮ್ಮ ಬಳಿಗೆ ಬಂದವರಿಗೂ ಪ್ರಪಂಚ ಮಾಡಿರೆಂದು ಉಪದೇಶ ಮಾಡುತ್ತಿರುವದರ ರಹಸ್ಯವನ್ನು ಎಲ್ಲರೂ ತಿಳಕೊಳ್ಳಬೇಕು. ಈ ಪ್ರಪಂಚ ಪಾರಮಾರ್ಥಗಳ ಏಕರೂಪವನ್ನು ತೋರಿಸುವದೇ ಸಜ್ಜನರ ಧರ್ಮವಾಗಿದೆ.

## ೧೩ನೆಯ ಪ್ರಕರಣ.

### ತಾರಾಬಾಯಿಯ ಪುಣ್ಯ.

ಸಜ್ಜನರು ಭಕ್ತರ ಸಲುವಾಗಿಯೇ ಹುಟ್ಟಿಬರುವರು. ಮಕ್ಕಳ ಆರ್ತಧ್ವನಿಯು ಕೇಳಿದ ಕೂಡಲೆ ತಾಯಿಯು ಸಾವಿರ ಕೆಲಸಗಳಿದ್ದರೂ ಬಿಟ್ಟು ಹ್ಯಾಗೆ ಮಕ್ಕಳೆಡೆಗೆ ಧಾವಿಸುವಳೋ ಹಾಗೆ ಪರಮಾತ್ಮನು ಭಕ್ತರ ಆರ್ತಧ್ವನಿಯನ್ನು ಕೇಳಿ ಸಜ್ಜನರ ರೂಪದಿಂದ ಪ್ರಕಟನಾಗಿ ಭಕ್ತರನ್ನು ಸಮಾಧಾನಗೊಳಿಸುವನು. ಪರ

ಮಾತ್ಮನಿಗೆ ಭಕ್ತರು ಇಂಥ ಜಾತಿಯವರೇ ಇರಬೇಕೆಂಬ ನಿಯಮವಿಲ್ಲ; ಯಾಕಂದರೆ ಪರಮಾತ್ಮನು ಭಕ್ತಿಯೊಂದನ್ನು ನೋಡುವನೇ ಹೊರತು ಕುಲಶೀಲಗಳನ್ನು ನೋಡುವದಿಲ್ಲ. ಕುಲಶೀಲಗಳ ವಿಚಾರಗಳು ಪರಮಾತ್ಮನಿಗೆ ಸಂಬಂಧವಿಲ್ಲ. ಗಿರಣಿಯಲ್ಲಿ ಸಿದ್ಧವಾದ ನೂಲಿಗೆ ಆ ಆ ನೂಲಿನ ಯೋಗ್ಯತೆಯಂತೆ ಅಂದರೆ ಅದರ ನಯ, ಹುರಿಕಟ್ಟು, ಜಿಗಟುತನ ಇವುಗಳ ಮಾನದಂತೆ ನಂಬರುಗಳು ಕೊಡಲ್ಪಡುವಂತೆ ಪರಮಾತ್ಮನ ಸೃಷ್ಟಿಕ್ರಮದಲ್ಲಿ ಹುಟ್ಟಿದ ಮನುಷ್ಯಪ್ರಾಣಿಗಳಿಗೂ ಅವುಗಳ ಗುಣ ಅಂದರೆ ಸತ್ವ-ರಜ-ತಮ ಗುಣಗಳ ಪ್ರಮಾಣದಂತೆ ನಂಬರು ಕೊಡಲ್ಪಡುವದು. ಈ ನಂಬರುಗಳ ಸಂಜ್ಞಾರೂಪವಾಗಿಯೇ ಜಾತಿವಾಚಕ ಶಬ್ದಗಳು ರೂಢವಾಗಿರುವವು. ಆದರೆ ಗಿರಣಿಯ ಯಜಮಾನನಿಗೆ ತನ್ನಲ್ಲಿ ಹುಟ್ಟಿದ ಎಲ್ಲ ನಂಬರುಗಳ ನೂಲೂ ಅವಶ್ಯವೂ ಪ್ರಿಯವೂ ಇರುವಂತೆ ಪರಮಾತ್ಮನಿಗೆ ಎಲ್ಲ ಜಾತಿಗಳೂ ಪ್ರಿಯವಿರುವವು. ಆದ್ದರಿಂದ ಆತನು ಭಕ್ತನು ಯಾವ ಜಾತಿಯಲ್ಲಿ ಹುಟ್ಟಿದ್ದರೇನು? ಅವನನ್ನು ಪ್ರೀತಿಸುವನು ಮತ್ತು ಅವನ ಸಲುವಾಗಿ ಜನ್ಮವ ತಾಳುವನು. ಗಜೇಂದ್ರನು ಪಶುವಾಗಿದ್ದರೂ ಆತನ ಅನನ್ಯ ಭಕ್ತಿಗೋಸ್ಕರ ಪರಮಾತ್ಮನು ವೈಕುಂಠವನ್ನು ತ್ಯಜಿಸಿ ಬರಬೇಕಾಯಿತು. ಯಾರಿಗೆ ಭಕ್ತಿಯ ರಹಸ್ಯವು ಅವಗತವಿರುವದೋ ಅವರಿಗೆ ಮಾತ್ರ ಪರಮಾತ್ಮನು ಹಲವು ಜಾತಿಯ ಭಕ್ತರಲ್ಲಿ ರಮಿಸುವದನ್ನು ನೋಡಿ ವಿಕಲ್ಪ ಉಂಟಾಗಲಾರದು. ಆದರೆ ಭಕ್ತಿಯ ರಹಸ್ಯವು ಗೊತ್ತಿಲ್ಲದವರಿಗೆ ಹ್ಯಾಗೆ ಹ್ಯಾಗೋ ಕಾಣುವದು.

ಕೃಷ್ಣಾವಧೂತರು ವೇಶ್ಯಾಂಗನೆಯ ಮನೆಯಲ್ಲಿ ವಾಸಮಾಡಿದ್ದಕ್ಕೆ ಹಲವರು ಹಲವು ಬಗೆಯ ಕಲ್ಪನೆಗಳನ್ನು ಮಾಡುತ್ತಿದ್ದರೆಂದು ಹಿಂದೆ ಹೇಳಿದೆಯಷ್ಟೇ; ತಾರಾಬಾಯಿಯ ಪುಣ್ಯಪ್ರಭಾವವನ್ನು ತಿಳಿಯದೆ ಜನರು ಈ ರೀತಿಯಾಗಿ ಗೊಂದಲದಲ್ಲಿ ಬೀಳುತ್ತಿದ್ದರು; ತಾರಾಬಾಯಿಯು ಕೀಳು ಕುಲದವಳಾಗಿದ್ದರೂ ಮತ್ತು ದುರ್ವ್ಯವಹಾರ ಪ್ರವರ್ತಕಳಾಗಿದ್ದರೂ ಆಕೆಯ ಪ್ರಾಚೀನ ಪುಣ್ಯವು ವಿಶೇಷವಾಗಿತ್ತು. ಆಕೆಯು ಯಾವ ಪಾಪಶೇಷದಿಂದಲೋ ಆ ನೀಚಕುಲದಲ್ಲಿ ಜನ್ಮವ ತಾಳಿದ್ದಳು. ಆಕೆಯು ಪುಣ್ಯಶಾಲಿನಿಯಾಗಿದ್ದರೂ ನೀಚಕುಲದಲ್ಲಿ ಹುಟ್ಟಿಸಿ ಆಕೆಯನ್ನುದ್ಧರಿಸಬೇಕೆಂಬದಾಗಿ ಭಗವತ್ ಸಂಕಲ್ಪವಿತ್ತೋ ಹೇಗೆಂಬದು ತಿಳಿಯದು! ಆಕೆಯು ತನ್ನ ಆಪನ್ನಿವಾರಣಾರ್ಥವಾಗಿ ಶ್ರೀ ದತ್ತನ ಮೊರೆಹೊಕ್ಕಳಷ್ಟೇ; ಭಗವತ್‌ಸಂಕಲ್ಪದಂತೆ ಶ್ರೀ ಕೃಷ್ಣಾವಧೂತರು ಆಕೆಯ ಆಪನ್ನಿವಾರಣ ಮಾಡಿದ ಬಳಿಕ ಅವಧೂತರ ವಿಷಯವಾಗಿ ಆಕೆಯಲ್ಲಿ ಹುಟ್ಟಿದ ಭಕ್ತಿಯು ದೃಢಮೂಲವಾಯಿತು. ಆಕೆಯು

ಅಚಲ ನಿಷ್ಠೆಯನ್ನು ನೋಡಿ ಅವಧೂತರಿಗೆ ಪರಮ ಹರುಷವಾಗುತ್ತಿತ್ತು. ಹೀಗೆ ಭಗವದ್ಭಕ್ತಿಯಿಂದ ಪುನೀತಳಾದ ತಾರಾಬಾಯಿಯು ಯಾವಾಗಲೂ ಆ ಮಹಾತ್ಮರ ಸೇವೆಯಲ್ಲಿಯೇ ನಿರತಳಾಗಿರುತ್ತಿದ್ದಳು. ಅವಳು ಸರ್ವದಾ ಅವಧೂತರ ನಾಮವನ್ನು ಉಚ್ಚರಿಸುವಳು. ಅವರ ಸೇವೆಯಲ್ಲಿ ದೇಹವನ್ನು ದಂಡಿಸುವಳು; ಮನಸ್ಸನ್ನಂತೂ ಆ ಮಹಾತ್ಮರ ಚರಣದಲ್ಲಿಯೇ ಅಚಲವಾಗಿ ಇರಿಸಿದ್ದಳು. ಅವಳ ಗಣಿಕಾವೃತ್ತಿಯು ಮಾಯವಾಯಿತು. ದೇಹವು ತುಚ್ಛವೆಂದು ಆಕೆಗೆ ಅನಿಸ ಹತ್ತಿತು. ವಿಷಯಸುಖವು ಭ್ರಾಮಕವೆಂದು ಅವಳು ನಿಶ್ಚಯವಾಗಿ ತಿಳಿದಳು. ಆ ಕಡೆಗೆ ಅವಳ ಮನಸ್ಸು ಪ್ರವೃತ್ತಿಯನ್ನು ಹೊಂದದಾಯಿತು. ತಾರಾಬಾಯಿಯಂಥ ಸಂಗೀತವಿಶಾರದಳೂ, ಸುಸ್ವರೂಪಿಣಿಯೂ, ತರುಣಿಯೂ ಈ ರೀತಿ ವೈರಾಗ್ಯವನ್ನು ಧರಿಸಿ ದ್ರವ್ಯ ಸಂಪಾದನೆಯ ಮಾರ್ಗವನ್ನು ತಿರಸ್ಕರಿಸಿದ್ದಕ್ಕೆ ಆಕೆಯ ಆಪ್ತೇಷ್ಟರು ಆಕೆಯನ್ನು ಹಳಿಯ ಹತ್ತಿದರು. ಆಕೆಯ ನಿಮಿತ್ತದಿಂದ ಆ ಮಹಾತ್ಮರಿಗೂ ಅವರು ಮನಬಂದಂತೆ ಬಯ್ಯುತ್ತಿದ್ದರು. ತಾರಾಬಾಯಿಯು ಯೋಗಿಗಳಿಗೂ ದುಷ್ಪ್ರಾಪ್ಯವಾದ ಪದವಿಯನ್ನು ಸಂಪಾದಿಸಿದಳೆಂಬದು ಪಾಪ! ಆ ವಿಷಯ ಲೋಲುಪ ಆಪ್ತೇಷ್ಟರಿಗೆ ಹ್ಯಾಗೆ ತಿಳಿಯಬೇಕು? ಈಲೋಕದಲ್ಲಿ ಬೇಕಾದಂಥ ದುಷ್ಕೃತ್ಯ ಮಾಡಿ ದ್ರವ್ಯ ಸಂಪಾದನೆ ಮಾಡಬೇಕು. ಮನಸೋಕ್ತವಾಗಿ ವಿಷಯಗಳನ್ನು ಪಶುತುಲ್ಯವಾಗಿ ಉಪಭೋಗಿಸಬೇಕು ಎಂಬ ವಿಚಾರಗಳಲ್ಲದೆ ಅನ್ಯವಿಚಾರಗಳು ಅವರಲ್ಲಿ ಹುಟ್ಟಲಾರವು. ದೇಹವು ಶಾಶ್ವತವೆಂದು ತಿಳಿದ ಅಂಥ ಜನರಿಗೆ ಪರತ್ರದ ತಿಳಿವಳಿಕೆಯಾದರೂ ಹ್ಯಾಗೆ ಆಗಬೇಕು?

ಇಹದಲ್ಲಿ ವಿಷಯಸುಖಕ್ಕೆ ಮೆಚ್ಚಿ ವಿಷಯಗಳಿಗೆ ಅಧೀನನಾಗಿ ನಡೆದರೆ ಮುಂದೆ ಪರಲೋಕದಲ್ಲಿ ಕಷ್ಟಕ್ಕೀಡಾಗಬೇಕಾಗುತ್ತದೆಂಬ ಅರಿವು ವಿಷಯಾಂಧರಿಗೆ ಉಳಿಯುವದಿಲ್ಲ. ವಿಷಯಾಂಧರ ಕಣ್ಣುಗಳು ತೆರೆಯಬೇಕೆಂದು ಪುರಾಣಗಳು ಪಾಪಿಗಳಿಗೆ ಪರಲೋಕದಲ್ಲಾಗುವ ಯಾತನೆಗಳನ್ನು ಸರಸವಾಗಿ ವರ್ಣಿಸುವವು. ಆ ಯಾತನೆಗಳನ್ನು ಕೇಳಿದ ಮಾತ್ರಕ್ಕೇ ಪ್ರಾಣಿಗಳ ಜೀವವು ನೆತ್ತಿಯಿಂದ ಹೋಗಬೇಕು. ಇಷ್ಟು ಉಗ್ರಶಾಸನಗಳು ಇರುವವೆಂಬದನ್ನು ಶ್ರವಣಮಾಡಿದ ಮನುಷ್ಯನು ಸ್ವಲ್ಪಾದರೂ ಹಾದಿಗೆ ಬರದೆ ಇರಲಾರನು. ಆದರೆ ಈಗಿನ ಕಾಲದಲ್ಲಿ ಪುರಾಣಶ್ರವಣವೇ ಅಭಾವವಾಗಿರುವದು. ಅಂದಬಳಿಕ ಮನುಷ್ಯಮಾತ್ರರಲ್ಲಿ ವಿಷಯಾಂಧತೆಯು ಭರದಿಂದ ಬೆಳೆಯಲಿಕ್ಕೆ ಏನೂ ತಡೆಯಿಲ್ಲದಂತಾಗಿರುವದು. ಇರಲಿ.

ತಾರಾಬಾಯಿಯು ಸಜ್ಜನರ ಸಂಗದಿಂದ ಪವಿತ್ರ ಮನಸ್ಸುಳ್ಳವಳಾಗಿದ್ದಳು. ಪವಿತ್ರವಾದ ಮನಸ್ಸು ಪವಿತ್ರಕಾರ್ಯಗಳಿಗೇ ಎಳೆಸುವದಲ್ಲದೆ ಅಪವಿತ್ರ ಕಾರ್ಯಗಳಿಗೆ ಎಳಿಸಲಾರದು. ಯಾರು, ಸರ್ವದಾ ಅಪವಿತ್ರಅರ್ಥಾತ್ ಪಾಪದ ಕಾರ್ಯಗಳಲ್ಲಿ ರತರಾಗಿರುವರೋ ಅವರ ಮನಸ್ಸು ಅಪವಿತ್ರವೆಂದೇ ಹೇಳಬೇಕು. ಇಷ್ಟೇ ಅಲ್ಲ ಅವರ ದೇಹವಾದರೂ ಅಪವಿತ್ರವೇ? ಅವರು ತ್ರಿಕಾಲ ಸ್ನಾನಮಾಡಿದರೇನು? ಬಹಿರಂಗದಲ್ಲಿ ಪವಿತ್ರ ವಸ್ತುಗಳನ್ನು ಧರಿಸಿದರೇನು? ಅವರಲ್ಲಿ ಪವಿತ್ರತೆಯು ಬರಲಾರದು. ಆದರೆ ತಾರಾಬಾಯಿಯು ಅಂತರಂಗ ಬಹಿರಂಗಗಳಲ್ಲಿಯೂ ಪವಿತ್ರಳಿದ್ದಳು. ಪರಿಸಮಣಿಯು ಲೋಹವನ್ನು ಸುವರ್ಣವಾಗ ಮಾಡುವಂತೆ ಅವಧೂತರ ಅನುಗ್ರಹವು ತಾರಾಬಾಯಿಯನ್ನು ಪವಿತ್ರವಾಗ ಮಾಡಿತು. ಮಹಾತ್ಮರ ಕೃಪೆಗೆ ಪಾತ್ರಳಾದ ತಾರಾಬಾಯಿಯ ಪುಣ್ಯವನ್ನು ಬಣ್ಣಿಸುವದೇ ಅಶಕ್ಯವು; "ಗಂಗಾ ಪಾಪಂ, ಶಶೀತಾಪಂ, ದೈನ್ಯಂ, ಕಲ್ಪತರುಸ್ತಥಾ! ಪಾಪಂ, ತಾಪಂಚ, ದೈನ್ಯಂಚ, ಸದ್ಯಃ, ಸಾಧುಸಮಾಗಮಾಃ" ಎಂಬ ಶ್ಲೋಕವು ಹೇಳುವಂತೆ ತಾರಾಬಾಯಿಯು ಪಾಪ, ತಾಪ, ದೈನ್ಯಗಳು ಸಮೂಲವಾಗಿ ನಾಶವಾಗಿದ್ದವು. ಆಕೆಯು ಕೇವಲ ಏದೇಹಸ್ಥಿತಿಯಿಂದಲೇ ಇರುತ್ತಿದ್ದಳು; ಆದರೂ ಸಜ್ಜನರ ಕೃಪೆಯು ಪಾಪಿಷ್ಠರನ್ನು ಕೂಡ ಹ್ಯಾಗೆ ಪಾವನರನ್ನಾಗ ಮಾಡುತ್ತದೆಂಬ ತಿಳಿವಳಿಕೆಯನ್ನು ಜನರು ತಂದುಕೊಳ್ಳಲಿಲ್ಲ. ತಾರಾಬಾಯಿಯ ವಿಷಯವಾಗಿ ಆಕೆಯ ಆಪ್ತರಂತೂ ಆಕೆಯನ್ನು ಬೈಯುವವ್ರತವನ್ನೇ ಹಿಡಿದಿದ್ದರು; ಆಕೆಯ ಘನತರವಾದ ಯೋಗ್ಯತೆಯು, ಅವಧೂತರ ಕೃಪೆಗೆ ಪಾತ್ರರಾದ ಬೇರೆ ಪುಣ್ಯವಂತರಿಗೆ ಮಾತ್ರ ಗೊತ್ತಾಗಿತ್ತು. ಸದ್ವಸ್ತುವಿನ ಬೆಲೆಯನ್ನು ಸದ್ವಸ್ತುವೇ ತಿಳಿಯುವದಲ್ಲದೆ ಅಸದ್ವಸ್ತುವು ತಿಳಿಯಲಾರದು.

ಅವಧೂತರು ಯಾವಾಗಾರೊಮ್ಮೆ ತಾರಾಬಾಯಿಯನ್ನು ಕುರಿತು— "ತಾರಾಬಾಯೀ, ನಿನ್ನ ಜನ್ಮವು ಸಫಲವಾಯಿತು. ನೀನು ಹುಟ್ಟಿದ ಕುಲಶೀಲಗಳನ್ನು ನೋಡಿದರೆ ಇಂಥ ಶ್ರೇಷ್ಠ ಫಲವು ನಿನಗೆ ಹ್ಯಾಗೆ ಸಿಕ್ಕಿತೆಂಬದು ಆಶ್ಚರ್ಯವಾಗುತ್ತದೆ. ಪೂರ್ವಜನ್ಮದಲ್ಲಿ ಯಾವ ಪುಣ್ಯವನ್ನು ಆಚರಿಸಿದ್ದಿಯೋ ಏನೋ ನಮಗಂತೂ ತಿಳಿಯದು" ಎಂದು ನುಡಿಯುತ್ತಿದ್ದರು. ಅವಧೂತರು ಈ ಬಗೆಯಾಗಿ ಹೊಗಳುವರೆಂದು ಆಕೆಯು ಹಿಗ್ಗುತ್ತಿರಲಿಲ್ಲ. ಆಕೆಯ ವೃತ್ತಿಯು ಕೇವಲ ಸ್ಥಿರವಾಯಿತು. ಆಕೆಗೆ ಎಲ್ಲಿ ನೋಡಿದರೂ ಅವಧೂತರೇ ಕಾಣುತ್ತಿದ್ದರು. ಅವಧೂತರು ಪ್ರತ್ಯಕ್ಷ ದತ್ತಮೂರ್ತಿಯೇ ಇರುವರೆಂಬ ಭಾವನೆಯು ಅವಳಲ್ಲಿ ದೃಢವಾಯಿತು. ಅವಳು ನವವಿಧ ಭಕ್ತಿಗಳನ್ನು ಆ ಮಹಾತ್ಮರಿಗರ್ಪಿಸಿ ಕೃತಾರ್ಥಳಾದಳು. ಅವ

ಧೂತರು ತಾರಾಬಾಯಿಗೆ ಈ ರೀತಿಯಾಗಿ ಅಖಂಡಾನಂದವನ್ನು ಒದಗಿಸಿಕೊಟ್ಟು ತಾವು ವೇಶ್ಯೆಯ ಮನೆಯಲ್ಲಿರುವರೆಂಬ ಲೋಕಾಪವಾದವನ್ನು ಹೊತ್ತುಕೊಂಡರು. ಮಹಾತ್ಮರು ಬುದ್ಧಿಪೂರ್ವಕ ಜನರಿಂದನಿಂದೆ ಮಾಡಿಸಿಕೊಳ್ಳುವರು. ಯಾಕಂದರೆ ಜನರಿಂದಹೊಗಳಿಸಿಕೊಂಡರೆ ಇಲ್ಲವೆ ಪೂಜಿತರಾಗಿಕೊಂಡರೆ ಪುಣ್ಯವು ಕ್ಷೀಣವಾಗುವದೆಂಬ ಹಾಗು ಜನರಿಂದ ನಿಂದೆಮಾಡಿಸಿಕೊಂಡರೆ ಪಾಪವು ಕ್ಷಯವಾಗಿ ಪುಣ್ಯವು ಸ್ಥಿರವಾಗುವದೆಂಬ ತತ್ವವನ್ನು ಜನರಿಗೆ ತೋರಿಸುವದು ಅವರ ಕರ್ತವ್ಯವಾಗಿರುವದು. ಇದಕ್ಕಾಗಿಯೇ ಅವರು ಬೂದಿಮುಚ್ಚಿದಕೆಂಡದಂತೆ ಗುಪ್ತವಾಗಿ ತಮ್ಮ ಸತ್ವವನ್ನು ಕಾಯ್ದುಕೊಂಡು ಬಹಿರಂಗದಲ್ಲಿ ಜನರನಿಂದೆಗೆ ಆಸ್ಪದಸಿಗುವಂತೆ ನಟಿಸುವರು; ಮಾಯಾತೀತರಾದ ಮಹಾತ್ಮರಿಗೆ ಮನುಷ್ಯರಂತೆ ವಿಷಯಗಳಲ್ಲಿ ಅಭಿಲಾಷೆಯುಂಟೇ ಎಂಬದನ್ನು ವಿಚಾರಿಸಲು ಶಕ್ತಿಸಾಲದೆ ನಿಂದಕರು ಮಹಾತ್ಮರನ್ನು ದೂಷಿಸಿ ದೋಷಕ್ಕೆ ಗುರಿಯಾಗುತ್ತಿರುವರು. ಇರಲಿ.

ಪ್ರಿಯವಾಚಕರೇ, ನಿಂದಕರು ಯಾವಾಗಲು ನಿಂದಕರೇ; ದೊಡ್ಡವರ ನಿಂದೆಯಿಂದ ಅವರಿಗೂ ಪರತ್ರದಲ್ಲಿ ಫಲವುಸಿಗುವದು. ಕೇವಲ ಪಾಪಿಷ್ಠಳಾದ ತಾರಾಬಾಯಿಯು ಸಜ್ಜನರ ಸಂಗದಿಂದ ಧನ್ಯಳಾದಳು. ಸದ್ಭಕ್ತರು ಆಕೆಯನ್ನು ಕೊಂಡಾಡಿದರು! ಅವಳು ತನ್ನಮನೆಯಲ್ಲಿದ್ದ ದ್ರವ್ಯವನ್ನು ಭಿಕ್ಷುಕರಿಗೆ ದಾನಮಾಡಿ ತನ್ನನಿರೀಚ್ಛೆಯನ್ನು ಜಗತ್ತಿಗೆ ತೋರಿಸಿಕೊಟ್ಟಳು. ಆಕೆಯು ಮುಂದೆ ಅಗ್ನಿದಗ್ಧವಾದ ಕಾಷ್ಠದಂತೆ ತನ್ನ ಶೇಷಾಯುಷ್ಯವನ್ನು ಕಳೆದಳು. ಈ ವೃತ್ತಿಯು ಯಾರಿಗ ಬರುವದೋ ಅವರಿಗೇ ಸಜ್ಜನರ ಕೃಪೆಯಾಗಿದೆಯೆಂದು ತಿಳಿಯಬೇಕು; ತಾರಾಬಾಯಿಗೆ ಈ ವೃತ್ತಿಯು ಲಭಿಸಿದ್ದರಿಂದ ಆಕೆಯಪುಣ್ಯವು ನಿಜವಾಗಿಯೂದೊಡ್ಡದು!!

## ೧೪ನೆಯ ಪ್ರಕರಣ.

### ಸಮಾಧಿ.

ಅವತಾರಿಕರಾದ ಸತ್ಪುರುಷರು ತಮ್ಮ ನಿರ್ದಿಷ್ಟ ಅವತಾರ ಕಾರ್ಯವು ನೆರವೇರಿದ ಬಳಿಕ ಒಂದು ಕ್ಷಣವಾದರೂ ಜಡದೇಹದಲ್ಲಿ ವಾಸಮಾಡುವದಿಲ್ಲ. ಯಾವದಾದರೊಂದು ಕಾರ್ಯಕ್ಕೋಸ್ಕರ ಧರಿಸಿದ ಪದಾರ್ಥವನ್ನು ಪ್ರಾಜ್ಞರು ಕೆಲಸ ಪೂರೈಸಿದಬಳಿಕ ಹ್ಯಾಗೆ ಆ ಪದಾರ್ಥವನ್ನು ಕೆಳಗಿಡುವರೋ ಹಾಗೆ ಸಜ್ಜನರು ನಿರಾಯಾಸವಾಗಿ ದೇಹವನ್ನು ತ್ಯಜಿಸುವರು. ಮಾನವೀ ಪ್ರಾಣಿಗಳಿಗೆ ದೇಹವನ್ನು ಬಿಡುವದೆಂದರೆ ಅತ್ಯಂತ ಕಷ್ಟದಾಯಕ ವಿರುತ್ತದೆ. ಹೊಲ, ಮನೆ, ಹೆಂಡಿರು, ಮಕ್ಕಳು, ದ್ರವ್ಯ, ಪಶು ಮೊದಲಾದವುಗಳಲ್ಲಿದ್ದ ಮೋಹವು ಹಿಡಿದೆಳೆಯುತ್ತಿರುವದರಿಂದ ಒಂದು ಕಡೆಗೆ ಮೋಹಪಾಶದ ಎಳತ, ಇನ್ನೊಂದು ಕಡೆಗೆ ಯಮಕಿಂಕರರ ಎಳತ ಇವುಗಳಲ್ಲಿ ಸಿಕ್ಕ ಆ ಮಾನವ ಪ್ರಾಣಿಯು ತೊಳಲಿ, ಬಳಲುವನು. ಆದರೆ ಈ ಯಾವ ಜಗ್ಗಾಟಗಳೂ ಸಜ್ಜನರಿಗಿರುವದಿಲ್ಲ. ವಿಷಯ ಮೋಹವು ಅವರನ್ನು ಮುಟ್ಟುವಹಾಗಿಲ್ಲ. ಯಮಕಿಂಕರರಂತೂ ಅವರ ಸನ್ನಿಧಿಕ್ಕೆ ಸುಳಿಯುವಹಾಗಿಲ್ಲ. ಸ್ವೇಚ್ಛೆಯಾಗಿ ಅವರೇ ತಮ್ಮ ಜಡದೇಹವನ್ನು ತ್ಯಜಿಸುವರು. ಜಡದೇಹವನ್ನು ತಾಳಲಿಕ್ಕೂ ತ್ಯಜಿಸಲಿಕ್ಕೂ ಸಜ್ಜನರು ಸರ್ವತಂತ್ರ ಸ್ವತಂತ್ರರಿರುವರು. ಅಂತೇ ಅವರಿಗೆ ನಿರ್ಯಾಣದ ಸಮಯದಲ್ಲಿ ಯಾವಬಗೆಯ ಕಷ್ಟವೂ ಆಗುವದಿಲ್ಲ. ವೇಷಧಾರಿಯು ತಾನು ಧರಿಸಿದವೇಷವನ್ನು ಕಳಚಿಚಲ್ಲಲು ಹಿಂದುಮುಂದೆನೋಡುವನೋ? ಎಂದಿಗೂ ನೋಡುವದಿಲ್ಲ. ಆ ವೇಷವನ್ನು ಕಳಚಿ ಚಲ್ಲುವದರಿಂದ ಅವನಿಗೆ ಯಾವ ಬಗೆಯ ಹಿಂಸೆಯೂ ಆಗುವದಿಲ್ಲ. ಯಾಕಂದರೆ ಈ ವೇಷವನ್ನು ತಾನೇ ಧರಿಸಿದ್ದೆಂಬದು ಅವನಿಗೆ ಗೊತ್ತಿರುತ್ತದೆ. ಇದೇ ಮಾತು ಸಜ್ಜನರ ನಿಧನಕ್ಕೆ ಹತ್ತುತ್ತದೆ. ಅವರು ನಿರ್ಯಾಣ ಸಮೀಪಿಸಿತೆಂದು ಹೊಟ್ಟೆಬೇನೆ ಹಚ್ಚಿಕೊಳ್ಳುವದಿಲ್ಲ. ಅಳುವದಿಲ್ಲ; ವ್ಯಸನಪಡುವದಿಲ್ಲ. ಆದ್ದರಿಂದ ಪುಣ್ಯವಂತರ ಪುಣ್ಯವನ್ನು ನೋಡಬೇಕಾದರೆ ಮರಣಸಮಯದಲ್ಲಿಯೇ ನೋಡಬೇಕು. ಇರಲಿ.

ನಮ್ಮ ಕೃಷ್ಣಾವಧೂತರು ಅರವತ್ತೈದು ವರುಷಗಳ ವರೆಗೆ ಭೂಲೋಕದಲ್ಲಿ ಅನಂತ ಲೀಲೆಗಳನ್ನು ಪ್ರಕಟಿಸಿ ಅನೇಕ ಜನ ಭಕ್ತರನ್ನು ಉದ್ಧರಿಸಿದರು. ಅವರ ಕೃಪಾಪ್ರಭಾವದಲ್ಲಿ ಬೆಳಗುವ ಜನರಿಗೆ ಭೂಲೋಕವು ಸಾಕ್ಷಾತ್ ವೈಕುಂಠವೋ, ಕೈಲಾಸವೋ ಎಂಬಂತೆ ತೋರುತ್ತ. ಹಲವರು ಸಂಸಾರದ ಸುಖ-ದುಃಖಗಳನ್ನು ಮರೆತು ಬ್ರಹ್ಮಾನಂದ ಸುಖಮಗ್ನರಾದರು; ಕೆಲವರು ಭಕ್ತಿಮಾರ್ಗದಲ್ಲಿ ಮುಂದಡಿಯಿಟ್ಟು ಪರಮಾತ್ಮನನ್ನು ಆರಾಧಿಸ ತೊಡಗಿದರು. ಈ ರೀತಿ ಭಕ್ತಿಸಾಮ್ರಾಜ್ಯವು ಬೆಳೆದು ಸಾಂಕೇತಿಕ ಕಾರ್ಯವು ಮುಗಿಯಲು, ಅವಧೂತರು ಮನಸ್ಸಿನಲ್ಲಿ ಯೋಚಿಸಿದರೇನಂದರೆ—''ಈ ದೇಹವು ಹುಟ್ಟಿ ಬಂದ ಕಾರ್ಯವಾಯಿತು. ಭಕ್ತರು ಪಕ್ವಸ್ಥಿತಿಯನ್ನು ಹೊಂದಿದರು. ಗೊತ್ತಾದ ಮೇರೆಗೆ ಭಕ್ತಿಸಾಮ್ರಾಜ್ಯವು ಹಬ್ಬಿತು. ನಾಸ್ತಿಕ ವಾದವು ಹಿಮ್ಮೆಟ್ಟಿತು. 'ಪುರಾಣಗಳು ಕಟ್ಟು ಕಥೆಗಳು, ಪಾಪ-ಪುಣ್ಯಗಳು ಸುಳ್ಳು' ಎಂದು ವಾದಿಸುವ ಜನರು ಸಂದಿ-ಗೊಂದಿಗಳಲ್ಲಿ ಅಡಗಿದರು. ಇನ್ನು ಮುಂದೆ ಈ ದೇಹವನ್ನು ತ್ಯಜಿಸುವುದು ಉತ್ತಮವು; ಅರವತ್ತೈದು ವರುಷಗಳ ವರೆಗೆ ಈ ದೇಹವು ನಟನ ಮಾಡಿದ್ದೇ ಹೆಚ್ಚಾಯಿತು.''

ಈ ಮೇರೆಗೆ ಯೋಚಿಸಿ ಅವಧೂತರು ಸನ್ನಿಧಿಯಲ್ಲಿರತಕ್ಕ ಭಕ್ತರನ್ನು ಕರೆದು—ಅಪ್ಪಗಳಿರಾ, ಇನ್ನು ಮುಂದೆ ಕಾಲವು ಕಠಿಣವಾಗುವದ. ಭಕ್ತಿಮಾರ್ಗದಿಂದ ನಡೆಯುವದರಲ್ಲಿ ತಪ್ಪಬಾರದು; ವಿಷಯಗಳ ಕಡೆಗೆ ಮನಸ್ಸು ಧಾವಿಸುವದು. ಮನಸ್ಸಿನ ಈ ಓಟವನ್ನು ತಡೆಯಬೇಕು. ಯಾರು ವಿಷಯ ಲೋಲುಪರಾಗುವರೋ ಅವರಿಗೆ ಸಂಕಟಗಳು ಒದಗುವವು. ಆದ್ದರಿಂದ ಭಕ್ತಶ್ರೇಷ್ಠರೇ, ಸದ್ಧರ್ಮದಿಂದ ನಡೆಯಿರಿ. ಅಖಂಡ ದತ್ತಭಜನೆಯನ್ನು ನಡಿಸಿರಿ. ನರದೇಹವನ್ನು ಸಾರ್ಥಕವಾಗ ಮಾಡಿರಿ; ದೊರಕಿದ ನರದೇಹವು ಪ್ರಾಚೀನಫಲವು; ಉದ್ಧಾರವಾಗಲಿಕ್ಕೆ ಇದು ತಕ್ಕ ಸಾಧನವು; ಇದು ಕಳೆದು ಹೋದಮೇಲೆ ನಾನಾ ಯೋನಿ ಭ್ರಮಣ ಮಾಡಬೇಕಾಗುವದು. ಇನ್ನು ಮುಂದೆ ಈ ದೇಹವು ನಿಮ್ಮ ದೃಷ್ಟಿಗೆ ಬೀಳಬಾರದು ಎಂದು ನುಡಿದರು.

ಅವಧೂತರ ಈ ಮಾತುಗಳನ್ನು ಕೇಳಿ ಭಕ್ತರು ದುಃಖಕ್ಕೊಳಗಾದರು. ಇನ್ನು ಮುಂದೆ ಶ್ರೀ ಅವಧೂತರು ದೇಹಬಿಡುವರೆಂದು ತಿಳಿದು ಆಗಲೇ ದೇಹಬಿಟ್ಟು ನಮ್ಮನ್ನು ಘೋರವಾದ ಕಲಿಸಾಮ್ರಾಜ್ಯದಲ್ಲಿ ದೂಡಬಾರದೆಂದು ಬೇಡಿಕೊಂಡರು. ಅವರನ್ನು ಅವಧೂತರು ಬಹು ಪರಿಯಿಂದ ಬೋಧಿಸಿ ಸಮಾಧಾನಗೊಳಿಸಿದರು. ಅವಧೂತರು ದೇಹಬಿಡುವರೆಂಬ ವಾರ್ತೆಯು ನಾಕೇಳಿ-ನೀಕೇಳು ಎಂದು

ಸುತ್ತಲೂ ಹರಡಿಕೊಂಡಿತು. ದೂರ-ದೂರದ ಭಕ್ತರು ಧಾವಿಸಿ ಬಂದರು. ಅವಧೂತರಲ್ಲಿ ಅನುರಕ್ತರಾದ ಹಲವು ಜನ ಭಕ್ತರು ವಿಷಾದಪಟ್ಟರು; ಕೆಲವರಂತೂ ಗೋಳಿಟ್ಟರು. ತಮ್ಮ ಬಳಿಗೆ ಬಂದ ಭಕ್ತರೆಲ್ಲರನ್ನೂ ಅವಧೂತರು ಮಧುರೋಕ್ತಿಗಳಿಂದ ಸಂತೈಸುತ್ತಿದ್ದರು. ಹೀಗೆ ಆಗಸ್ತ್ರ–ಆಗುಸ್ತ್ಯ ಶಾಲಿವಾಹನ ಶಕೆ ೧೮೨೨ ನೆಯ ಶ್ರಾವಣ ವದ್ಯ ದಶಮಿ ತಿಥಿಯು ಪ್ರಾಪ್ತವಾಯಿತು. ಅಂದು ಸೋಮವಾರವಿದ್ದು ಅತ್ಯಂತ ಶುಭಯೋಗವಿತ್ತು. ಈ ದಿವಸವನ್ನೇ ಅವಧೂತವರ್ಯರು ದೇಹ ಬಿಡಬೇಕೆಂದು ನಿರ್ಧರಿಸಿದರು.

ಆ ದಿವಸ ಅವರು ಪ್ರಾತಃಸ್ನಾನಾದಿಗಳನ್ನು ತೀರಿಸಿಕೊಂಡು ಹಟ್ಟಿಯಲ್ಲಿ ಹೋಗಿ ಗೋಮಾತೆಯನ್ನು ಪೂಜಿಸಿದರು; ಮತ್ತು ಅದಕ್ಕೆ ಸಮುಚಿತವಾದ ಆಹಾರ ಪದಾರ್ಥಗಳನ್ನು ತಿನ್ನಿಸಿ ಪ್ರೇಮದಿಂದ ಅದರ ಬೆನ್ನಮೇಲೆ ಕೈಯಾಡಿಸಿ—ತಾಯೀ, ಈ ದೇಹವು ಇಂದಿನವರೆಗೆ ನಿನ್ನ ಸೇವೆ ಮಾಡಿತು. ಇಂದಿಗೆ ನಿನ್ನ ಸೇವೆಯ ಋಣಾನುಬಂಧವು ಈ ದೇಹಕ್ಕೆ ತಪ್ಪಿತು; ಇನ್ನು ಮುಂದೆ ನಿನ್ನ ಸೇವೆಯನ್ನು ಯಥಾ ಕ್ರಮವಾಗಿ ಈ ವಿಷ್ಣ ತಾರಾಬಾಯಿಯು ನಡಿಸುವಳು. ಎಂದು ನುಡಿದು ಅದಕ್ಕೆ ಭಕ್ತಿಯಿಂದ ನಮಸ್ಕರಿಸಿ ತಾವು ಪ್ರತಿನಿತ್ಯ ಕೂಡತಕ್ಕ ಸ್ಥಳಕ್ಕೆ ಬಂದರು. ಆಗ ಅವರ ಮುಖಮುದ್ರೆಯು ಬಹು ಗಂಭೀರವಾಗಿತ್ತು. ಹಣೆಯಲ್ಲಿ ಶುಭ್ರ ವಿಭೂತಿಯು ಎದ್ದು ಕಾಣುತ್ತಿತ್ತು. ಭಾವಿಕರು ಅವರ ಭವ್ಯ ಮೂರ್ತಿಯನ್ನು ಮನಸಾರೆ ನೋಡಿದರು. ಬಳಿಕ ಅವಧೂತರು ಪದ್ಮಾಸನಸ್ಥರಾಗಿ ಕುಳಿತುಕೊಂಡು ಎಲ್ಲರನ್ನೂ ಪ್ರೇಮದಿಂದ ನೋಡಿ "ಬ್ರಹ್ಮಾಸ್ಮಿ" ಎಂದು ಉಚ್ಚರಿಸಿ ತತ್ಕಾಲದಲ್ಲಿ ಬ್ರಹ್ಮೈಕ್ಯರಾದರು!

ಪ್ರಿಯ ವಾಚಕರೇ, ಜಗತ್ತಿನಲ್ಲಿ ಅವತರಿಸಿ ಭಕ್ತರನ್ನು ಸಂತಸಗೊಳಿಸುತ್ತ ನಲಿದಾಡುತ್ತಿದ್ದ ಅವಧೂತ ವೇಷದ ದಿವ್ಯ ಜ್ಯೋತಿಯು ಮಾನವೀ ಕಣ್ಣುಗಳಿಗೆ ಮರೆಯಾಯಿತು. ಜನರು ಹಾಯ್! ಹಾಯ್! ಎಂದು ಗೋಳಿಟ್ಟರು. ಅವರ ಸದ್ಭಕ್ತರು ಮಾತ್ರ ಸಮಾಧಾನವೃತ್ತಿಯಿಂದ ಅವಧೂತರ ದೇಹತ್ಯಾಗವನ್ನು ನೋಡುತ್ತಿದ್ದರು. ಅವಧೂತರ ಹೃದಯವನ್ನು ಬಲ್ಲ ತಾರಾಬಾಯಿಯಂಥ ಸಾತ್ವಿಕ ಭಕ್ತರು ಸುಮ್ಮನಿರುವದನ್ನು ನೋಡಿ ಜನರು ಆಶ್ಚರ್ಯಚಕಿತರಾದರು. ಬಳಿಕ ಪರಮೋತ್ಸವದಿಂದ ಅವಧೂತರ ಜಡ ಶರೀರವನ್ನು ಸಮಾಧಿಗೊಳಿಸಿದರು. ಇಲ್ಲಿಯವರೆಗೆ ಅವಧೂತ ವೇಷದಿಂದಿದ್ದ ಆ ಪರಂಜ್ಯೋತಿಯು ಈಗ ಸಮಾಧಿರೂಪದಿಂದ ಭಕ್ತರನ್ನು ಸಂತೋಷಗೊಳಿಸಲಾರಂಭಿಸಿತು. ಭಾವಿಕರು ಸಮಾಧಿಯ ಪೂಜಾ

ಪುನಸ್ಕಾರಾದಿಗಳನ್ನು ಬಹು ವಿಜೃಂಭಣೆಯಿಂದ ನಡಿಸಿದರು. ಜನರ ಕಾಮನೆಗಳು ಪೂರ್ಣವಾಗತೊಡಗಿದವು. ಸಮಾಧಿ ರೂಪವನ್ನು ಹೊಂದಿದ ಬಳಿಕಾದರೂ ಅವಧೂತರು ತಮ್ಮ ಭಾವಿಕ ಭಕ್ತರಿಗೆ ದೃಷ್ಟಾಂತಗಳಿಂದಲೂ ಅವರ ಮನಃಕಾಮನೆಗಳ ಪೂರ್ಣದಿಂದಲೂ ಸಮಾಧಾನವನ್ನುಂಟು ಮಾಡತೊಡಗಿದರು. ಇಂದಿಗೂ ಆ ಮಹಾತ್ಮರ ಪವಿತ್ರ ಸಮಾಧಿಯು ಸದ್ಭಕ್ತರಿಂದ ಪೂಜೆಗೊಳ್ಳುತ್ತಿರುವದು!

# ೧೫ನೆಯ ಪ್ರಕರಣ.

## ಉಪಸಂಹಾರ.

ಪ್ರಿಯ ಪಾಠಕರೇ, ಅವಧೂತವರ್ಯರ ಚರಿತ್ರವನ್ನು ಉಪಲಬ್ಧವಿದ್ದಷ್ಟು ನಿಮ್ಮ ಬಳಿಯಲ್ಲಿ ವಿಜ್ಞಾಪಿಸಿಕೊಂಡದ್ದಾಯಿತು. ಅಗಾಧ ಮಹಿಮೆಯುಳ್ಳ ಮತ್ತು ಪರಬ್ರಹ್ಮನ ಅಂಶಸಂಭೂತರಾದ ಮಹಾತ್ಮರ ಚರಿತ್ರೆಯು ಅಂತವು ಯಾರಿಗೆ ಹತ್ತಬೇಕು? ಇರಲಿ.

ಅವಧೂತರ ಈ ಪ್ರಸ್ತುತ ಚರಿತ್ರವನ್ನು ಅವಲೋಕಿಸಿದರೆ ಶಾಂತಮನಸ್ಸಿನ ಹಾಗು ಆಸ್ತಿಕ ಬುದ್ಧಿಯುಳ್ಳ ಸಜ್ಜನರಿಗೆ ಹಲವು ಮಹತ್ವದ ಸಂಗತಿಗಳ ಬೋಧವಾಗುವದು. ಅವಧೂತರು ಸಾಮಾನ್ಯನಂತೆ ಇರುತ್ತಿದ್ದರು. ಪ್ರತಿಷ್ಠೆಯ ಗೊಂದಲದಲ್ಲಿ ಬೀಳುತ್ತಿದ್ದಿಲ್ಲ; ಆಚರಣೆಯು ಸಾದಾ, ಊಟ-ಉಡಿಗೆಗಳು ಸಾದಾ, ಮಾತುಕಥೆಗಳು ಸಾದಾ, ಅವರ ಯಾವ ಸಂಗತಿಗಳಲ್ಲಿಯೂ ಆಢ್ಯತೆಯು ಕಂಡು ಬರುತ್ತಿದ್ದಿಲ್ಲ. ಅವರ ಈ ಸಾದಾ ವರ್ತನದಿಂದ ಡಾಂಭಿಕ ವೃತ್ತಿಯು ಮತ್ತು ಶಾಠ್ಯವೃತ್ತಿಯು ನಾವು ಏನು ಬೋಧಗ್ರಹಣ ಮಾಡಬೇಕೆಂಬದನ್ನು ನಾವೇ ನಮ್ಮಲ್ಲಿ ವಿಚಾರಿಸಿಕೊಳ್ಳೋಣ; ಲೋಕದಲ್ಲಿ ಸಾದಾ ವರ್ತನವೇ ಕೊನೆಯವರೆಗೆ ತಾಳುತ್ತದೆ. ಮತ್ತು ಗೌರವವನ್ನು ಹೊಂದುತ್ತದೆ. ಮೂರು ದಿನ ಕುಣಿದು ಕೂಡ್ರಬೀಳುವದು ಸಜ್ಜನರ ಧರ್ಮವಲ್ಲ. ಆದ್ದರಿಂದ ಸಜ್ಜನರು ತಾವು ಈಶ್ವರಾಂಶರಾದರೂ ಯಾಕೆ ಕಿಂಕರ ಭಾವದಿಂದ ನಡೆಯುತ್ತಿರುವರೆಂಬದನ್ನು ಮರ್ಮವರಿತು ವಿಚಾರಿಸುವದು ಶ್ರೇಯಸ್ಕರವಾಗಿದೆ.

ಅವಧೂತರು ತಾವು ಪರಿಶುದ್ಧ ಮೂರ್ತಿಗಳಾಗಿದ್ದರೂ ಸಾಂಸಾರಿಕರ ಸಂಘದಲ್ಲಿ ವಾಸಿಸುತ್ತಿದ್ದರು. ಸಾಂಸಾರಿಕರನ್ನು ಪರಿಶುದ್ಧವಾಗ ಮಾಡುವದೇ ಇದಕ್ಕೆ ಕಾರಣವಾಗಿತ್ತು; ಗೋಪಾಳೆಯ ಪೂಜೆಯನ್ನು ಮಾಡುವದು, ಸರ್ವದಾ ದತ್ತ ಸ್ಮರಣೆಯನ್ನು ಮಾಡುವದು, ಇವೆಲ್ಲ ಕಾರ್ಯಗಳನ್ನು ಅವರು ಉದ್ಧಾರ ಮಾರ್ಗವು ಜನತೆಗೆ ಗೊತ್ತಾಗಬೇಕೆಂಬ ಲವಲವಿಕೆಯಿಂದ ಮಾಡುತ್ತಿದ್ದರು. ಯಾಕಂದರೆ, ಲೋಕದಲ್ಲಿ ಜನರಿಗೆ ಕಿಂಚಿತ್ ಧರ್ಮವು ತಿಳಿಯಬೇಕಾಗಿದ್ದರೆ ಸಜ್ಜನರಿಂದಲೇ ತಿಳಿಯಬೇಕಾಗುತ್ತದೆ. ಧರ್ಮಾಚರಣೆಯು ಭಾವನಾ

ಪ್ರಧಾನವಿದ್ದುದರಿಂದ ಸದ್ಭಾವನೆಯೆಂಬದು ಹ್ಯಾಗಿರುತ್ತದೆಂಬದನ್ನು ಮಹಾತ್ಮರು ಸತ್ಕರ್ಮಗಳನ್ನು ಆಚರಿಸಿ ತೋರಿಸುವರು. ಅವರು ಆಚರಿಸಿದ ಕರ್ಮಗಳನ್ನು ಮಾಡಲಿಕ್ಕೆ ಎಲ್ಲರಿಗೂ ಶಕ್ಯವಾಗದಿದ್ದರೂ ಆ ಸತ್ಕರ್ಮಗಳಲ್ಲಿಯ ಸದ್ಭಾವನೆಯು ಮಾತ್ರ ಸಾಧಿಸತಕ್ಕ ವಿಷಯವಾಗಿದೆ.

ಅವಧೂತರು ತಮ್ಮ ದೈವೀತೇಜಸ್ಸಿನಿಂದ ತೋರಿಸಿದ ಹಲವು ಅಮಾನುಷ ಕಾರ್ಯಗಳಲ್ಲಿ ಅಮೂಲಾಗ್ರವಾಗಿ ಲೋಕ ಹಿತವೇ ತುಂಬಿಕೊಂಡಿರುತ್ತದೆ. ಅನೀಶ್ವರ ವಾದವು ಲೋಕಕ್ಕೆ ಅಕ್ಷೇಮಕಾರಕವೂ ಈಶ್ವರವಾದವು ಕ್ಷೇಮಕಾಂಕವೂ ಇದ್ದು ಸರ್ವ ಸೃಷ್ಟಿ ಉತ್ಪತ್ತಿ ಶಕ್ತಿಯುಳ್ಳ ಪರಮೇಶ್ವರನು ಎಲ್ಲ ಕಾರ್ಯಗಳಿಗೂ ಸಾಕ್ಷೀಭೂತನಾಗಿ ಇರುವನೆಂಬದನ್ನು ತೋರಿಸುವದಕ್ಕಾಗಿಯೂ ಸತ್ಕರ್ಮಶೀಲರಿಗೆ ದೈವೀತೇಜಸ್ಸು ಬರುವದೆಂಬದನ್ನು ತೋರಿಸುವದಕ್ಕಾಗಿಯೂ ಅವಧೂತರು ಹೀಗೆ ಅಮಾನುಷ ಕಾರ್ಯಗಳನ್ನು ಮಾಡಬೇಕಾಯಿತು. ಅಮಾನುಷ ಕಾರ್ಯಗಳ ಅವಲೋಕನವಿಲ್ಲದಿದ್ದರೆ ಜನರಿಗೆ ದೈವೀತೇಜಸ್ಸಿನ ಗುರ್ತು ಆಗುವದಿಲ್ಲ. ಎಷ್ಟೋ ಜನರು ಜಡಸೃಷ್ಟಿಯು ತಾನೇ ಬೆಳೆಯುವದೆಂದು ತಿಳಿದು ನಿರ್ಭಯದಿಂದ ವ್ಯವಹರಿಸಹತ್ತುವರು. ನಮ್ಮನ್ನು ನೋಡತಕ್ಕ ಯಜಮಾನನು (ಈಶ್ವರನು) ಇರುವನೆಂಬ ಭಾವನೆಯಿದ್ದರೆ ಯಾರಾದರೂ ಭೀತಿಯನ್ನಿಟ್ಟುಕೊಂಡು ನಡೆಯುವರು. ಈ ಭೀತಿಯೇ ಮನುಷ್ಯನಲ್ಲಿ ಸದಾಚರಣೆಯನ್ನುಂಟುಮಾಡುವದು. ಆದ್ದರಿಂದ ಸಜ್ಜನರು ಮೊಟ್ಟಮೊದಲು ಈಶ್ವರನ ಅಸ್ತಿತ್ವವನ್ನು ಜನರ ನಿದರ್ಶನಕ್ಕೆ ತಂದುಕೊಟ್ಟು ಅವರ ಚಿತ್ತವನ್ನು ತಮ್ಮ ಕಡೆಗೆ ಬಗ್ಗಿಸಿಕೊಳ್ಳುವರು.

ಅವಧೂತರು ತಮ್ಮ ಶಿಷ್ಯರಿಗೆ ತಂದುಕೊಟ್ಟ ಅನುಭವವು ಬಹು ಮಹತ್ವದ್ದಿರುತ್ತದೆ. ಚಂಚಲ ಚಿತ್ತರಾದ ಶಿಷ್ಯರಿಗೆ ಸಂಚಾರಿತರಿಂದ ಪೆಟ್ಟು ಹಾಕಿಸಿದ್ದೂ ಹಳ್ಳದಲ್ಲಿ ಸ್ತ್ರೀಯನ್ನು ಹುಟ್ಟಿಸಿ ಶಿಷ್ಯರಿಂದೊಡಗೂಡಿ ಗ್ರಾಮಸ್ಥರ ಬಂಧನದಲ್ಲಿ ಸಿಕ್ಕಿದ್ದೂ ಸಾಧಕರಿಗೆ ವಿಶೇಷ ಬೋಧಪ್ರದವಾಗಿರುತ್ತವೆ. ಸಾಧಕನಾದ ವಿರಕ್ತನು ದ್ರವ್ಯಾಪೇಕ್ಷೆಯನ್ನು ತಾಳಬಾರದೆಂಬದು ಅವಧೂತರ ಖಂಡಿತ ಮತವಿತ್ತು. ದೈವವಶಾತ್ ದೊರೆತದ್ದನ್ನೇ ಸಾಧಕನು ಸ್ವೀಕರಿಸಬೇಕಲ್ಲದೆ ವಿಷಯ ಸುಖಕ್ಕಾಗಿ ಪ್ರಯತ್ನ ಮಾಡಲಾಗದೆಂದು ಅವರು ಹೇಳುತ್ತಿದ್ದರು. ಮತ್ತು ಹೀಗೆ ಬಯಸುವವನೇ ನಿಜವಾದ ವಿರಕ್ತನೆಂದೂ ಉಳಿದವರು ಡಾಂಭಿಕರೆಂದೂ ಸಾರುತ್ತಿದ್ದರು. ಅವಧೂತರ ಈ ಬೋಧವೂ ಮತ್ತು ಕೃತಿಯೂ ಈಗಿನ ಕಾಲದಲ್ಲಿ ಹೆಚ್ಚುತ್ತಿರುವ ವಿರಕ್ತರ ಪರೀಕ್ಷೆಗೆ ಒರೆಗಲ್ಲುಗಳಾಗಿವೆ.

ಸಾಮಾನ್ಯವಾಗಿ ತಿನಿಸು-ಉಣಿಸುಗಳಲ್ಲಿ ಸಹ ಅನಾಸ್ಥೆಯನ್ನು ತೋರಿಸದವರು ಅಥವಾ ಅವುಗಳನ್ನು ಮನಃಪೂರ್ವಕವಾಗಿ ಬಿಡದೆ ಇದ್ದವರು ತಮ್ಮ ವಿಷಯ ವಿರಕ್ತತೆಯನ್ನು ಜನರಲ್ಲಿ ಸಾರಹುವದೆಂದರೆ ಒಂದು ಬಗೆಯಿಂದ ಸಮಾಜ ದ್ರೋಹ ವೆಸಗಿದಂತೆಯೇ ಸರಿ! ಯಾಕಂದರೆ ಇವರ ಬಾಹ್ಯಾಚರಣೆಯಿಂದ ಜನರು ಮೋಸಹೋಗಿ ತಮ್ಮ ಕುಲ-ಶೀಲಗಳನ್ನು ಕಳೆದುಕೊಳ್ಳುವರು. ಇಂಥ ವಿರಕ್ತರನ್ನು ಪಲವೆಡೆಗಳಲ್ಲಿ ಕಾಣಬಹುದು ಆದ್ದರಿಂದಲೇ ತಮ್ಮ ಶಿಷ್ಯರಲ್ಲಿ ಅಂಥ ಬಹಿರಾಡಂಬರ ವಿರಕ್ತಿಯು ಉಳಿದು ಅಂತರಂಗವು ವಿಷಯ ಸುಖ ಸಂಪನ್ನವಾಗಬಾರದೆಂದು ಅವಧೂತರು ಅವರನ್ನು ಅರಣ್ಯಕ್ಕೆ ಕರೆದೊಯ್ದು ಅವರಿಗೆ ಅನುಭವವನ್ನು ತಂದುಕೊಟ್ಟರು.

ಮೋಹ ವರ್ಜಿತರಾದ ಅವಧೂತರು ತಮ್ಮ ತಂಗಿಯನ್ನು ಕುರಿತು ಮಾಡಿದ ಬೋಧವು ಇಡೀ ಚರಿತ್ರಕ್ಕೆ ಮುಕುಟಮಣಿಯಂತಿರುತ್ತದೆ. ಅದರಲ್ಲಿ ಅವಧೂತರ ಸರಳ ಹೃದಯ, ನಿಸ್ಪೃಹತೆ, ವಿಷಯ ವಿರಾಗಾದಿಗಳು ಸ್ಪಷ್ಟವಾಗಿ ಕಂಡು ಬರುತ್ತವೆ. ಅಹಾ! ದೊಡ್ಡವರ ಶೀಲವು ಎಂತಹದು ನೋಡಿರಿ! ಅವರು ತಮ್ಮ ನಿಂದಕರಿಗೂ ಸಹ ಶುಭವನ್ನುಂಟು ಮಾಡಿದರು. ಇವರು ನಿಂದಕರು ಇವರು ಸ್ತುತಿಪಾಠಕರು ಎಂಬ ಭೇದಭಾವವು ಅವರಲ್ಲಿರುವದಿಲ್ಲ, ಯಾಕೆಂದರೆ ಸಜ್ಜನರು ಪೂರ್ಣ ಪರಬ್ರಹ್ಮ ಸ್ವರೂಪರಾಗಿಯೇ ಇರುವರು. ಜಗತ್ತಿನಲ್ಲಿ ಅವರು ಬ್ರಹ್ಮನ ಹೊರತು ಅನ್ಯ ಪದಾರ್ಥಗಳನ್ನು ಕಾಣರು. ಅಂದ ಬಳಿಕ ಅವರಿಗೆ ಸಂತೋಷವಾಗಲಿ-ವ್ಯಸನವಾಗಲಿ ಹ್ಯಾಗೆ ಆಗಬೇಕು? ಯಾರಿಗೆ ವ್ಯಸನವಾಗುತ್ತದೆಯೋ ಅವರಿಗೆ ಸಂತೋಷವಾಗುತ್ತದೆಯೆಂದು ಹೇಳಬೇಕಾಗುವದು. ಯಾಕಂದರೆ ಸಂತೋಷ ವ್ಯಸನಗಳೆರಡೂ ವಿಕಾರಗಳಿರುತ್ತವೆ. ಸಜ್ಜನರ ಅವಸ್ಥೆಯು ನಿರ್ವಿಕಾರವಾಗಿದೆ. ವಿಕಾರ ರಹಿತವಾದ ಸಜ್ಜನರ ವೃತ್ತಿಗೆ ಯಾವ ಹೆಸರನ್ನೂ ಇಡುವದಕ್ಕೆ ಬರುವದಿಲ್ಲ. ಆದ್ದರಿಂದ ಅವರ ವೃತ್ತಿಯು ನಿಂದೆಯಿಂದ ಅಸಮಾಧಾನಕ್ಕೆ ಗುರಿಯಾಗುವದಿಲ್ಲ; ಸ್ತುತಿಯಿಂದ ಸಮಾಧಾನಕ್ಕೆ ಒಳಗಾಗುವದಿಲ್ಲ; ಸದಾ ಏಕರೂಪವಾಗಿರುವದು.

ಅವಧೂತರಿಗೆ ವೈದಿಕ ಕರ್ಮಮಾರ್ಗವನ್ನು ಪುನರುಜ್ಜೀವನ ಗೊಳಿಸುವದಕ್ಕೆ ಅವಶ್ಯಕತೆಯಿದ್ದಿಲ್ಲ. ಆದ್ದರಿಂದ ಅವರು ಕರ್ಮಮಾರ್ಗ ಪ್ರವರ್ತಕರಾಗಲಿಲ್ಲ. ಮುಖ್ಯವಾಗಿ ಅವರಿಗೆ ಉಚ್ಚ-ನೀಚ ವರ್ಣಗಳಲ್ಲಿ ಭಕ್ತಿಮಾರ್ಗವನ್ನೊಂದೇ ಪ್ರಸಾರಗೊಳಿಸುವದು ಅವಶ್ಯವಿತ್ತು. ಆದ್ದರಿಂದ ಅವರು ನೀಚ ಕುಲದವಳಾದ

ತಾರಾಬಾಯಿಯ ಗೃಹವನ್ನೇ ತಮ್ಮ ವಾಸಕ್ಕೆ ಉಕ್ತವೆಂದೆಣಿಸಿದರು. ಮತ್ತು ತಾರಾಬಾಯಿಯ ಉದ್ಧಾರ ಮಾಡಿ ಪತಿತಪಾವನರೆಂಬ ಹೆಸರನ್ನು ಧರಿಸಿದರು. ಜಗತ್ಪಾಲಕನಾದ ಪರಮಾತ್ಮನು ಕರ್ಮಕಾಂಡವನ್ನು ಸ್ಥಾಪಿಸುವಾಗ್ಗೆ ಶ್ರೇಷ್ಠಕುಲದಲ್ಲಿ ಹುಟ್ಟಿ, ಶ್ರೇಷ್ಠ ಸ್ಥಳದಲ್ಲಿ ವಾಸಮಾಡಿ, ವೇದಪ್ರತಿಪಾದಿತ ಶ್ರೇಷ್ಠ ಕರ್ಮಗಳನ್ನೇ ಮಾಡುತ್ತ ಲೋಕಪ್ರವೃತ್ತಿಯನ್ನು ಆ ಕಡೆಗೆ ತಿರುಗಿಸುವನು. ಬರಿಯ ಭಕ್ತಿಮಾರ್ಗವನ್ನು ಪ್ರಸ್ಥಾಪಿಸುವಾಗ್ಗೆ ಕರ್ಮಕಾಂಡದ ಗೊಡವೆಗೆ ಹೋಗದೆ, ಕುಲ ಗೋತ್ರಗಳ ವಿಚಾರವಿಲ್ಲದೆ ಎಲ್ಲಿ ಭಕ್ತರಿರುವರೋ ಅಲ್ಲಿ ಹುಟ್ಟಿ ಭಕ್ತರಿದ್ದಲ್ಲಿ ವಾಸಮಾಡಿ ಭಕ್ತಿಯ ಪ್ರಸಾರವನ್ನು ಮಾಡುವನು. ಆದ್ದರಿಂದ ಪರಮಾತ್ಮನು ಯಾವ ಕಾರ್ಯವನ್ನು ಮಾಡಿದರೂ, ಯಾವರೂಪದಿಂದ ಕಾಣಿಸಿಕೊಂಡರೂ, ಅವನ ಆ ಕಾರ್ಯವೂ, ಅವನ ಆ ರೂಪವೂ, ಲೋಕಕ್ಕೆ ಪೂಜ್ಯವಾದವುಗಳೇ ಸರಿ!

ಸಂಪೂರ್ಣಂ

